ಶುಕ್ರವಾರ, ಜನವರಿ 10, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 10 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ವರ್ಷಕ್ಕೆ ಎರಡು ಸಿನಿಮಾ ಮಾಡುತ್ತೇನೆ ಎಂದಿದ್ದಾರೆ ನಟ ಶರಣ್



ಸೆನ್ಸೆಕ್ಸ್	ನಿಫ್ಟಿ	₹/$
77,620	23,526	85.86

ಅರಣ್ಯ ಬಳಕೆ: ರಾಜ್ಯಕ್ಕೆ ಒಪ್ಪಿಗೆ

ಭದ್ರಾ ಮೇಲ್ದಂಡೆ ಯೋಜನೆ, ವಾರಾಹಿ ಜಲವಿದ್ಯುತ್ ಯೋಜನೆಗೆ ಅರಣ್ಯ ಬಳಸಿಕೊಳ್ಳಲು ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಷರತ್ತುಬದ್ಧ ಅನುಮತಿ ನೀಡಿದೆ. ವಾರಾಹಿ ಪಂಪ್ಡ್ ಸ್ಟೋರೇಜ್‌ನ ಸ್ಥಳ ಪರಿಶೀಲನೆಗೂ ಒಪ್ಪಿಗೆ ನೀಡಲಾಗಿದೆ. ಇದರಿಂದಾಗಿ ರಾಜ್ಯದ ಎರಡು ಪ್ರಮುಖ ಯೋಜನೆಗಳಿಗೆ ಹಸಿರು ನಿಶಾನೆ ಸಿಕ್ಕಂತಾಗಿದೆ. ಆದರೆ, ಮಹದಾಯಿ ಯೋಜನೆಯು ಸ್ಥಾಯಿ ಸಮಿತಿ ಸಭೆಯಲ್ಲಿ ಚರ್ಚೆಗೇ ಬರಲಿಲ್ಲ

ಭದ್ರಾ ಮೇಲ್ದಂಡೆಗೆ ಕೇಂದ್ರ ಅಸ್ತು



ಅಂಕಿ ಅಂಶ

136 ಚ.ಕಿ.ಮೀ.
ಚಿಂಕಾರ ವನ್ಯಜೀವಿ ಧಾಮದ ವಿಸ್ತೀರ್ಣ

157 ಚ.ಕಿ.ಮೀ.
ಪರಿಸರ ಸೂಕ್ಷ್ಮ ವಲಯದ ವಿಸ್ತೀರ್ಣ

18.5 ಚ.ಕಿ.ಮೀ.
ಡೀಮ್ಡ್ ಅರಣ್ಯ ಪ್ರದೇಶದ ವಿಸ್ತೀರ್ಣ

ಭದ್ರಾ ಮೇಲ್ದಂಡೆ ಯೋಜನೆಯಡಿ ಕಾಮಗಾರಿ ನಡೆಯುತ್ತಿರುವ ಪ್ರದೇಶ

● ಮಂಜುನಾಥ ಹೆಬ್ಬಾರ್

ನವದೆಹಲಿ: ತುಮಕೂರು ಜಿಲ್ಲೆಯಲ್ಲಿ ಭದ್ರಾ ಮೇಲ್ದಂಡೆ ಯೋಜನೆಯ ಕಾಲುವೆ ನಿರ್ಮಾಣಕ್ಕಾಗಿ ಬುಕ್ಕಾಪಟ್ಟಣ ಚಿಂಕಾರ ವನ್ಯಜೀವಿ ಧಾಮದ 128 ಎಕರೆ ಅರಣ್ಯ ಬಳಸಿಕೊಳ್ಳುವ ಪ್ರಸ್ತಾವನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸ್ಥಾಯಿ ಸಮಿತಿ ಷರತ್ತುಬದ್ಧ ಒಪ್ಪಿಗೆ ನೀಡಿದೆ. ಮೂಕಾಂಬಿಕಾ ಹಾಗೂ ಸೋಮೇಶ್ವರ ವನ್ಯಜೀವಿಧಾಮದಲ್ಲಿ ಸ್ಥಾಪನೆಗೊಳ್ಳಲಿರುವ ‘ವಾರಾಹಿ ಪಂಪ್ಡ್ ಸ್ಟೋರೇಜ್’ ಸರ್ವೆ ಹಾಗೂ ಸ್ಥಳ ಪರಿಶೀಲನೆಗೆ ಹಸಿರು ನಿಶಾನೆ ತೋರಿದೆ.

ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಡಿಸೆಂಬರ್ 21ರಂದು ನಡೆದ ಸ್ಥಾಯಿ ಸಮಿತಿಯ 81ನೇ ಸಭೆಯಲ್ಲಿ ಕರ್ನಾಟಕ ಸರ್ಕಾರದ ಎರಡು ಪ್ರಮುಖ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆ.

ಈ ಪ್ರಸ್ತಾವನೆಯು ಸ್ಥಾಯಿ ಸಮಿತಿಯ 79ನೇ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಕಾಲುವೆ ಆಜುಬಾಜಿನಲ್ಲಿ ಪ್ರಾಣಿಗಳ ಸಂಚಾರಕ್ಕೆ ಹಾದಿ ಹಾಗೂ ಹಾನಿ ಕಡಿಮೆಗೊಳಿಸುವ ಕ್ರಮಗಳ ಬಗ್ಗೆ ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ತಜ್ಞರಿಂದ ಪರಿಶೀಲನೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಪಾಶ್ಚಿಮಾತ್ಯ ದೇಶಗಳ ಹಾನಿ ಕಡಿಮೆಗೊಳಿಸುವ ಕ್ರಮಗಳ ಮಾದರಿಯನ್ನು ರಾಜ್ಯ ಸರ್ಕಾರ ಶಿಫಾರಸು ಮಾಡಿದೆ. ಇದು ನಮ್ಮ ದೇಶದ ಭೂಪ್ರದೇಶಕ್ಕೆ ಸೂಕ್ತವಾದುದು ಅಲ್ಲ ಎಂದು ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಅಭಿಪ್ರಾಯ ನೀಡಿತ್ತು.

ಸ್ಥಾಯಿ ಸಮಿತಿಯ 80ನೇ ಸಭೆಯಲ್ಲಿ ಪ್ರಸ್ತಾವನೆ ಕುರಿತು ಚರ್ಚಿಸಲಾಗಿತ್ತು. ವೈಲ್ಡ್ ಲೈಫ್ ಇನ್‌ಸ್ಟಿಟ್ಯೂಟ್‌ನ ತಜ್ಞರು ಸ್ಥಳ ಪರಿಶೀಲನೆ ನಡೆಸಿ ಒಂದು ತಿಂಗಳಲ್ಲಿ ವರದಿ ಸಲ್ಲಿಸಬೇಕು ಎಂದು ಸಭೆಯಲ್ಲಿ ಸೂಚಿಸಲಾಗಿತ್ತು. ಕಾಡುಪ್ರಾಣಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಕಾಲುವೆಯ ಪ್ರತಿ 500 ಮೀಟರ್‌ನಲ್ಲಿ ಅಗಲವಾದ ಮೇಲು ರಸ್ತೆ ನಿರ್ಮಿಸಬೇಕು.

9ನೇ ಪುಟ ನೋಡಿ

ವಾರಾಹಿ ಜಲವಿದ್ಯುತ್: 260 ಹೆಕ್ಟೇರ್‌ನಲ್ಲಿ ಸರ್ವೆ

ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ಪ್ರದೇಶ ಮತ್ತು ವನ್ಯಜೀವಿ ಧಾಮದೊಳಗೇ 1500 ಮೆಗಾವಾಟ್ ಉತ್ಪಾದನಾ ಸಾಮರ್ಥ್ಯದ ವಾರಾಹಿ ಪಂಪ್ಡ್ ಸ್ಟೋರೇಜ್ ವಿದ್ಯುತ್ ಯೋಜನೆ ತಲೆ ಎತ್ತಲಿದೆ. ಇದಕ್ಕಾಗಿ 260 ಹೆಕ್ಟೇರ್ (660 ಎಕರೆ) ಅರಣ್ಯದಲ್ಲಿ ಸರ್ವೆ ಹಾಗೂ ಸ್ಥಳ ಪರಿಶೀಲನೆ ನಡೆಸಲು ಸ್ಥಾಯಿ ಸಮಿತಿಯಿಂದ ಸಮ್ಮತಿ ಸಿಕ್ಕಿದೆ. ಈ ಯೋಜನೆ ಅನುಷ್ಠಾನಗೊಂಡರೆ ಸುಮಾರು 82 ಹೆಕ್ಟೇರ್ ಅರಣ್ಯಭೂಮಿಗೆ ಹಾನಿಯಾಗಲಿದೆ.

ರಾಜ್ಯ ಸರ್ಕಾರ, ರಾಜ್ಯ ವನ್ಯಜೀವಿ ಮಂಡಳಿ ಹಾಗೂ ಪಿಸಿಸಿಎಫ್ (ವನ್ಯಜೀವಿ) ಅವರು ಈ ಯೋಜನೆಯನ್ನು ಶಿಫಾರಸು ಮಾಡಿದ್ದಾರೆ.




ಕುಂದಾಪುರ ತಾಲ್ಲೂಕಿನಲ್ಲಿ ವಾರಾಹಿ ನೀರಾವರಿ ಯೋಜನೆಯಡಿ ನಿರ್ಮಾಣ ಹಂತದ ನೀರಾವರಿ ಕಾಲುವೆ

9ನೇ ಪುಟ ನೋಡಿ

ಕೊಡಚಾದ್ರಿಗೆ ಕೇಬಲ್ ಕಾರು: ₹375 ಕೋಟಿ ವೆಚ್ಚ

ಕರ್ನಾಟಕದ ಮೂಕಾಂಬಿಕಾ ರಾಷ್ಟ್ರೀಯ ಉದ್ಯಾನದಲ್ಲಿರುವ ಕೊಡಚಾದ್ರಿ ಬೆಟ್ಟದಲ್ಲಿ ರೋಪ್‌ವೇ (ಕೇಬಲ್ ಕಾರು) ಯೋಜನೆ ಅನುಷ್ಠಾನಗೊಳಿಸಲು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಸಿದ್ಧತೆ ನಡೆಸಿದೆ. 3.7 ಕಿ.ಮೀ ಉದ್ದದ ಈ ರೋಪ್‌ವೇಗೆ ಅಂದಾಜು ₹375 ಕೋಟಿ ವೆಚ್ಚವಾಗಲಿದೆ. ಯೋಜನೆ ಅನುಷ್ಠಾನದ ಸಂದರ್ಭದಲ್ಲಿ 28 ಎಕರೆ ಕಾಡು ಹನನವಾಗಲಿದೆ.

ರಮ್ಯ ಮನೋಹರವಾದ ಕೊಡಚಾದ್ರಿ ಬೆಟ್ಟ ತಲುಪುವುದೇ ಸಾಹಸ. ಕಡಿದಾದ ಹಾಗೂ ದುರ್ಗಮವಾದ ಹಾದಿಯಲ್ಲಿ ಜೀಪು ಹೊರತುಪಡಿಸಿ ಬೇರೆ ಯಾವ ವಾಹನವೂ ಸಾಗದು. ಕಡಿದಾದ ಬೆಟ್ಟದಲ್ಲಿ ಚಾರಣ ನಡೆಸುವ ಸಲುವಾಗಿ ಬರುವ ಪ್ರವಾಸಿಗರ ಸಂಖ್ಯೆ ದೊಡ್ಡದು. ರೋಪ್‌ವೇ ನಿರ್ಮಿಸಿದರೆ ಕೊಲ್ಲೂರಿನಿಂದ ಕೊಡಚಾದ್ರಿ ಬೆಟ್ಟಕ್ಕೆ ಸುಗಮ ಸಂಪರ್ಕ ಕಲ್ಪಿಸಬಹುದು ಎಂಬುದು ಹೆದ್ದಾರಿ ಸಚಿವಾಲಯದ ಆಲೋಚನೆ.



ಕೊಡಚಾದ್ರಿ

9ನೇ ಪುಟ ನೋಡಿ



ಬಂದ್...
ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಸಚಿವ ಅಮಿತ್ ಶಾ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ದಲಿತ ಸಂಘಟನೆಗಳ ಒಕ್ಕೂಟ ಬಂದ್‌ಗೆ ಕರೆ ನೀಡಿರುವುದಕ್ಕೆ ಪೂರಕವಾಗಿ ಹುಬ್ಬಳ್ಳಿಯ ಚನ್ನಮ್ಮ ವೃತ್ತದಲ್ಲಿ ಭಾರಿ ಪ್ರತಿಭಟನೆ ನಡೆಯಿತು
ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ನಕ್ಸಲರು ಶರಣಾದರು ಶಸ್ತ್ರಗಳು ಏನಾದವು?

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮುಖ್ಯವಾಹಿನಿಗೆ ಬಂದ ಆರು ನಕ್ಸಲರು ಈಗ ನ್ಯಾಯಾಂಗ ಬಂಧನದಲ್ಲಿದ್ದಾರೆ. ಅವರು ಶಸ್ತ್ರಗಳನ್ನು ಪೊಲೀಸರಿಗೆ ಒಪ್ಪಿಸಿಲ್ಲ. ಅವು ಈಗ ಎಲ್ಲಿವೆ ಎಂಬ ಪ್ರಶ್ನೆ ಉದ್ಭವಿಸಿದೆ.

ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯರು, ಶಾಂತಿಗಾಗಿ ನಾಗರಿಕ ಸಮಿತಿ ಸದಸ್ಯರು ಅವರನ್ನು ಕೊಪ್ಪ ತಾಲ್ಲೂಕಿನ ಮೇಗೂರು ಕಾಡಿನಿಂದಲೇ ಕರೆದುಕೊಂಡು ಬಂದರು. ಆ ವೇಳೆ ಅವರ ಬಳಿ ಶಸ್ತ್ರಗಳು ಇರಲಿಲ್ಲ. ಅವರನ್ನು ಮಾತ್ರ ನೇರವಾಗಿ ಬೆಂಗಳೂರಿಗೆ ಕರೆದೊಯ್ಯಲಾಗಿದ್ದು, ಶಸ್ತ್ರಗಳು ಕಾಡಿನಲ್ಲೇ ಉಳಿದಿವೆಯೇ ಪ್ರಶ್ನೆ ಎದುರಾಗಿದೆ.

ಉಡುಪಿ ಜಿಲ್ಲೆಯ ಪೀತಬೈಲು ಬಳಿ ನಕ್ಸಲ್ ನಿಗ್ರಹ ಪಡೆಯ ಎನ್‌ಕೌಂಟರ್‌ಗೆ ವಿಕ್ರಂಗೌಡ ಬಲಿಯಾಗಿದ್ದರು. ಆಗ ಅವರು ಹೊಂದಿದ್ದರು ಎನ್ನಲಾದ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದರು.

ಈಗ ಶಸ್ತ್ರ ತ್ಯಜಿಸಿ ಬಂದ ಆರು ನಕ್ಸಲರ ನಾಯಕಿ ಮುಂಡಗಾರು ಲತಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಮ್ಮ ಸಮವಸ್ತ್ರವನ್ನಷ್ಟೇ ಒಪ್ಪಿಸಿದ್ದಾರೆ. ಅದಕ್ಕೂ ಮುನ್ನ ಪೊಲೀಸರು ಕೂಡ ಶಸ್ತ್ರಗಳನ್ನು ವಶಕ್ಕೆ ಪಡೆದಿಲ್ಲ. ಈ ಕುರಿತು ಪ್ರತಿಕ್ರಿಯಿಸಿದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು, ‘ನಕ್ಸಲರು ಬರುವಾಗ ಯಾವುದೇ ಶಸ್ತ್ರಗಳನ್ನು ತಂದಿರಲಿಲ್ಲ. ಮುಂದಿನ ದಿನಗಳಲ್ಲಿ ಅವುಗಳನ್ನು ಪತ್ತೆಹಚ್ಚಿ, ವಶಕ್ಕೆ ಪಡೆಯಬೇಕಾಗುತ್ತದೆ’ ಎಂದರು.

ಶಸ್ತ್ರಾಸ್ತ್ರ ಬಚ್ಚಿಡುವ ಡಂಪ್‌ಗಳನ್ನು ಪತ್ತೆ ಮಾಡಲು ದಾರಿ ತೋರಿಸಿದರೆ ಅಥವಾ ಆ ಬಗ್ಗೆ ಮಾಹಿತಿ ನೀಡಿದರೆ ಅದಕ್ಕೂ ಪ್ರೋತ್ಸಾಹ ಧನ ನೀಡುವ ಪ್ರಸ್ತಾಪ ಶರಣಾಗತಿ ಪ್ಯಾಕೇಜ್‌ನಲ್ಲಿ ಇದೆ.

‘ಶಸ್ತ್ರಾಸ್ತ್ರ: ಪೊಲೀಸರಿಂದ ತನಿಖೆ’

ಬೆಂಗಳೂರು: ‘ನಕ್ಸಲರು ಶರಣಾದಾಗ ಶಸ್ತ್ರಾಸ್ತ್ರಗಳು ಇರಲಿಲ್ಲ. ಬಿಟ್ಟು ಬಂದಿದ್ದಾರೆ. ಎಲ್ಲಿ ಎಸೆದು ಬಂದಿದ್ದಾರೆ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸಲಿದ್ದಾರೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಕ್ಸಲರು ಮುಖ್ಯಮಂತ್ರಿಯವರ ಕಚೇರಿಗೆ ಬಂದು ಶರಣಾಗಿರುವುದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

‘ನಕ್ಸಲ್ ಚಟುವಟಿಕೆಗೆ ಬರಬಾರದು ಎಂಬ ಸಂದೇಶ ಇಡೀ ಸಮಾಜಕ್ಕೆ ತಲುಪಬೇಕು. ನಕ್ಸಲರ ಪರಿವರ್ತನೆಗೆ ಸರ್ಕಾರ ಅವಕಾಶ ಕೊಟ್ಟಿದೆ. ಅದರಲ್ಲಿ ತಪ್ಪೇನಿದೆ. ಬಿಜೆಪಿ ಶಾಸಕ ಸುನಿಲ್ ಕುಮಾರ್ ಕ್ಷೇತ್ರದಲ್ಲಿ ನಕ್ಸಲ್ ಚಟುವಟಿಕೆ ಜಾಸ್ತಿ ಇದೆ. ಎಎನ್‌ಎಫ್ ಕಾರ್ಕಳದಲ್ಲಿ ಇದೆಯಲ್ಲವೇ’ ಎಂದರು.

8ನೇ ಪುಟ ನೋಡಿ

‘ಮಹಿಳಾ ಸಂಘಕ್ಕೆ ಇಂದಿರಾ ಕ್ಯಾಂಟೀನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಕ್ಕ ಕಾಫಿ ಘಟಕ’ಗಳ ಮಾದರಿಯಲ್ಲೇ ಇಂದಿರಾ ಕ್ಯಾಂಟೀನ್‌ಗಳ ನಿರ್ವಹಣೆಯನ್ನು ಮಹಿಳಾ ಸ್ವಸಹಾಯ ಸಂಘಗಳಿಗೆ ವಹಿಸಿಕೊಡುವ ಕುರಿತು ಪ್ರಸ್ತಾವ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ಸರಬರಾಜು ಮಾಡಲು ಏಜೆನ್ಸಿಗಳಿಗೆ ಗುತ್ತಿಗೆ ನೀಡಲಾಗುತ್ತಿದೆ. ಏಜೆನ್ಸಿಗಳು ಸರಿಯಾಗಿ ನಿಭಾಯಿಸದ ಕಾರಣ ಕ್ಯಾಂಟೀನ್‌ಗಳನ್ನು ಆರಂಭಿಸಿದ ಉದ್ದೇಶ ಸಾಕಾರವಾಗುತ್ತಿಲ್ಲ. ಹಾಗಾಗಿ, ಮಹಿಳಾ ಸ್ವಸಹಾಯ ಸಂಘಗಳಿಗೆ ವಹಿಸಿಕೊಡುವುದೇ ಸೂಕ್ತ ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದರು.

ಆರ್ಥಿಕ ಚಟುವಟಿಕೆಗಳಲ್ಲಿ ಗ್ರಾಮೀಣ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಿಸಲು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮೀಣ ಮಹಿಳೆಯರಿಗೆ ಕೌಶಲ ತರಬೇತಿ ನೀಡಬೇಕು. ಕೌಶಲ ನೀಡಿಕೆ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಬೇಕು. ಉದ್ಯೋಗ ದೊರಕಿಸಲು ಕ್ರಮ ಕೈಗೊಳ್ಳಬೇಕು. ಯುವನಿಧಿ ಯೋಜನೆಯಡಿ ನೋಂದಣಿ ಮಾಡಿಕೊಂಡವರಿಗೂ ತರಬೇತಿ ನೀಡಬೇಕು. ಯುವ ನಿಧಿ ಯೋಜನೆಯಡಿ ಇದುವರೆಗೆ 1,97,060 ಅಭ್ಯರ್ಥಿಗಳು ನೋಂದಾಯಿಸಿದ್ದು, 1,61,883 ಫಲಾನುಭವಿಗಳಿಗೆ ₹216.38 ಕೋಟಿ ನಿರುದ್ಯೋಗ ಭತ್ಯೆ ನೀಡಲಾಗಿದೆ. ಅರ್ಹ ಅಭ್ಯರ್ಥಿಗಳ ನೋಂದಣಿ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಪ್ರಸ್ತುತ ಬಜೆಟ್‌ನಲ್ಲಿ ಕೌಶಲಾಭಿವೃದ್ಧಿ ಇಲಾಖೆಗೆ ₹1,864 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಇದುವರೆಗೆ ₹1,235 ಕೋಟಿ ವೆಚ್ಚವಾಗಿದೆ. ರಾಜ್ಯದಲ್ಲಿ 50 ವರ್ಷ ಪೂರ್ಣಗೊಳಿಸಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪಾರಂಪರಿಕ ಸಂಸ್ಥೆಗಳೆಂದು ಘೋಷಿಸಿ, ಉನ್ನತೀಕರಣಕ್ಕಾಗಿ ₹100 ಕೋಟಿ ಒದಗಿಸಲಾಗಿದೆ. ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು. ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿದ್ದ 20 ಸಾವಿರ ಐಟಿಐ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮತ್ತು ಸಂವಹನ ಕೌಶಲ ತರಬೇತಿ ನೀಡುವ ಕಾರ್ಯಕ್ರಮವನ್ನು ಶೀಘ್ರ ಅನುಷ್ಠಾನಗೊಳಿಸಬೇಕು ಎಂದು ತಿಳಿಸಿದರು.

ಶಂಭು ಗಡಿ: ಮತ್ತೊಬ್ಬ ರೈತ ಆತ್ಮಹತ್ಯೆ

ಪಟಿಯಾಲಾ (ಪಿಟಿಐ): ಶಂಭು ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ 55 ವರ್ಷದ ರೈತರೊಬ್ಬರು ಗುರುವಾರ ವಿಷಕಾರಿ ಪದಾರ್ಥ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಪ್ರತಿಭಟನಾ ಸ್ಥಳದಲ್ಲಿ ಮೂರು ವಾರಗಳಲ್ಲಿ ನಡೆದ ಎರಡನೇ ಘಟನೆ ಇದಾಗಿದೆ. ತರನ್‌ತಾರನ್ ಜಿಲ್ಲೆಯ ಪಹುವಿಂದ್‌ನವರಾದ ರೈತ ರೇಶಮ್ ಸಿಂಗ್ ಆತ್ಮಹತ್ಯೆಗೆ ಯತ್ನಿಸಿದ್ದರು. ಅವರನ್ನು ಪಟಿಯಾಲಾದ ರಾಜೇಂದ್ರ ಆಸ್ಪತ್ರೆಗೆ ಕೊರೆದೊಯ್ಯಲಾಯಿತು. ಆದರೆ, ಅಲ್ಲಿ ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು ಎಂದು ರೈತರು ತಿಳಿಸಿದ್ದಾರೆ.

ರೈತ ರಂಜೋದ್ ಸಿಂಗ್ ಡಿ.18ರಂದು ಶಂಭು ಗಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಗಡಿಯಲ್ಲಿ ರೈತರು ಸುಮಾರು ಒಂದು ವರ್ಷದಿಂದ ಪ್ರತಿಭಟನೆ ನಡೆಸುತ್ತಿದ್ದು, ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತ್ರಿಪಡಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಧನ ಸಂಗ್ರಹಕ್ಕೆ ಸಂಗೀತ ಸಂಜೆ ನಾಳೆ

ಬೆಂಗಳೂರು: ಬಡ ರೋಗಿಗಳ ಚಿಕಿತ್ಸೆಗೆ ನಿಧಿ ಸಂಗ್ರಹಿಸಲು ಸೇಂಟ್ ಮಾರ್ಥಾಸ್ ಆಸ್ಪತ್ರೆಯು ಇದೇ ಶನಿವಾರ ಸಂಜೆ 7 ಗಂಟೆಗೆ 'ಸೇಂಟ್ ಮಾರ್ಥಾಸ್ ಗಾಲಾ ನೈಟ್ ಮ್ಯೂಸಿಕ್ ಕಾನ್ಸರ್ಟ್' ಶೀರ್ಷಿಕೆಯಡಿ ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, 'ಆರ್ಥಿಕವಾಗಿ ಹಿಂದುಳಿದವರ ಚಿಕಿತ್ಸೆಗೆ ನೆರವು ಒದಗಿಸಲು ಸೇಂಟ್ ಮಾರ್ಥಾಸ್ ಆಸ್ಪತ್ರೆ ನಿರ್ಧರಿಸಿದೆ. ಗಾಯಕ ವಿಜಯ್ ಪ್ರಕಾಶ್ ಹಾಗೂ ತಂಡವು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದೆ' ಎಂದು ಹೇಳಿದರು.

ಆಸ್ಪತ್ರೆ ಸಾರ್ವಜನಿಕ ಸಂಪರ್ಕಾಧಿಕಾರಿ ಆ್ಯಂಟೊ ಡಿಯೋಲ್ ಉಪಸ್ಥಿತರಿದ್ದರು.

ಕರ್ನಾಟಕ ಲಲಿತಕಲಾ ಅಕಾಡೆಮಿಯಿಂದ 'ಮನೆಗೊಂದು ಕಲಾಕೃತಿ' ಯೋಜನೆ

18ರಿಂದ ಕಲಾಕೃತಿಗಳ ಪ್ರದರ್ಶನ, ಮಾರಾಟ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು 'ಮನೆಗೊಂದು ಕಲಾಕೃತಿ' ಯೋಜನೆಯಡಿ ಇದೇ 18ರಿಂದ 21ರವರೆಗೆ ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗ್ಯಾಲರಿಗಳಲ್ಲಿ ಆಯ್ದ 600 ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್, 'ಅಕಾಡೆಮಿಯು ಹಲವು ವರ್ಷಗಳಿಂದ ಯುವ ಕಲಾವಿದರಿಗೆ ತರಬೇತಿ, ಕಾರ್ಯಾಗಾರ, ಶಿಬಿರಗಳನ್ನು ನಡೆಸುಕೊಂಡು ಬರುತ್ತಿದೆ.

ಮುಖ್ಯಾಂಶಗಳು

- ಆಯ್ದ 600 ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ
- ಚಿತ್ರಕಲಾ ಪರಿಷತ್ತಿನ ಏಳು ಗ್ಯಾಲರಿಗಳಲ್ಲಿ ಪ್ರದರ್ಶನ ಆಯೋಜನೆ
- ಸಚಿವ ಶಿವರಾಜ ತಂಗಡಗಿಯಿಂದ ಪ್ರದರ್ಶನ ಉದ್ಘಾಟನೆ

ಈ ಅವಧಿಯಲ್ಲಿ ನೂರಾರು ಕಲಾವಿದರಿಂದ ಸಾವಿರಾರು ಕಲಾಕೃತಿಗಳು ರಚಿತವಾಗಿವೆ. ಅವುಗಳಲ್ಲಿ ಅತ್ಯುತ್ತಮವಾದ 600 ಕಲಾಕೃತಿಗಳನ್ನು ಆಯ್ಕೆ ಮಾಡಿ, ದರ ನಿಗದಿ ಮಾಡಲಾಗಿದೆ. ಈ ಪ್ರಕ್ರಿಯೆಗೆ ಪ್ರತ್ಯೇಕ ಸಮಿತಿ ರಚಿಸಲಾಗಿತ್ತು.



ಭಿನ್ನ ಮಾಧ್ಯಮ ಹಾಗೂ ಶೈಲಿಯ ಕಲಾಕೃತಿಗಳು ಪ್ರದರ್ಶನದಲ್ಲಿ ಕೈಗೆಟಕುವ ದರದಲ್ಲಿ ದೊರೆಯಲಿವೆ. ಕಲಾಸಕ್ತರು ಇದರ ಲಾಭ ಪಡೆದುಕೊಳ್ಳಬೇಕು

ಪ.ಸ.ಕುಮಾರ್
ಅಧ್ಯಕ್ಷ, ಕರ್ನಾಟಕ ಲಲಿತಕಲಾ ಅಕಾಡೆಮಿ

ಕಲಾಕೃತಿಯು ಮನೆಯ ಅಂದ ಹೆಚ್ಚಿಸುವ ಜತೆಗೆ ನಮ್ಮ ಮನಃಸ್ಥಿತಿ, ಅಭಿರುಚಿ, ಸಂವೇದನೆಯನ್ನು ಸದಾಕಾಲ ಪೋಷಿಸುತ್ತದೆ. ಆದ್ದರಿಂದ ಅತ್ಯಂತ ಕಡಿಮೆ ದರದಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಲಾಗುತ್ತಿದೆ. ಈ ಪ್ರದರ್ಶನವನ್ನು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಉದ್ಘಾಟಿಸುತ್ತಾರೆ' ಎಂದರು.

'ಪರಿಷತ್ತಿನ ಏಳು ಗ್ಯಾಲರಿಗಳಲ್ಲಿ ಈ ಪ್ರದರ್ಶನ ನಡೆಯಲಿದೆ. ಈ ಅವಧಿಯಲ್ಲಿಯೇ ಹಣ ಪಾವತಿಸಿ, ಕಲಾಕೃತಿಗಳನ್ನು ಕಾಯ್ದಿರಿಸಿಕೊಳ್ಳ ಬಹುದಾಗಿದೆ. ಡ್ರಾಯಿಂಗ್‌ಗಳಿಗೆ ₹1 ಸಾವಿರದಿಂದ ₹2 ಸಾವಿರ ನಿಗದಿ ಪಡಿಸಿದರೆ, ಪೇಂಟಿಂಗ್‌ಗಳಿಗೆ ₹3 ಸಾವಿರದಿಂದ ₹30 ಸಾವಿರದವರೆಗೆ ದರ ಗೊತ್ತುಪಡಿಸಲಾಗಿದೆ. 3x3 ಅಡಿವರೆಗಿನ ಅಳತೆಯ ಕಲಾಕೃತಿಗಳಿವೆ. ಪ್ರದರ್ಶನದಲ್ಲಿ ಇರುವ ಕಲಾಕೃತಿಗಳ ಒಟ್ಟು ಮೌಲ್ಯ ₹12 ಲಕ್ಷವಾಗಿದ್ದು, ಈ ಹಣವನ್ನು ಕಲಾ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಡಿಸಲು ಹಾಗೂ ಕಲಾಕೃತಿಗಳ ರಕ್ಷಣೆಗೆ ಬಳಸಿಕೊಳ್ಳಲಾಗುತ್ತದೆ. ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಲು 'ನಿಮ್ಮೊಂದಿಗೆ ನಾವು' ಸೇರಿ ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ವಿವರಿಸಿದರು.

ಅಕಾಡೆಮಿ ರಿಜಿಸ್ಟ್ರಾರ್ ಬಿ. ನೀಲಮ್ಮ, 'ಕಲಾಕೃತಿಗಳು ಕೈಗೆಟಕುವ ದರದಲ್ಲಿ ಸಿಗಬೇಕೆಂಬ ಉದ್ದೇಶದಿಂದ ಈ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಕಲಾ ಪರಂಪರೆ ಅನಾವರಣವಾಗುವ ಜತೆಗೆ ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಲು ಸಹಕಾರಿಯಾಗಲಿದೆ' ಎಂದರು.

ಕೆ.ದೊಮ್ಮಸಂದ್ರ: ₹20 ಲಕ್ಷ ವೆಚ್ಚದ ಕಾಮಗಾರಿಗಳಿಗೆ ಭೂಮಿಪೂಜೆ

ಕೆ.ಆರ್.ಪುರ: ಕೆ.ದೊಮ್ಮಸಂದ್ರದಲ್ಲಿ ಸೀಗೆಹಳ್ಳಿ ಗ್ರಾಮದ ಪಂಚಾಯಿತಿ ವ್ಯಾಪ್ತಿಯ ಬಡಾವಣೆಗಳಿಗೆ ಸೀಗೆಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯೆ ಜ್ಯೋತಿ ಲೋಕೇಶ್ ಅವರು ₹20 ಲಕ್ಷ ವೆಚ್ಚದಲ್ಲಿ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದರು.

ಸೀಗೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ವಿನಾಯಕ ಬಡಾವಣೆ, ಮುನೇಶ್ವರ ಬಡಾವಣೆ, ಸಾಯಿಸಿಟಿ ಬಡಾವಣೆ, ಶಿವಪ್ರಿಯ ಬಡಾವಣೆಗಳಲ್ಲಿ ಮೂಲಸೌಕರ್ಯಗಳ ಕೊರತೆಯಿತ್ತು. ಗ್ರಾಮ ಪಂಚಾಯಿತಿ ಅನುದಾನದಲ್ಲಿ ಕಾಂಕ್ರೀಟ್ ರಸ್ತೆ, ಕೊಳವೆಬಾವಿ, ಮಕ್ಕಳ ಆಟದ ಮೈದಾನ ನಿರ್ಮಿಸಲು ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಜ್ಯೋತಿ ಲೋಕೇಶ್ ಹೇಳಿದರು.

'ಕೆಲ ಬಡಾವಣೆಗಳಲ್ಲಿ ಮೂಲ ಸೌಕರ್ಯಗಳ ಕೊರತೆಯಿದ್ದು ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪರಿಹರಿಸಲಾಗುವುದು' ಎಂದರು.

ಬೆಂಗಳೂರು ರೇಸ್

ಡೆಲ್ ಅವಿಜ್ ಗೆಲ್ಲುವ ನಿರೀಕ್ಷೆ

ಜೆ.ಬಿ.ಮಲ್ಲಾರಾಧ್ಯ ಮೆಮೋರಿಯಲ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡೆಲ್ ಅವಿಜ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮಿಸ್ಟಿಕಲ್ ಏರ್ 4, ವ್ಯಾಸ 2
2ನೇ ರೇಸ್: ಸ್ಯಾಂಡ್ ಕ್ಯಾಸ್ಲ್ 3, ಡಬಲ್ ಸ್ಕಾಚ್ 5, ಕ್ಯೂವೆಗ 6
3ನೇ ರೇಸ್: ಡೊಮಿನ 5, ಇನ್ಫಿನೈಟ್ ಸ್ಪಿರಿಟ್ 3, ಫೈರ್‌ಫಿಂಚ್ 7
4ನೇ ರೇಸ್: ಖಜಾನ 7, ಹೆಜೆಲ್ 5, ಮ್ಯಾಗ್ನೆಟರ್ 2
5ನೇ ರೇಸ್: ಡೆಲ್ ಅವಿಜ್ 10, ಪವರ್ ಆಫ್ ಬ್ಯೂಟಿ 7, ನಾಟಿ ಪ್ಯಾಟನ್ 8
6ನೇ ರೇಸ್: ಬ್ಲೂ ಗಾಡ್ 1, ಆಸ್ಪೀಸಿಯಸ್ ಕ್ವೀನ್ 2, ಸೆಕ್‌ಮೆಟ್ 6
7ನೇ ರೇಸ್: ಎಬೋಟ್ಸೆ 4, ಇಸಾಬೆಲ್ಲೆ 5, ಓನ್ ಲೆಗಸಿ 2

ಉತ್ತಮ ಬೆಟ್: ಮಿಸ್ಟಿಕಲ್ ಏರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

17ರಿಂದ ವಚನ ಧ್ಯಾನ ಸಂಗಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿರಮಿಡ್ ಸ್ಪಿರಿಚ್ಯುವಲ್ ಸೊಸೈಟೀಸ್ ಮೂವ್‌ಮೆಂಟ್ ಭಾರತ (ಪಿಎಸ್‌ಎಸ್‌ಎಂ) ವತಿಯಿಂದ ಇದೇ 17ರಿಂದ 19ರವರೆಗೆ ಬಾಗಕೋಟೆ ಜಿಲ್ಲೆಯ ಕೂಡಲಸಂಗಮದ ಅನುಭವ ಮಂಟಪದಲ್ಲಿ 'ಕರ್ನಾಟಕ ಮಹಿಳಾ ಧ್ಯಾನ ಮಹಾಚಕ್ರ-2'ರ ವಚನ ಧ್ಯಾನ ಮಹಾಸಂಗಮ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಿಎಸ್‌ಎಸ್‌ಎಂ ಮುಖ್ಯಸ್ಥ ಶಿವರಾಮಪ್ಪ, 'ಉದ್ಘಾಟನೆ ಕಾರ್ಯಕ್ರಮದಲ್ಲಿ ಗುರುಮಾತೆ ಸ್ವರ್ಣಮಾಲಾ ಪತ್ರಿ, ಬಸವ ಧರ್ಮ ಪೀಠದ ಮಾತೆ ಗಂಗಾದೇವಿ, ಇಳಕಲ್ ವಿಜಯಮಹಾಂತೇಶ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ, ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯಮೃತ್ಯುಂಜಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದರು.

'ಪಿರಾಮಿಡ್ ಧ್ಯಾನದಿಂದ ಮನಸ್ಸಿಗೆ ನೆಮ್ಮದಿ, ಸಂತೋಷ ದೊರೆಯುತ್ತದೆ. ಧ್ಯಾನದಿಂದ ಆರೋಗ್ಯ ವೃದ್ಧಿ ಸೇರಿ ಹಲವು ಪ್ರಯೋಜನಗಳಿವೆ. ಧ್ಯಾನ ಸಂಗಮದಲ್ಲಿ ಭಾಗವಹಿಸಿದ ಎಲ್ಲರಿಗೂ ಉಚಿತ ಊಟ ಮತ್ತು ವಸತಿ ಒದಗಿಸಲಾಗುವುದು' ಎಂದು ತಿಳಿಸಿದರು.

'ಎನ್‌ಇ ಸೂಪರ್ ನೋವಾ 2.0' ವಿಜ್ಞಾನ ಪ್ರದರ್ಶನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಮೂಲಕ ಪ್ರತಿಭೆಗಳನ್ನು ಸೃಷ್ಟಿಸಬೇಕು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಎನ್‌ಇಎಸ್ ಶಿಕ್ಷಣ ಸಂಸ್ಥೆಯಲ್ಲಿ ದಿ ನ್ಯಾಷನಲ್ ಎಜುಕೇಶನ್ ಸೊಸೈಟಿ ಹಮ್ಮಿಕೊಂಡಿದ್ದ ವಿಜ್ಞಾನ ಪ್ರದರ್ಶನ ಎನ್‌ಇ ಸೂಪರ್ ನೋವಾ 2.0 ಉದ್ಘಾಟಿಸಿ ಅವರು ಮಾತನಾಡಿದರು.

'ಸರ್ಕಾರಿ ಶಾಲಾ ವಿದ್ಯಾರ್ಥಿಗಳಲ್ಲಿ ಅತ್ಯುತ್ತಮ ಪ್ರತಿಭೆಗಳಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಆಯೋಜಿಸುವ ವಿಜ್ಞಾನ ಮೇಳಗಳಲ್ಲಿ ಅತ್ಯುತ್ತಮ ವಿಜ್ಞಾನ ಮಾದರಿಗಳನ್ನು ನಿರ್ಮಿಸಿ ಪ್ರದರ್ಶಿಸುವುದನ್ನು ಕಂಡು ವಿಸ್ಮಯಗೊಂಡಿದ್ದೇನೆ. ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ. ಪ್ರತಿಭಾವಂತರಿಗೆ ವಿಜ್ಞಾನ ಪ್ರದರ್ಶನಗಳು ವೇದಿಕೆ ಒದಗಿಸಬೇಕು' ಎಂದು ಹೇಳಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, 'ವಿಜ್ಞಾನದಲ್ಲಿ ನೊಬೆಲ್ ಪುರಸ್ಕಾರ ಪಡೆಯುವಷ್ಟು ಪ್ರತಿಭೆಗಳಿವೆ. ಅವರಿಗೆ ಸರಿಯಾದ ಪ್ರೋತ್ಸಾಹ ನೀಡಬೇಕಿದೆ. ಕಲಿಕೆ ಅನುಭವ ಆಧರಿತವಾಗಿರಬೇಕು. ದುರದೃಷ್ಟಕರವೆಂದರೆ ವಿಜ್ಞಾನ ಕಲಿತಿದ್ದರೂ ದೈನಂದಿನ ಬದುಕು, ಕೆಲಸದಲ್ಲಿ ವೈಜ್ಞಾನಿಕ ಚಿಂತನೆ ಅಳವಡಿಸಿಕೊಂಡಿರುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.



ಎನ್‌ಇಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿಜ್ಞಾನ ಪ್ರದರ್ಶನ ಎನ್‌ಇ ಸೂಪರ್ ನೋವಾ 2.0 ಹಮ್ಮಿಕೊಳ್ಳಲಾಯಿತು

ಎನ್‌ಇಎಸ್ ಸಂಸ್ಥೆ ಕಾರ್ಯದರ್ಶಿ ವಿ. ವೆಂಕಟಶಿವಾರೆಡ್ಡಿ ಮಾತನಾಡಿ, 'ವಿಜ್ಞಾನ ಪ್ರದರ್ಶನ ವಿನೂತನವಾಗಿದ್ದು, ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಪದವಿವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ಇದು ಉತ್ತಮ ವೇದಿಕೆಯಾಗಿದೆ. ಈ ಬಾರಿ 350ಕ್ಕೂ ಅಧಿಕ ಮಾದರಿಗಳನ್ನು ಪ್ರದರ್ಶಿಸಲಾಗುತ್ತಿದೆ. ಭಾರತೀಯ ವಿಜ್ಞಾನ ಮಂದಿರ, ನೆಹರೂ ತಾರಾಲಯ, ನಿಮ್ಹಾನ್ಸ್ ಒಳಗೊಂಡಂತೆ 60ಕ್ಕೂ ಅಧಿಕ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದಾರೆ' ಎಂದು ವಿವರ ನೀಡಿದರು.

ಸಂಸ್ಥೆಯ ಅಧ್ಯಕ್ಷ ಎಚ್.ಎನ್. ಸುಬ್ರಮಣ್ಯ, ಉಪಾಧ್ಯಕ್ಷ ವೈ.ಜಿ. ಮಧುಸೂಧನ್, ಕಾರ್ಯದರ್ಶಿ ಬಿ.ಎಸ್. ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿ ಸುಧಾಕರ್ ಇಸ್ತೂರಿ, ಸಹ ಉಪಾಧ್ಯಕ್ಷ ವಿ. ಮಂಜುನಾಥ್, ಪಿ.ಎಲ್. ವೆಂಕಟರಾಮ ರೆಡ್ಡಿ, ರಾಮ್ ಮೋಹನ್ ಕೆ.ಎನ್. ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಇಂದು ವೈಕುಂಠ ಏಕಾದಶಿ ಸಂಚಾರ ಮಾರ್ಗ ಬದಲು

ಬೆಂಗಳೂರು: ವೈಕುಂಠ ಏಕಾದಶಿ ಪ್ರಯುಕ್ತ ಶುಕ್ರವಾರ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿರುವ ಇಸ್ಕಾನ್ ಹಾಗೂ ಜೆ.ಪಿ.ನಗರದ ತಿರುಮಲಗಿರಿ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುವುದರಿಂದ ಸಂಚಾರ ದಟ್ಟಣೆ ನಿವಾರಿಸಲು ಮಾರ್ಗ ಬದಲಾವಣೆ ಮಾಡಲಾಗಿದೆ.

ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸೋಪ್ ಫ್ಯಾಕ್ಟರಿ ಜಂಕ್ಷನ್‌ನಿಂದ ನಂದಿನಿ ಲೇಔಟ್, ಮಹಾಲಕ್ಷ್ಮೀ ಲೇಔಟ್, ವಿಜಯನಗರ ಕಡೆ ಹೋಗುವವರು ಸೋಪ್ ಫ್ಯಾಕ್ಟರಿ ಜಂಕ್ಷನ್‌ನಲ್ಲಿ ಡಾ.ರಾಜ್ ಕುಮಾರ್ ರಸ್ತೆಯಲ್ಲಿ ಸಾಗಿ, 10ನೇ ಕ್ರಾಸ್‌ನಲ್ಲಿ ಬಲ ತಿರುವು ಪಡೆದು 1ನೇ ಬ್ಲಾಕ್ ರಾಜಾಜಿನಗರ ಸಿಗ್ನಲ್‌ನಲ್ಲಿ ವೆಸ್ಟ್ ಆಫ್ ಕಾರ್ಡ್ ರಸ್ತೆ ಸೇರಬೇಕು.

ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಸೋಪ್ ಫ್ಯಾಕ್ಟರಿ ಜಂಕ್ಷನ್‌ನಿಂದ ಮಹಾಲಕ್ಷ್ಮೀ ಮೆಟ್ರೊ ನಿಲ್ದಾಣದವರೆಗೆ 'ಪಿಕ್‌ಅಪ್' ಮತ್ತು 'ಡ್ರಾಪ್' ನಿಷೇಧಿಸಲಾಗಿದೆ.

ಜಯನಗರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ 21ನೇ ಮುಖ್ಯ ರಸ್ತೆ ಜಂಕ್ಷನ್‌ನಿಂದ 17ನೇ ಮುಖ್ಯ ರಸ್ತೆ ಜಂಕ್ಷನ್‌ವರೆಗೆ ವಾಹನ ಸಂಚಾರ ನಿಷೇಧಿಸಲಾಗಿದೆ.

ಬದಲಿ ಮಾರ್ಗ: ಆರ್.ವಿ. ಡೆಂಟಲ್ ಕಾಲೇಜು ಕಡೆಯಿಂದ ಬರುವ ಭಕ್ತರು 23ನೇ ಕ್ರಾಸ್‌ನಲ್ಲಿ ಎಡ ತಿರುವು ಪಡೆದು ದುರ್ಗಾಪರಮೇಶ್ವರಿ ಆಟದ ಮೈದಾನದಲ್ಲಿ ವಾಹನಗಳ ನಿಲುಗಡೆ ಮಾಡಬೇಕು.

ಆರ್.ವಿ.ಡೆಂಟಲ್ ಕಾಲೇಜು ಕಡೆಯಿಂದ 8ನೇ ಮುಖ್ಯ ರಸ್ತೆ, 9ನೇ ಕ್ರಾಸ್ ರಸ್ತೆ ಜಂಕ್ಷನ್ ಕಡೆಗೆ ಸಂಚರಿಸುವವರು 21ನೇ ಮುಖ್ಯ ರಸ್ತೆಯಲ್ಲಿ ಎಡತಿರುವು ಪಡೆದು 7ನೇ ಕ್ರಾಸ್ ರಸ್ತೆ ಮೂಲಕ ಸಾಗಬೇಕು ಎಂದು ಪೊಲೀಸರು ತಿಳಿಸಿದ್ದಾರೆ.

'ಮಧುಮೇಹದಿಂದ ಮುಕ್ತಿ' ಬಿಡುಗಡೆ



ಬೆಂಗಳೂರು: 'ಆರೋಗ್ಯ ಕಾಪಾಡಿಕೊಳ್ಳುವಲ್ಲಿ ಆಹಾರ ಮತ್ತು ಜೀವನ ಕ್ರಮ ಅತ್ಯಂತ ಮುಖ್ಯವಾದುದು. ಇವೆರಡರ ಮಧ್ಯೆ ಸಮತೋಲನ ಸಾಧಿಸಿದರೆ, ಹಲವು ರೋಗಗಳನ್ನು ದೂರವಿಡಬಹುದು' ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದರು.

ನಾರಾಯಣ ನೇತ್ರಾಲಯವು ಇಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಭುಜಂಗಶೆಟ್ಟಿ ಅವರ 'ಮಧುಮೇಹದಿಂದ ಮುಕ್ತಿ' ಪುಸ್ತಕವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಮ್ಮ ಆಹಾರದಿಂದ ಕಾರ್ಬೋಹೈಡ್ರೇಟ್‌ಗಳು ಮತ್ತು ಸಕ್ಕರೆ ಅಂಶವನ್ನು ದೂರವಿಟ್ಟರೆ ಮಧುಮೇಹ, ರಕ್ತದೊತ್ತಡ ಸಮಸ್ಯೆಗಳನ್ನು ಹೇಗೆ ದೂರವಿಡಬಹುದು ಎಂದು ಪುಸ್ತಕದಲ್ಲಿ ವಿವರಿಸಿದ್ದಾರೆ' ಎಂದರು.

ನಾರಾಯಣ ನೇತ್ರಾಲಯದ ಉಪಾಧ್ಯಕ್ಷ ಡಾ.ನರೇನ್ ಶೆಟ್ಟಿ, 'ಭುಜಂಗ ಶೆಟ್ಟಿ ಅವರು ತಮ್ಮ ಮೇಲೆಯೇ ಪ್ರಯೋಗಿಸಿ, ಯಶಸ್ವಿಯಾದರು. ಆ ಆಹಾರ ಕ್ರಮವನ್ನೇ ಇತರರಿಗೆ ಸೂಚಿಸಿದರು' ಎಂದರು.

ಮಾರ್ಚ್‌ಗೆ ಪೌರಕಾರ್ಮಿಕರಿಗೆ ನೇಮಕಾತಿ ಆದೇಶ: ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತಿಮ ಆಯ್ಕೆ ಪಟ್ಟಿಯಲ್ಲಿರುವ ಪೌರ ಕಾರ್ಮಿಕರಿಗೆ ಮಾರ್ಚ್ ಅಂತ್ಯದೊಳಗೆ ನೇಮಕಾತಿ ಆದೇಶ ನೀಡಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಐ.ಪಿ.ಡಿ ಸಾಲಪ್ಪ ಅವರ ಜನ್ಮ ದಿನದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೌರ ಕಾರ್ಮಿಕರನ್ನು ಕಾಯಂ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಪೊಲೀಸ್ ತಪಾಸಣೆ, ಮೀಸಲಾತಿ ಪ್ರಮಾಣಪತ್ರಗಳ ಸಿಂಧುತ್ವ ತಪಾಸಣೆ ನಡೆಯುತ್ತಿದೆ. ಈ ಎಲ್ಲ ಪ್ರಕ್ರಿಯೆಗಳನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಿ, ಆದೇಶ ಪತ್ರ ವಿತರಿಸಲಾಗುವುದು ಎಂದು ತಿಳಿಸಿದರು.

'ಐ.ಪಿ.ಡಿ ಸಾಲಪ್ಪ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಬಿನ್ನಿಪೇಟೆಯಿಂದ ಶಾಸಕರಾಗಿದ್ದ ಅವರು, ಪೌರ ಕಾರ್ಮಿಕರ ಜೀವನದ ಸ್ಥಿತಿಗತಿಗಳನ್ನು ಬಹಳ ಹತ್ತಿರದಿಂದ ಅರಿತಿದ್ದರು. ಸಾಲಪ್ಪನವರು 36 ಅಂಶಗಳ ವರದಿಯನ್ನು ಸರ್ಕಾರಕ್ಕೆ ನೀಡಿದರು. ಐ.ಪಿ.ಡಿ. ಸಾಲಪ್ಪ ವರದಿಯ ಅಧಾರದ ಮೇಲೆ ಪೌರಕಾರ್ಮಿಕರಿಗೆ ಎಲ್ಲಾ ಸೌಲಭ್ಯಗಳು ಸಿಗುತ್ತಿವೆ' ಎಂದರು.

ನಾಗರಿಕರು ರಸ್ತೆ ಬದಿ ಕಸ ಬಿಸಾಡುತ್ತಾರೆ. ಅದನ್ನು ಪೌರಕಾರ್ಮಿಕರೇ ಸ್ವಚ್ಛಗೊಳಿಸಬೇಕಿದೆ. ಮನೆ-ಮನೆಯಿಂದ ಕಸ ಸಂಗ್ರಹಿಸುವ ಪದ್ಧತಿ ಸರಿಯಾಗಿ ಜಾರಿಯಾದರೆ ಬಹುತೇಕ ಸಮಸ್ಯೆ ನಿವಾರಣೆಯಾಗಲಿದೆ ಎಂದು ಹೇಳಿದರು.



ಐ.ಪಿ.ಡಿ ಸಾಲಪ್ಪ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಚಾಲನೆ ನೀಡಿದರು

> **ಪೊಲೀಸ್ ತಪಾಸಣೆ ಹಾಗೂ ಮೀಸಲಾತಿ ಪ್ರಮಾಣಪತ್ರಗಳ ಸಿಂಧುತ್ವ ತಪಾಸಣೆ ನಡೆಯುತ್ತಿದೆ. ಇವೆಲ್ಲವನ್ನೂ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು**
> **ತುಷಾರ್ ಗಿರಿನಾಥ್**
> ಬಿಬಿಎಂಪಿ ಮುಖ್ಯ ಆಯುಕ್ತ

ಯಂತ್ರ ವಿತರಣೆ: 'ತಂತ್ರಜ್ಞಾನ ಎಷ್ಟೇ ಬೆಳೆದಿದ್ದರೂ ಪೌರ ಕಾರ್ಮಿಕರು ಇನ್ನೂ ಪೊರಕೆಯಿಂದಲೇ ಬೀದಿಗಳನ್ನು ಸ್ವಚ್ಛ ಮಾಡುತ್ತಿದ್ದಾರೆ. ಅದನ್ನು ನಾವು ಬದಲಿಸಲು ಮುಂದಾಗಿದ್ದೇವೆ. ಪೌರಕಾರ್ಮಿಕರಿಗೆ ಯಂತ್ರಗಳನ್ನು ನೀಡಲಾಗುತ್ತದೆ' ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ವಿಶೇಷ ಆಯುಕ್ತರಾದ ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಉಪ ಆಯುಕ್ತ ಮಂಜುನಾಥ ಸ್ವಾಮಿ, ಜಂಟಿ ಆಯುಕ್ತರಾದ ಪ್ರತಿಭಾ, ಲಕ್ಷ್ಮಿದೇವಿ ಉಪಸ್ಥಿತರಿದ್ದರು.

ಬಿಬಿಎಂಪಿ: ಮುಂದುವರೆದ ಇ.ಡಿ ಪರಿಶೀಲನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊಳವೆಬಾವಿ ಕೊರೆಸುವ ಮತ್ತು ಆರ್‌ಒ ನೀರು ಶುದ್ಧೀಕರಣ ಘಟಕ ಸ್ಥಾಪನೆ ಕಾಮಗಾರಿಗಳಲ್ಲಿನ ಅಕ್ರಮ ಆರೋಪದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಗುರುವಾರವೂ ಕಡತಗಳ ಪರಿಶೀಲನೆ ಮುಂದುವರೆಸಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲೇ ಒಂದು ಕೊಠಡಿ ಪಡೆದಿರುವ ಇ.ಡಿ ಅಧಿಕಾರಿಗಳು, ಅಲ್ಲಿಗೇ ಕಡತಗಳನ್ನು ತರಿಸಿಕೊಂಡಿದ್ದಾರೆ. '2016-2019ರ ಮಧ್ಯೆ ನಡೆದ ಕಾಮಗಾರಿಗಳಿಗೆ ಸಂಬಂಧಿಸಿದ ಕಡತಗಳ ಪರಿಶೀಲನೆ ನಡೆಸುತ್ತಿದ್ದಾರೆ. ಈ ಅವಧಿಯಲ್ಲಿ ಇತರ ಯೋಜನೆಗಳ ಅಡಿ ಕೊಳವೆ ಬಾವಿ ಕೊರೆಸಿದ್ದರ ಮತ್ತು ಆರ್‌ಒ ಘಟಕಗಳ ಕಡತಗಳನ್ನೂ ಪರಿಶೀಲಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಈ ಕಾಮಗಾರಿಗಳನ್ನು ನಡೆಸಿದ ಗುತ್ತಿಗೆದಾರರು ಮತ್ತು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಕಡತಗಳು ಹಾಗೂ ಗುತ್ತಿಗೆದಾರರ ಬ್ಯಾಂಕ್ ಖಾತೆ ವಿವರಗಳನ್ನು ಇ.ಡಿ ಅಧಿಕಾರಿಗಳು ಮಂಗಳವಾರವೇ ಕೇಳಿದ್ದರು. ಅವುಗಳನ್ನು ಒದಗಿಸಲಾಗಿದೆ. ಅವುಗಳ ಪರಿಶೀಲನೆ ನಡೆಸುತ್ತಿದ್ದಾರೆ' ಎಂದಿವೆ.

'ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬಿಬಿಎಂಪಿಯ ರಾಜರಾಜೇಶ್ವರಿ ನಗರ, ದಾಸರಹಳ್ಳಿ, ಬೊಮ್ಮನಹಳ್ಳಿ, ಮಹದೇವಪುರ ಮತ್ತು ಯಲಹಂಕ ವಲಯಗಳು ಇರುವ ವಿಧಾನಸಭಾ ಕ್ಷೇತ್ರಗಳ ಹಿಂದಿನ ಶಾಸಕರ ಶಿಫಾರಸು ಪತ್ರಗಳು, ಕಾಮಗಾರಿ ಸ್ಥಳ ನಿಗದಿ ಪ್ರಕ್ರಿಯೆಗೆ ಸಂಬಂಧಿಸಿದ ಕಡತಗಳು ಮತ್ತು ಸಂಬಂಧಿತ ಅಧಿಕಾರಿಗಳ ವಿವರಗಳನ್ನು ಪರಿಶೀಲಿಸುತ್ತಿದ್ದಾರೆ. ಶುಕ್ರವಾರವೂ ಕಡತಗಳ ಪರಿಶೀಲನೆ ನಡೆಯಲಿದೆ' ಎಂದು ತಿಳಿಸಿವೆ.

ಸಹಾಯಕ ಎಂಜಿನಿಯರ್ 'ಲೋಕಾ' ಬಲೆಗೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ (ಬೆಸ್ಕಾಂ) ಇಸ್ರೋ ಬಡಾವಣೆ ಉಪ ವಿಭಾಗದ (ವಸಂತಪುರ ಸೆಕ್ಷನ್) ಸಹಾಯಕ ಎಂಜಿನಿಯರ್ ವಿನಯ್ ಕುಮಾರ್ ಅವರು ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಎಲೆಕ್ಟ್ರಿಕಲ್ ಗುತ್ತಿಗೆದಾರ ಆಗಿರುವ ಮಾರುತಿ ರಾಮಣ್ಣ ಅವರಿಗೆ ಟ್ರಾನ್ಸ್‌ಫಾರ್ಮರ್ ನೀಡಲು ವಿನಯ್ ಅವರು ₹2 ಲಕ್ಷ ಲಂಚ ಕೇಳಿದ್ದರು. ಈ ಬಗ್ಗೆ ಮಾರುತಿ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ದೂರು ಆಧರಿಸಿ, ಆರೋಪಿಯ ಬಂಧನಕ್ಕೆ ಬಲೆ ಬೀಸಿದ್ದ ಲೋಕಾಯುಕ್ತ ಪೊಲೀಸ್ ಅಧಿಕಾರಿ ಅಡಿವೇಶ್ ಗುಡಿಗೊಪ್ಪ ಅವರು, ಆರೋಪಿಯನ್ನು ಬಂಧಿಸಿದ್ದಾರೆ ಎಂದು ಲೋಕಾಯುಕ್ತ ಪ್ರಕಟಣೆ ತಿಳಿಸಿದೆ. ಲೋಕಾಯುಕ್ತ ಬೆಂಗಳೂರು ನಗರ ಎಸ್‌ಪಿ ಶ್ರೀನಾಥ ಮಹಾದೇವ ಜೋಷಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿತ್ತು.

'ಏರೋ ಇಂಡಿಯಾ' ಪ್ರದರ್ಶನಕ್ಕೆ ಕಾವೇರಿ ನೀರು

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಗರದಲ್ಲಿ ಫೆಬ್ರುವರಿ 10ರಿಂದ ನಡೆಯುವ ಏರೋ ಇಂಡಿಯಾ ವೈಮಾನಿಕ ಪ್ರದರ್ಶನಕ್ಕೆ ಅಗತ್ಯವಾಗಿರುವ ಕಾವೇರಿ ನೀರನ್ನು ಪೂರೈಸಲು ಜಲಮಂಡಳಿ ಸಿದ್ಧವಿದೆ ಎಂದು ಜಲಮಂಡಳಿ ಅಧ್ಯಕ್ಷ ವಿ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ವೈಮಾನಿಕ ಪ್ರದರ್ಶನಕ್ಕೆ ಪ್ರತಿನಿತ್ಯ 50 ಲಕ್ಷ ಲೀಟರ್‌ನಿಂದ 60 ಲಕ್ಷ ಲೀಟರ್ ನೀರು ಅಗತ್ಯವಿದೆ. ವಿಶೇಷ ಕೊಳವೆಮಾರ್ಗದ ಮೂಲಕ 2.5 ಕೋಟಿ ಲೀಟರ್ ನೀರು ಒದಗಿಸಲು ಜಲಮಂಡಳಿ ಸಾಮರ್ಥ್ಯ ಹೊಂದಿದೆ. ಇದಕ್ಕಾಗಿ ಅಗತ್ಯ ಸಿದ್ಧತೆಯನ್ನೂ ಮಾಡಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅಡಚಣೆಗಳು ಉಂಟಾದರೆ, ಜಲಮಂಡಳಿ ತನ್ನ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಸಹ ವ್ಯವಸ್ಥೆ ಮಾಡಲಿದೆ. ಈ ವರ್ಷ ಕಾವೇರಿ ನದಿ ಭಾಗದ ಜಲಾಶಯಗಳು ಭರ್ತಿಯಾಗಿವೆ. ಅಗತ್ಯ ಪ್ರಮಾಣದಲ್ಲಿ ನೀರಿನ ಸಂಗ್ರಹವಿದೆ' ಎಂದಿದ್ದಾರೆ.

24ಕ್ಕೆ ಸಾ.ರಾ. ಗೋವಿಂದು ಅಭಿನಂದನಾ ಸಮಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾ.ರಾ. ಗೋವಿಂದು ಅಭಿನಂದನಾ ಸಮಿತಿಯು ಇದೇ 24ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಪರ ಹೋರಾಟಗಾರ ಹಾಗೂ ಚಲನಚಿತ್ರ ನಿರ್ಮಾಪಕ ಸಾ.ರಾ. ಗೋವಿಂದು ಅವರಿಗೆ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದೆ.

ಅಂದು ಬೆಳಿಗ್ಗೆ 8.30ಕ್ಕೆ ಲಾಲ್‌ಬಾಗ್ ಪಶ್ಚಿಮ ದ್ವಾರದಿಂದ ರವೀಂದ್ರ ಕಲಾಕ್ಷೇತ್ರದ ವರಗೆ ಸಾ.ರಾ. ಗೋವಿಂದು ಅವರ ಮೆರವಣಿಗೆ ನಡೆಯಲಿದೆ. 11 ಗಂಟೆಗೆ ಸಮಾರಂಭವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಉದ್ಘಾಟಿಸುತ್ತಾರೆ. ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿಸುತ್ತಾರೆ. ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ ಅವರು ಅಭಿನಂದನಾ ಗ್ರಂಥವನ್ನು ಬಿಡುಗಡೆ ಮಾಡುತ್ತಾರೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಸಾಹಿತಿ ಹಂ.ಪ. ನಾಗರಾಜಯ್ಯ ವಹಿಸಿಕೊಳ್ಳುತ್ತಾರೆ ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.



ಸಾ.ರಾ. ಗೋವಿಂದು ಅವರು ನಾಲ್ಕು ದಶಕಗಳಿಂದ ಕನ್ನಡ ನಾಡು, ನುಡಿ, ನೆಲ, ಜಲದ ಸಂರಕ್ಷಣೆಗಾಗಿ ನಿರಂತರ ಹೋರಾಟ ಮಾಡುತ್ತಿದ್ದಾರೆ. ಚಲನಚಿತ್ರ ನಿರ್ಮಾಪಕರಾಗಿ ಸದಭಿರುಚಿಯ ಚಿತ್ರಗಳನ್ನು ನಿರ್ಮಾಣ ಮಾಡಿದ್ದಾರೆ. ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ ಕನ್ನಡ ಚಲನಚಿತ್ರೋದ್ಯಮದ ಏಳಿಗೆಗೆ ಗಣನೀಯ ಸೇವೆ ಸಲ್ಲಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ವಿವರಿಸಿದ್ದಾರೆ.

ಜೈಲಿನ ಒಳಗೆ ಇನ್ನೂ ನಿಲ್ಲದ ಅಕ್ರಮ

ಹೊರಗಿನವರಿಗೆ ಜೀವ ಬೆದರಿಕೆ, ಹಣ ನೀಡುವಂತೆ ಬೇಡಿಕೆ, ಮಾದಕವಸ್ತು ಮಾರಾಟಕ್ಕೂ ಸೂಚನೆ

• ಆದಿತ್ಯ ಕೆ.ಎ.



ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ



ಪರಪ್ಪನ ಅಗ್ರಹಾರಕ್ಕೆ ಆಂಧ್ರದಿಂದ ಮೂವರು ಡ್ರಗ್ಸ್ ಪೂರೈಸುತ್ತಿದ್ದರು. ಅವರಿಗೆ ಸೂಚನೆ ನೀಡುತ್ತಿದ್ದ ಕೈದಿಯನ್ನು ಬಾಡಿ ವಾರಂಟ್ ಮೇಲೆ ವಶಕ್ಕೆ ಪಡೆಯಲಾಗಿದೆ

ಬಿ.ದಯಾನಂದ
ನಗರ ಪೊಲೀಸ್ ಕಮಿಷನರ್

ಬೆಂಗಳೂರು: ಅಪರಾಧ ಪ್ರಕರಣಗಳಲ್ಲಿ ನ್ಯಾಯಾಂಗ ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿರುವ ಹಲವು ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಬಂದಿಗಳು ಜೈಲು ಒಳಗಿನಿಂದಲೇ 'ಅಕ್ರಮ ಚಟುವಟಿಕೆ' ನಡೆಸುತ್ತಿರುವುದು ಪೊಲೀಸ್ ತನಿಖೆಯಿಂದ ದೃಢಪಟ್ಟಿದೆ.

ಆರೋಪಿಗಳು ಹಾಗೂ ರೌಡಿಗಳ ಜತೆಗೆ ಕೈದಿಗಳು ಸಂಪರ್ಕದಲ್ಲಿ ಕೊಂಡು ಅಪರಾಧ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂಬುದಕ್ಕೆ ಸಿಸಿಬಿ ಹಾಗೂ ವಿವಿಧ ಠಾಣೆಗಳ ಪೊಲೀಸರು, ಕೆಲವು ಪ್ರಕರಣಗಳ ತನಿಖೆ ನಡೆಸುತ್ತಿದ್ದಾಗ ಸಾಕ್ಷ್ಯಗಳು ಲಭಿಸಿವೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಸಿದ್ದಾಪುರ ಮಹೇಶ್ ಕೊಲೆ ಪ್ರಕರಣದಲ್ಲಿ ವಿಲ್ಸನ್ ಗಾರ್ಡನ್ ನಾಗ ಮತ್ತು ಸಹಚರರು ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು. ಆ ಸಂದರ್ಭದಲ್ಲಿ ಇಬ್ಬರಿಗೂ 'ವಿಶೇಷ ಆತಿಥ್ಯ' ನೀಡಿದ್ದ ಆರೋಪದಡಿ ಜೈಲಿನ ಮುಖ್ಯ ಅಧೀಕ್ಷಕ, ಅಧೀಕ್ಷಕ ಮತ್ತು ಸಿಬ್ಬಂದಿ ಸೇರಿದಂತೆ ಒಂಬತ್ತು ಮಂದಿಯನ್ನು ಅಮಾನತು ಮಾಡಲಾಗಿತ್ತು. ಹಲವು ಕೈದಿಗಳನ್ನೂ ಬೇರೆ ಕಾರಾಗೃಹಗಳಿಗೆ ಸ್ಥಳಾಂತರ ಮಾಡಲಾಗಿತ್ತು. ಅದಾದ ಮೇಲೂ 'ಅಕ್ರಮ ಚಟುವಟಿಕೆ'ಗಳಿಗೆ ಕಡಿವಾಣ ಬಿದ್ದಿಲ್ಲ ಎಂಬ ಆರೋಪವಿದೆ.

ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ, ಜೈಲಿನ ಒಳಗೆ ಮೊಬೈಲ್ ಬಳಕೆಯಾಗದಂತೆ ಹಾಗೂ ಕೈದಿಗಳಿಗೆ ಮೊಬೈಲ್ ಸಿಗದಂತೆ ಬಿಗಿಯಾದ ಕ್ರಮ ತೆಗೆದುಕೊಂಡಿತ್ತು. ಇದೀಗ ಮತ್ತೆ ಜೈಲಿನಲ್ಲಿ ಮೊಬೈಲ್ ಬಳಕೆ ಆಗುತ್ತಿರುವುದು ಗೊತ್ತಾಗಿದೆ.

'ಮೊಬೈಲ್ ಬಳಸಿ ಜೈಲಿನಿಂದಲೇ ಹಣಕ್ಕಾಗಿ ಬೇಡಿಕೆ ಹಾಕುತ್ತಿರುವುದು, ಕೊಲೆ ಬೆದರಿಕೆ ಹಾಗೂ ಡ್ರಗ್ಸ್ ಮಾರಾಟಕ್ಕೆ ಸಂಚು ರೂಪಿಸಲಾಗುತ್ತಿದೆ. ಜೈಲಿನಲ್ಲಿ ಮತ್ತೆ ಲೋಪದೋಷಗಳು ಪತ್ತೆ ಆಗುತ್ತಿವೆ' ಎಂದು ಮೂಲಗಳು ತಿಳಿಸಿವೆ.

'ಪ್ರಕರಣವೊಂದರಲ್ಲಿ ರೌಡಿ ಸೈಕೊ ವಿಶ್ವನಾಥ್ ಎಂಬಾತ ಪರಪ್ಪನ ಅಗ್ರಹಾರ ಜೈಲು ಸೇರಿದ್ದ. ಜೈಲಿನಲ್ಲೇ ಕೂತು ಸೈಕೊ ವಿಶ್ವನಾಥ್, ವ್ಯಾಪಾರಿಗೆ ಕರೆ ಮಾಡಿ ಹಣಕ್ಕಾಗಿ ಬೆದರಿಕೆ ಹಾಕಿದ್ದಾನೆ. ಪ್ರತಿ ವಾರ ತನ್ನ ಸಹಚರರಿಗೆ ₹40 ಸಾವಿರ ಮಾಮೂಲಿ ನೀಡಬೇಕು. ಇಲ್ಲದಿದ್ದರೆ ಕೊಲೆ ಮಾಡಲಾಗುವುದು ಎಂದು ಬೆದರಿಕೆ ಹಾಕಿದ್ದಾನೆ. ಸೈಕೊ ವಿಶ್ವನಾಥ್ ವಿರುದ್ಧ ಸಿಸಿಬಿಗೆ ವ್ಯಾಪಾರಿ ದೂರು ನೀಡಿದ್ದು, ಬಾಡಿ ವಾರಂಟ್ ಮೇಲೆ ಕೈದಿಯನ್ನು ಸಿಸಿಬಿ ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಡ್ರಗ್ಸ್ ದಂಧೆ ನಡೆಸುತ್ತಿದ್ದ ಮನೆಗಳ ಮೇಲೆ ಅಶೋಕ ನಗರ ಠಾಣೆಯ ಪೊಲೀಸರು ಡಿಸೆಂಬರ್ 17ರಂದು ದಾಳಿ ನಡೆಸಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಹಿಂದೂಪುರ ತಾಲ್ಲೂಕಿನ ಮನೆಪಲ್ಲೆ ನಿವಾಸಿ, ಬೆಂಗಳೂರು ವೀರೇಶ್ ನಗರದಲ್ಲಿ ನೆಲಸಿದ್ದ ಶ್ರೀಕಾಂತ್, ಆರ್.ಟಿ. ನಗರದ ನಿವಾಸಿ ಮುನಿರಾಜ್, ಚಾಮುಂಡೇಶ್ವರಿ ನಗರದ ಚಂದ್ರಕಾಂತ್ ಎಂಬುವರನ್ನು ಬಂಧಿಸಿದ್ದರು. ತನಿಖೆ ಮುಂದುವರೆಸಿದಾಗ, ಜೈಲಿನಲ್ಲಿದ್ದ ಸಜಾ ಕೈದಿಯ ಸೂಚನೆ ಮೇರೆಗೆ ಮೂವರು ಡ್ರಗ್ಸ್ ದಂಧೆ ನಡೆಸುತ್ತಿರುವುದು ಪತ್ತೆಯಾಗಿದೆ.

'ಆನೇಕಲ್ ತಾಲ್ಲೂಕು ಕಲ್ಲಬಾಳು ಗ್ರಾಮದ ವಿ.ಬಾಲಕೃಷ್ಣ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿದ್ದ. ಆತ ಜೈಲಿನಲ್ಲೇ ಕುಳಿತು ಮೊಬೈಲ್ ಬಳಸಿ ಸಹಚರರಿಗೆ ಡ್ರಗ್ಸ್ ಮಾರಾಟಕ್ಕೆ ಸಲಹೆ–ಸೂಚನೆ ನೀಡುತ್ತಿದ್ದ. ಬಾಲಕೃಷ್ಣ ಸೂಚನೆ ಮೇರೆಗೆ ದಂಧೆ ನಡೆಯುತ್ತಿರುವುದನ್ನು ಪತ್ತೆಹಚ್ಚಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಬಾಲಕೃಷ್ಣ ಸೂಚನೆಯಂತೆ ಆಂಧ್ರಪ್ರದೇಶ ವಿಶಾಖಪಟ್ಟಣಕ್ಕೆ ತೆರಳಿ ಡ್ರಗ್ಸ್ ಸಂಗ್ರಹಿಸಿ ನಗರಕ್ಕೆ ತರುತ್ತಿದ್ದರು. ಅದನ್ನು ನಗರದಲ್ಲಿ ಇತರೆ ಪೆಡ್ಲರ್‌ಗಳು ಹಾಗೂ ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದರು' ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದರು.

ಈಗಲೂ ಮೊಬೈಲ್ ಫೋನ್ ಬಳಕೆ

'ಜೈಲಿನೊಳಗೆ ಕೈದಿಗಳಿಗೆ ಹೇಗೆ ಮೊಬೈಲ್ ಲಭಿಸುತ್ತಿದೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪರಪ್ಪನ ಅಗ್ರಹಾರ ಕಾರಾಗೃಹದ ಮೇಲೆ ಸೆಪ್ಟೆಂಬರ್‌ನಲ್ಲಿ ಸಿಸಿಬಿ ದಾಳಿ ನಡೆಸಿದಾಗ 15 ಮೊಬೈಲ್‌ಗಳು, ಪೆನ್‌ಡ್ರೈವ್, ಚಾಕು, ನಗದು ಹಾಗೂ ಎಲೆಕ್ಟ್ರಿಕ್ ಸ್ಟೌ ಸೇರಿದಂತೆ ನಿಷೇಧಿತ ವಸ್ತುಗಳು ಪತ್ತೆ ಆಗಿದ್ದವು. ಆಗ ಕಾರಾಗೃಹದ ಭದ್ರತಾ ಪಡೆ ಸಿಬ್ಬಂದಿ, ವಿಚಾರಣಾಧೀನ ಕೈದಿಗಳು ಹಾಗಾ ಸಜಾ ಕೈದಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು. ಈಗಲೂ ಮೊಬೈಲ್‌ಗಳು ಜೈಲಿನಲ್ಲಿರುವ ಅನುಮಾನವಿದ್ದು, ಮತ್ತೆ ದಿಢೀರ್ ದಾಳಿ ನಡೆಸಿ ಪರಿಶೀಲಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಎರಡು ಪ್ರತ್ಯೇಕ ಪ್ರಕರಣ: ಎಫ್‌ಐಆರ್ ದಾಖಲು

ಕೋಳಿ ತಿಂದಿದ್ದಕ್ಕೆ ನಾಯಿ ಕೊಂದ!

ಪ್ರಜಾವಾಣಿ ವಾರ್ತೆ



ನಾಯಿಗಳನ್ನು ಸಾಯಿಸಿದ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ

ಬೆಂಗಳೂರು: ಉದ್ದೇಶಪೂರ್ವಕವಾಗಿ ನಾಯಿಗಳನ್ನು ಸಾಯಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಪೊಲೀಸ್ ಠಾಣೆಗಳಲ್ಲಿ ಎರಡು ಪ್ರತ್ಯೇಕ ಪ್ರಕರಣ ದಾಖಲಾಗಿದೆ.

ತಾನು ಸಾಕಿದ್ದ ಕೋಳಿಯನ್ನು ತಿಂದಿದೆ ಎಂದು ಆರೋಪಿಸಿ ಮನೆ ಮುಂಭಾಗ ಕಟ್ಟಿಹಾಕಿದ್ದ ನಾಯಿಯನ್ನು ವ್ಯಕ್ತಿಯೊಬ್ಬ ಕೋಲಿನಿಂದ ಹೊಡೆದು ಸಾಯಿಸಿದರೆ, ಮತ್ತೊಂದೆಡೆ ಮಲಗಿದ್ದ ನಾಯಿ ಮೇಲೆ ಚಾಲಕ ಜೀಪ್ ಹತ್ತಿಸಿ ಸಾಯಿಸಿರುವ ಘಟನೆ ನಡೆದಿದೆ.

ಕೋಳಿ ತಿಂದ ಪ್ರಕರಣದಲ್ಲಿ ನಾಯಿ ಸಾಯಿಸಿದ್ದನ್ನು ಪ್ರಶ್ನಿಸಿದ ಮಹಿಳೆ ಮೇಲೆ ಹಲ್ಲೆಗೆ ಯತ್ನಿಸಿದ ಆರೋಪದಡಿ ವ್ಯಕ್ತಿ ವಿರುದ್ಧ ವಿದ್ಯಾರಣ್ಯಪುರ ಠಾಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರಣ್ಯಪುರ ವಡೇರಹಳ್ಳಿ ನಿವಾಸಿ ಪುಷ್ಪಲತಾ ನೀಡಿದ ದೂರಿನ ಮೇರೆಗೆ ಎದುರು ಮನೆಯ ನಿವಾಸಿ ಮನೋಜ್ ವಿರುದ್ಧ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ವಿಚಾರಣೆ ನಡೆಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಶಾ ಕಾರ್ಯಕರ್ತೆಯಾಗಿರುವ ಪುಷ್ಪಲತಾ ಅವರು ಜರ್ಮನ್ ಶೆಫರ್ಡ್ ನಾಯಿ ಜೊತೆಗೆ ಹಸು ಹಾಗೂ ಕೋಳಿಗಳನ್ನು ಸಾಕುತ್ತಿದ್ದರು. ಡಿ.24ರಂದು ಮನೆ ಮುಂಭಾಗ ನಾಯಿಯನ್ನು ಕಟ್ಟಿಹಾಕಿ ಕೆಲಸಕ್ಕೆ ಹೋಗಿದ್ದರು. ಸಂಜೆ ಮನೆಗೆ ಹಿಂತಿರುಗಿದಾಗ ಶ್ವಾನದ ಕಣ್ಣು ಹಾಗೂ ಬಾಯಿಗೆ ಗಾಯವಾಗಿತ್ತು. ಗಾಯದಿಂದ ಚೇತರಿಸಿಕೊಳ್ಳದೆ ಜ.3ರಂದು ನಾಯಿ ಮೃತಪಟ್ಟಿತ್ತು.

ಮನೆ ಮುಂದೆ ಅಳವಡಿಸಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾ ಪರಿಶೀಲಿಸಿದಾಗ ಆರೋಪಿ ಮನೋಜ್, ಕೋಲಿನಿಂದ ಮನಬಂದಂತೆ ಥಳಿಸಿರುವ ದೃಶ್ಯ ಸೆರೆಯಾಗಿತ್ತು.

'ನಾನು ಸಾಕುತ್ತಿದ್ದ ಕೋಳಿಯನ್ನು ನಾಯಿ ತಿಂದಿದ್ದರಿಂದ ಅದಕ್ಕೆ ಹೊಡೆದಿರುವುದಾಗಿ ಮನೋಜ್ ಒಪ್ಪಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಮಲಗಿದ್ದ ನಾಯಿ ಮೇಲೆ ಜೀಪ್ ಹತ್ತಿಸಿದ ಚಾಲಕ: ಮಲಗಿದ್ದ ನಾಯಿ ಮೇಲೆ ಜೀಪ್ ಹತ್ತಿಸಿದ್ದ ಘಟನೆ ತಲಘಟ್ಟಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಕರ್ನಾಟಕ ಪ್ರಾಣಿ ದಯಾ ಮಂಡಳಿ ಸದಸ್ಯ ಅನಿರುದ್ಧ ಅವರ ದೂರಿನ ಮೇರೆಗೆ ಕಾರು ಚಾಲಕ ಮಂಜುನಾಥ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಡಿಸೆಂಬರ್ 31ರ ಸಂಜೆ ರಘುವನಪಾಳ್ಯ ಬಳಿ ಮಲಗಿದ್ದ ನಾಯಿ ಮೇಲೆ ಜೀಪ್ ಹತ್ತಿಸಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದು, ಬಳಿಕ ಮೃತದೇಹವನ್ನ ಚೀಲದಲ್ಲಿಟ್ಟು ಸ್ಥಳಾಂತರಿಸಿದ್ದರು.

ಈ ಸಂಬಂಧ ಜ.9ರಂದು ಇನ್‌ಸ್ಟಾಗ್ರಾಮ್‌ನಲ್ಲಿ ವಿಡಿಯೊ ಹರಿದಾಡಿದ ಕಾರಣ ಆರೋಪಿ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ವಿಚಾರಣೆಗೆ ಬರುವಂತೆ ಚಾಲಕನಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಚೊಕ್ಕಸಂದ್ರದ ಬಾಡಿಗೆ ಮನೆಯಲ್ಲಿ ನಡೆದಿದ್ದ ತ್ರಿವಳಿ ಕೊಲೆ ಪ್ರಕರಣ

ಕೊಲೆ ಮಾಡಲೆಂದೇ ಮಚ್ಚು ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಮಾಡುವ ಉದ್ದೇಶದಿಂದ ಹೆಸರುಘಟ್ಟ ಮುಖ್ಯರಸ್ತೆಗೆ ತೆರಳಿ ಅಂಗಡಿಯೊಂದರಿಂದ ಮಚ್ಚು ಖರೀದಿಸಿದ್ದಾಗಿ ತ್ರಿವಳಿ ಕೊಲೆ ಪ್ರಕರಣದ ಆರೋಪಿ ಗಂಗರಾಜು ಪೀಣ್ಯ ಪೊಲೀಸರ ಎದುರು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ ಎಂಬುದು ಗೊತ್ತಾಗಿದೆ.

ಜಾಲಹಳ್ಳಿ ಕ್ರಾಸ್ ಬಳಿಯ ಚೊಕ್ಕಸಂದ್ರದ ಬಾಡಿಗೆ ಮನೆಯೊಂದರಲ್ಲಿ ಗಂಗರಾಜು ತನ್ನ ಪತ್ನಿ ಭಾಗ್ಯಮ್ಮ, ಪುತ್ರಿ ನವ್ಯಾ ಹಾಗೂ ಭಾಗ್ಯಮ್ಮ ಅವರ ಅಕ್ಕನ ಮಗಳು ಹೇಮಾವತಿಯನ್ನು ಬುಧವಾರ ಕೊಚ್ಚಿ ಕೊಲೆ ಮಾಡಿದ್ದ. ಕೊಲೆ ಮಾಡಿದ ಬಳಿಕ ಆರೋಪಿ ಮಚ್ಚು ಸಹಿತ ಪೀಣ್ಯ ಠಾಣೆಗೆ ತೆರಳಿ ಶರಣಾಗಿದ್ದ. ಆರೋಪಿ ಬಂಧಿಸಿರುವ ಪೀಣ್ಯ ಠಾಣೆ ಪೊಲೀಸರು, ವಿಚಾರಣೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಗಂಗರಾಜ್

ಬಾಡಿಗೆ ಮನೆ ಮಾಲೀಕ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಪತ್ನಿಯನ್ನು ಕೊಲೆ ಮಾಡಲು ಬುಧವಾರ ಮಧ್ಯಾಹ್ನ ಮಚ್ಚು ಖರೀದಿಸಿ ಮನೆಗೆ ತಂದಿದ್ದೆ. ಸಂಜೆ 4.30ಕ್ಕೆ ಮನೆಗೆ ಬಂದಾಗ ಗಲಾಟೆ ನಡೆಯಿತು. ಗಲಾಟೆಯ ಬಳಿಕ ಮೊದಲಿಗೆ ಪತ್ನಿ ಮೇಲೆ ಮಚ್ಚಿನಿಂದ ಹೊಡೆದೆ. ಅದೇ ವೇಳೆಗೆ ಪುತ್ರಿ ಹಾಗೂ ಹೇಮಾವತಿ ಬಿಡಿಸಲು ಬಂದರು. ಅವರ ಮೇಲೂ ಮಚ್ಚಿನಿಂದ ಹಲ್ಲೆ ನಡೆಸಿದಾಗ ಮೂವರೂ ಮೃತಪಟ್ಟರು. ತಲೆಮರೆಸಿಕೊಂಡರೂ ಪೊಲೀಸರು ಬಂಧಿಸುತ್ತಾರೆ ಎನ್ನುವ ಭಯದಲ್ಲಿ ನಾನೇ ಠಾಣೆಗೆ ಬಂದು ಶರಣಾದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

'ಗೃಹರಕ್ಷಕ ದಳದಲ್ಲಿ ನೋಂದಣಿಯಾಗಿದ್ದ ಗಂಗರಾಜು, ಎರಡು ತಿಂಗಳಿಂದ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದ. ಇದಕ್ಕೂ ಮೊದಲು ಆರೋಪಿ ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದ. ನೆಲಮಂಗಲ ತಾಲ್ಲೂಕಿನ ದಾಬಸ್‌ಪೇಟೆಯ ಗಂಗರಾಜು, ಆರು ವರ್ಷಗಳ ಹಿಂದೆ ಚೊಕ್ಕಸಂದ್ರಕ್ಕೆ ಬಂದು ನೆಲಸಿದ್ದ. ಕೊಲೆ ನಡೆದ ಬಳಿಕ ಸ್ಥಳಕ್ಕೆ ತೆರಳಿ ಅಕ್ಕಪಕ್ಕದ ಮನೆಗಳ ನಿವಾಸಿಗಳ ವಿಚಾರಣೆ ನಡೆಸಲಾಗಿದೆ. ದಂಪತಿ ಮಧ್ಯೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು ಎಂದು ಮಾಹಿತಿ ನೀಡಿದ್ದಾರೆ. ಮೊದಲ ಪತ್ನಿಗೆ ವಿಚ್ಛೇದನ ನೀಡಿದ್ದ ಗಂಗರಾಜು ಎರಡನೇ ಮದುವೆ ಮಾಡಿಕೊಂಡಿದ್ದ' ಎಂದು ಪೊಲೀಸರು ಹೇಳಿದ್ದಾರೆ.

'ಪತ್ನಿ ಜತೆಗೆ ಸಂಬಂಧ ಉತ್ತಮವಾಗಿರಲಿಲ್ಲ. ಅದೇ ಕಾರಣಕ್ಕೆ ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ. ಮೂವರ ಕುತ್ತಿಗೆ, ತಲೆಗೆ ಬಲವಾದ ಪೆಟ್ಟು ಬಿದ್ದ ಕಾರಣಕ್ಕೆ ಸಾವು ಸಂಭವಿಸಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಬಸ್ ಪಾಸ್ ದರವೂ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಪ್ರಯಾಣ ದರ ಏರಿಕೆಯಾಗಿರುವುದರಿಂದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ವಿವಿಧ ಸಾರಿಗೆ ನಿಗಮಗಳ ದೈನಿಕ, ಸಾಪ್ತಾಹಿಕ, ತಿಂಗಳ ಪಾಸ್ ಗಳ ದರ ಪರಿಷ್ಕರಣೆ ಮಾಡಿ ಆದೇಶ ಹೊರಡಿಸಲಾಗಿದೆ. ಪರಿಷ್ಕೃತ ದರ ಜನವರಿ 9ರಿಂದ ಜಾರಿಯಾಗಿದೆ.

ಈ ಬಗ್ಗೆ ಬುಧವಾರ ದರಪಟ್ಟಿ ಬಿಡುಗಡೆ ಮಾಡಲಾಗಿತ್ತು.

ಬಿಎಂಟಿಸಿ ವೋಲ್ವೋ, ವಾಯು ವಜ್ರ ಬಸ್‌ಗಳ ದೈನಿಕ, ತಿಂಗಳ ಪಾಸ್ ದರದಲ್ಲಿ ಟೋಲ್ ಶುಲ್ಕ ಹಾಗೂ ಜಿಎಸ್ ಟಿ ಶುಲ್ಕವನ್ನು ಸೇರ್ಪಡೆ ಮಾಡಿದೆ. ಇದರಿಂದ ಕನಿಷ್ಠ ₹10ರಿಂದ ₹150ರವರೆಗೆ ದರ ಏರಿಕೆಯಾಗಿದೆ. ಪರಿಷ್ಕೃತ ದರದ ಪಾಸ್‌ಗಳು ವಿತರಿಸುವವರೆಗೂ ಪ್ರಸ್ತುತ ಇರುವ ಪಾಸ್‌ಗಳ ಮೇಲೆ ಪರಿಷ್ಕೃತ ದರದ ಮೊಹರು ಹಾಕಿ ವಿತರಿಸಬೇಕು ಒಪ್ಪಂದದ ಮೇರೆಗೆ ಪಡೆಯುವ ವಾಹನದ ದರವೂ ಹೆಚ್ಚಳವಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್ ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಸೇರಿ ಇತರ ಮೂರು ಸಾರಿಗೆ ನಿಗಮಗಳ ವೇಗದೂತ ಮತ್ತು ತಡೆರಹಿತ ಬಸ್ ಗಳ ಮಾಸಿಕ ಪಾಸ್ ದರ ₹70ರಿಂದ ₹420ರವರೆಗೂ ಹೆಚ್ಚಳ ಮಾಡಲಾಗಿದೆ.

ಕೌಟುಂಬಿಕ ಕಲಹ: ಕಾನ್‌ಸ್ಟೆಬಲ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವೇಕನಗರದ ಕಾನ್‌ಸ್ಟೆಬಲ್ ಕೆ.ಗೋವಿಂದ್ ಅವರು ಗುರುವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಳ್ಳಾರಿ ಜಿಲ್ಲೆಯವರಾದ ಗೋವಿಂದ್ ಅವರು ಕಳೆದ ಕೆಲವು ವರ್ಷಗಳಿಂದ ವಿವೇಕನಗರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಆಸ್ಟಿನ್‌ಟೌನ್ ಪೊಲೀಸ್ ವಸತಿಗೃಹದಲ್ಲಿ ಅವರು ನೆಲಸಿದ್ದರು.

ಮೇಲ್ನೋಟಕ್ಕೆ ಕೌಟುಂಬಿಕ ಕಲಹದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದ್ದು, ನಿಖರ ಕಾರಣ ಗೊತ್ತಾಗಿಲ್ಲ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

'ಡೇರಿ ಉತ್ಪನ್ನಗಳ ದರ ಶೇ 4ರಷ್ಟು ಹೆಚ್ಚಳಕ್ಕೆ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೇರಿ ಉತ್ಪನ್ನಗಳ ದರವನ್ನು ಆಗಸ್ಟ್‌ನಲ್ಲಿ ಶೇಕಡ 4ರಷ್ಟು ಹೆಚ್ಚಿಸಲಾಗುವುದು' ಎಂದು ಭಾರತೀಯ ಡೇರಿ ಸಂಘದ ಅಧ್ಯಕ್ಷ ಅಧ್ಯಕ್ಷ ಆರ್.ಎಸ್. ಸೋಧಿ ಹೇಳಿದರು.

ಭಾರತೀಯ ಡೇರಿ ಸಂಘದ ದಕ್ಷಿಣ ವಲಯ ಆಯೋಜಿಸಿರುವ 'ದಕ್ಷಿಣ ಡೇರಿ ಶೃಂಗ'ಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಪ್ಲಾಸ್ಟಿಕ್ ಕವರ್‌ಗಳಲ್ಲಿ ಹಾಲು, ಅದರ ಉತ್ಪನ್ನಗಳನ್ನು ಮಾರಾಟ ಮಾಡುವುದರಿಂದ ಡೇರಿ ಉದ್ಯಮಕ್ಕೆ ಯಶಸ್ಸು ಸಿಕ್ಕಿದೆ. ಕಡಿಮೆ ವೆಚ್ಚದಲ್ಲಿ ಹಾಲಿನ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸಲಾಗುತ್ತದೆ. 2024ರಲ್ಲಿ ಹಾಲಿನ ಉತ್ಪಾದನೆ ಶೇ 3.5ರಷ್ಟು ಹೆಚ್ಚಳವಾಗಿದೆ' ಎಂದು ಎಂದರು.

'ಭಾರತದಲ್ಲಿ ಚಿಕ್ಕ ಗಾತ್ರದ ಡೇರಿ ಘಟಕ ಸ್ಥಾಪಿಸಬೇಕು. ಎಐ ಸೇರಿದಂತೆ ಆಧುನಿಕ ತಂತ್ರಜ್ಞಾನಗಳನ್ನು ಬಳಸಿ ಗ್ರಾಹಕರ ಬೇಡಿಕೆಗಳಿಗೆ ಉತ್ಪನ್ನಗಳನ್ನು ಪೂರೈಸಬೇಕು' ಎಂದರು.

ಸಂಘದ ಮಾಜಿ ಅಧ್ಯಕ್ಷ ರಾಮ್ ಪಿ. ಅನೇಜಾ ಮಾತನಾಡಿ, 'ಹಾಲು ದೇಶದಲ್ಲಿ ಸುರಕ್ಷಿತ ಹಾಗೂ ಕಡಿಮೆ ಬೆಲೆಗೆ ಸಿಗುವ ಆಹಾರ ಉತ್ಪನ್ನವಾಗಿದೆ. ಆದ್ದರಿಂದ ನಮ್ಮ ಜನ ಹಾಲು ಮತ್ತು ಅದರ ಉತ್ಪನ್ನಗಳನ್ನು ಹೆಚ್ಚು ಬಳಕೆ ಮಾಡುತ್ತಿದ್ದಾರೆ. ದಕ್ಷಿಣ ವಲಯದ ಸ್ಥಳೀಯ ಬ್ರ್ಯಾಂಡ್‌ಗಳನ್ನು ಉಳಿಸಿ, ಬೆಳೆಸಬೇಕು' ಎಂದರು.

ಎಬಿಎಲ್‌ಇ ಅಧ್ಯಕ್ಷ ಜಿ.ಎಸ್. ಕೃಷ್ಣನ್, ದೊಡ್ಲ ಡೇರಿಯ ಸಿಒಒ ಬಿ.ವಿ.ಕೆ. ರೆಡ್ಡಿ, ಭಾರತೀಯ ಡೇರಿ ಸಂಘದ ದಕ್ಷಿಣ ವಲಯದ ಅಧ್ಯಕ್ಷ ಸತೀಶ್ ಕುಲಕರ್ಣಿ, ಕಾರ್ಯದರ್ಶಿ ಕೆ.ಎಸ್. ರಾಮಚಂದ್ರ, ಉಪಸ್ಥಿತರಿದ್ದರು.


सत्यमेव जयते
GOVERNMENT OF GUJARAT
The Sky Adorned with Kites
Shri Narendra Modi
Hon'ble Prime Minister, India
Shri Bhupendrabhai Patel
Hon'ble Chief Minister, Gujarat
International KITE FESTIVAL
– 11th to 14th –
January, 2025
INTERNATIONAL Kite FESTIVAL 2025
11 to 14 January, 2025
Every year, the International Kite Festival turns Gujarat's sky into a living celebration. Traditional Indian designs and artistic creations from 47 countries with 143 international kite flyers will rise to create a spectacle unlike any other. It's more than a festival. It's where cultures connect, hearts soar, and the sky becomes alive.
Be where the action is
AHMEDABAD
11th - 14th January, 2025
SOU-Ekta Nagar
12th January, 2025
SURAT
13th January, 2025
RAJKOT
12th January, 2025
SHIVRAJPUR
13th January, 2025
VADODARA
12th January, 2025
DHORDO
13th January, 2025
To visit IKF, scan QR code
TOURISM CORPORATION OF GUJARAT LIMITED
Udyog Bhavan, Block No. 16, 4th Floor, Sector - 11, Gandhinagar - 382 010, Gujarat
www.gujarattourism.com • Toll-Free Number: 1800 203 1111

ವೈಕುಂಠ ಏಕಾದಶಿ: ದೈವತ್ವದ ಬಾಗಿಲು

• ಎಸ್. ಸೂರ್ಯಪ್ರಕಾಶ ಪಂಡಿತ್



ವೈಕುಂಠ ಎನ್ನುವುದು ಮಹಾವಿಷ್ಣುವಿನ ನೆಲೆ. ವೈಕುಂಠ ಏಕಾದಶಿಯಂದು ವಿಷ್ಣುವಿನ ಈ 'ಮನೆ'ಯ ಬಾಗಿಲು ಮುಕ್ತವಾಗಿ ಎಲ್ಲರಿಗೂ ತೆರೆದಿರುತ್ತದೆಂದು. ವಿಷ್ಣುವಿನ ಧಾಮವನ್ನು ನಮ್ಮ ಮನೆಯನ್ನಾಗಿಸಿಕೊಳ್ಳಲ್ಲೆಂಥ ಅವಕಾಶ ಒದಗುವ ಪುಣ್ಯದಿನವಿದು.

ತ್ರಿಮೂರ್ತಿಗಳಲ್ಲಿ ಒಬ್ಬನಾಗಿದ್ದಾನೆ ವಿಷ್ಣು. ಎಲ್ಲೆಲ್ಲೂ ವ್ಯಾಪಕನಾಗಿರುವವನೇ ವಿಷ್ಣು. ಎಲ್ಲೆಲ್ಲೂ 'ಇದ್ದಾನೆ' ಎಂದರೆ ವೈಕುಂಠವನ್ನು ಮಾತ್ರವೇ ಅವನು ತಾಣ ಎಂದು ಏಕಾದರೂ ಹೇಳಲಾಗಿದೆ? 'ವೈಕುಂಠ' ಎಂದರೆ ಯಾವುದೇ ಓರೆಕೋರೆಗಳಿಲ್ಲದ್ದು, ತೊಂದರೆ-ತಾಪತ್ರಯಗಳು ಇಲ್ಲದ್ದು ಎಂದು. ಆಗ ವೈಕುಂಠ ಎನ್ನುವುದು ಯಾವುದೋ ಒಂದು ನಿರ್ದಿಷ್ಟ ಸ್ಥಳವಲ್ಲ, ಎಲ್ಲಿ ಎಲ್ಲೆಲ್ಲೂ ಇರಬಹುದಾದ ಸ್ಥಳ ಎಂದಾಗುತ್ತದೆ. ಎಲ್ಲಿ ನಮಗೆ ನೆಮ್ಮದಿ, ಸುಖ, ಸಂತೋಷಗಳು ಪ್ರಾಪ್ತಿಯಾಗುತ್ತವೆಯೋ ಅದೇ ವೈಕುಂಠವಾಗಬಲ್ಲದು; ವಿಷ್ಣು ಎಲ್ಲೆಲ್ಲೂ ಇದ್ದಾನಲ್ಲ!

ಭಾರತೀಯ ಹಬ್ಬ-ಹರಿದಿನಗಳ ಉದ್ದೇಶ ನಮ್ಮ ಜೀವನವನ್ನು ಸುಖಮಯಗೊಳಿಸುವ, ಸುಂದರಗೊಳಿಸುವ ಕಡೆಗೆ ನಮ್ಮ ಭಾವ-ಬುದ್ಧಿಗಳನ್ನು ಸಿದ್ಧಗೊಳಿಸುವುದು. ಈ ತಾತ್ವಿಕತೆಯನ್ನು 'ವೈಕುಂಠ ಏಕಾದಶಿ'ಯ ಆಚರಣೆಯಲ್ಲೂ ಕಾಣಬಹುದು. ನಾವು ಎಲ್ಲಿ ಸುಖವಾಗಿರಬಲ್ಲೆವು? ಎಲ್ಲಿ ಯಾವುದೇ ವಿಧದ ತೊಂದರೆಗಳು ಇಲ್ಲವೋ ಅಲ್ಲಿ ತಾನೆ? ವೈಕುಂಠ ಅಂಥ ಸ್ಥಾನ. ಅಲ್ಲಿ ಏಕಾದರೂ ಇಂಥ ಸುಖ ನೆಲಸಿದೆ ಎಂದರೆ ಅಲ್ಲಿ ವಿಷ್ಣು ಇದ್ದಾನೆ; ಎಂದರೆ ಅದು ದೈವದ ನೆಲೆ ಎಂಬ ಕಾರಣದಿಂದ. ದೈವತ್ವ ಎನ್ನುವುದು ಕೂಡ ನಮ್ಮ ಅಂತರಂಗದ ಬೆಳಕು ತಾನೆ? ಎಲ್ಲಿ ಜಡತೆ, ಸೋಮಾರಿತನ, ಕೆಟ್ಟತನದಂಥ ರಾಕ್ಷಸಪ್ರವೃತ್ತಿಗಳು ಇಲ್ಲವೋ ಅಲ್ಲಿ ಸಹಜವಾಗಿ ದೈವತ್ವ ನೆಲಸಿದೆ ಎಂದೇ ಅರ್ಥ. ಕತ್ತಲನ್ನು ಓಡಿಸಲು ಬೆಳಕನ್ನು ಅಲ್ಲಿಗೆ ತಂದರೆ ಸಾಕು, 'ಇನ್ನೊಂದು ಪ್ರತ್ಯೇಕ ಸಾಧನ ಬೇಕಿಲ್ಲವಷ್ಟೆ. ದೈವತ್ವದ ಗುಣವೇ ಬೆಳಕು. ನಮ್ಮ ಅಂತರಂಗದಲ್ಲಿ ನೆಮ್ಮದಿಯ ಬೆಳಕನ್ನು ತುಂಬಿಕೊಂಡಾಗ, ಒಡಲಲ್ಲಿ ಒಳಿತಿನ ನೆಲೆ ಕಲ್ಪಿಸಿದಾಗ, ಬದುಕಿಗೆ ಕ್ರಿಯಾಶೀಲತೆಯನ್ನು ಕಲ್ಪಿಸಿದಾಗ ನಮ್ಮಲ್ಲಿ ದೈವತ್ವ ನೆಲಸಿತು ಎಂದೇ ಅರ್ಥ. ಎಲ್ಲೆಲ್ಲೂ ಇರುವ ವಿಷ್ಣು ಈಗ ನಮ್ಮೊಳ್ಳೂ ಇದ್ದಾನೆ ಎಂಬ ಅರಿವು ನಮ್ಮಲ್ಲಿ ಆಗ ಮೂಡುವುದು. ವಿಷ್ಣು ಇದ್ದಾನೆ ಎಂದರೆ ಅದು ವೈಕುಂಠ ಆಗಿರಲೇ ಬೇಕಲ್ಲವೆ? ನಮ್ಮ ಈ ಜಗತ್ತೇ, ನಾವಿರುವ ತಾಣವೇ ಆ ಕ್ಷಣ ನಮಗೆ ವೈಕುಂಠವಾಗಿ ಒದಗುತ್ತದೆ. ಇಂಥ ಅರಿವನ್ನು ನೆನಪಿಸುತ್ತದೆ, 'ವೈಕುಂಠ ಏಕಾದಶಿ.'

ವೈಕುಂಠ ಏಕಾದಶಿಯಂದು ಶ್ರದ್ಧಾಳುಗಳು ವೆಂಕಟೇಶ್ವರನ ದೇವಾಲಯಕ್ಕೆ ಹೋಗುವುದುಂಟು ವಾಡಿಕೆ. ಈ ದೇವಾಲಯಗಳಲ್ಲಿ 'ವೈಕುಂಠದ್ವಾರ'ವನ್ನು ಸಿದ್ಧಪಡಿಸಿರುತ್ತಾರೆ. ವೆಂಕಟೇಶ್ವರ ಕಲಿಯುಗದ ದಿಟವಾದ ದೈವ; ವಿಷ್ಣುವಿನ ಅವತಾರ; ಅವನು ಶ್ರೀನಿವಾಸ ಕೂಡ. 'ಶ್ರೀ' ಎಂದರೆ ಲಕ್ಷ್ಮೀ; ಆಕೆ ವಿಷ್ಣುವಿನ ಮಡದಿ. ಹೀಗೆ ವಿಷ್ಣುವಿನ ಕಲಿಯುಗದ ದೈವ ಶ್ರೀನಿವಾಸನೂ ನಂಟು. ಆದುದರಿಂದ ಶ್ರೀನಿವಾಸನ ಆಲಯ ಎಂದರೆ ಅದು ವಿಷ್ಣುನಿವಾಸವಿದ್ದಂತೇ ಹೌದು. 'ವೇಂಕಟ' ಎಂದರೆ ತೊಂದರೆಗಳನ್ನು ಸುಡುವವನು ಎಂದು ಅರ್ಥ. ಹೀಗಾಗಿ ಜೀವನದಲ್ಲಿ ನಮಗೆ ಒದಗಿರುವ ಸಂಕಟಗಳನ್ನು ದೂರಮಾಡಿಕೊಂಡು, ನೆಮ್ಮದಿಯ ಬೆಳಕನ್ನು ತುಂಬಿಕೊಳ್ಳಬೇಕೆಂಬ ತುಡಿತದಲ್ಲಿ ಸಿದ್ಧಗೊಂಡ ಆರಾಧನೆಯ ಸಂಕೇತವೇ ವೈಕುಂಠ ಏಕಾದಶಿಯ ಆಚರಣೆ. ❖

ಜ್ಯೇಷ್ಠತೆ ಆಧಾರದಲ್ಲಿ ಪಾವತಿಗೆ ಸಚಿವ ಸತೀಶ ಜಾರಕಿಹೊಳಿ ಸೂಚನೆ

'ಗುತ್ತಿಗೆದಾರರ ಬಾಕಿ ಬಿಲ್ ಪಾವತಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕೋಪಯೋಗಿ ಇಲಾಖೆಯಲ್ಲಿ 2023ರ ಮಾರ್ಚ್‌ವರೆಗೆ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಪಾವತಿ ಮಾಡಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ಸೂಚಿಸಿದರು.

ರಾಜ್ಯ ಹಾಗೂ ಜಿಲ್ಲಾ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಹಾಗೂ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳೊಂದಿಗೆ ಬುಧವಾರ ರಾತ್ರಿ ಸಭೆ ನಡೆಸಿದ ಸಚಿವರು, ಜ್ಯೇಷ್ಠತೆ ಆಧಾರದಲ್ಲಿ ಕೂಡಲೇ ಬಿಲ್ ಪಾವತಿಸಲು ಹೇಳಿದರು.

'ಕಾಮಗಾರಿಗಳ ಬಿಲ್ ಪಾವತಿಸುವ ಸಮಯದಲ್ಲಿ ಉಪ ಖನಿಜಗಳ ಬಳಕೆಗೆ ಸಂಬಂಧಿಸಿದಂತೆ ಐದು ಪಟ್ಟು ರಾಜಧನ, ಹೆಚ್ಚುವರಿ ಪಾವತಿ ಮೊತ್ತವನ್ನು ಕಡಿತಗೊಳಿಸಲು ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ ಪಡೆಯಬೇಕು' ಎಂದು ಗುತ್ತಿಗೆದಾರರು ಮನವಿ ಮಾಡಿಕೊಂಡರು. ಇದಕ್ಕೆ ಸ್ಪಂದಿಸಿದ ಸಚಿವರು, 'ಗಣಿ ಮತ್ತು ಭೂ ವಿಜ್ಞಾನ ಇಲಾಖೆ ತಿದ್ದುಪಡಿ ತಂದು ದಂಡ ಕಡಿತ ವಾಪಸ್ ಪಡೆಯಲಾಗುತ್ತದೆ' ಎಂದು ಭರವಸೆ ನೀಡಿದರು.

'2017-18 ಹಾಗೂ 2018-19ನೇ ಸಾಲಿನಲ್ಲಿದ್ದ ಶೇ 4ರಷ್ಟು ವ್ಯಾಟ್ ಅನ್ನು ಶೇ 12ರಷ್ಟು ಜಿಎಸ್‌ಟಿಗೆ ಸೇರಿಸಲಾಗಿದೆ. ಅದರ ವ್ಯತ್ಯಾಸ ಮೊತ್ತ ಶೇ 8ರಷ್ಟು ಸರ್ಕಾರವೇ ಭರಿಸಲು ಆದೇಶವಾಗಿದೆ, ಆದರೆ ಅನುಷ್ಠಾನವಾಗಿಲ್ಲ' ಎಂದು ಗುತ್ತಿಗೆದಾರರು ಸಚಿವರ ಗಮನಕ್ಕೆ ತಂದರು. 'ಫೆಬ್ರುವರಿ 15ರೊಳಗೆ ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ' ಎಂದು ಹೇಳಿದರು.

'ಲೋಕೋಪಯೋಗಿ ಇಲಾಖೆಯಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳ ಸುಮಾರು ₹8 ಸಾವಿರ ಕೋಟಿ ಬಿಲ್ ಬಾಕಿ ಇದೆ. 2023ರ ಮಾರ್ಚ್‌ವರೆಗಿನ ಪಾವತಿಯಾದರೆ ಇನ್ನೂ ₹5 ಸಾವಿರ ಕೋಟಿ ಬಾಕಿ ಇರುತ್ತದೆ. ಕಾಮಗಾರಿ ನಿರ್ವಹಿಸಿದ ಪ್ರಮಾಣಪತ್ರದ ಅವಧಿಯನ್ನು ಐದು ವರ್ಷದಿಂದ ಹತ್ತು ವರ್ಷಕ್ಕೆ ವಿಸ್ತರಿಸಬೇಕು ಎಂಬ ಗುತ್ತಿಗೆದಾರರ ಬೇಡಿಕೆಗೂ ಸಮ್ಮತಿ ನೀಡಿರುವ ಸಚಿವರು, ನಮ್ಮ ಎಲ್ಲ ಬೇಡಿಕೆಗಳನ್ನೂ ಶೀಘ್ರ ಈಡೇರಿಸುವುದಾಗಿ ಭರವಸೆ ನೀಡಿದರು' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ಆರ್. ಮಂಜುನಾಥ್ ಮಾಹಿತಿ ನೀಡಿದರು.

ಸಂಘದ ಪ್ರಧಾನ ಅಧ್ಯಕ್ಷ ಜಗನ್ನಾಥ್ ಬಿ. ಶೇಗಜಿ, ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ಹಾಗೂ ಜಿಲ್ಲೆಗಳ ಗುತ್ತಿಗೆದಾರರ ಸಂಘದ ಅಧ್ಯಕ್ಷರು, ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ಸಭೆಯಲ್ಲಿ ಭಾಗವಹಿಸಿದ್ದರು.

ಅಕ್ಕಮಹಾದೇವಿ ವಿಶ್ವವಿದ್ಯಾಲಯ: ಡಾಕ್ಟರೇಟ್ ಪ್ರದಾನ

ವಿಜಯಪುರ: ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 16ನೇ ಘಟಿಕೋತ್ಸವವು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರ ಅನುಪಸ್ಥಿತಿಯಲ್ಲಿ ನಡೆಯಿತು. 13,461 ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ ಪದವಿ ಹಾಗೂ 34 ವಿದ್ಯಾರ್ಥಿನಿಯರಿಗೆ ಪಿ.ಎಚ್‌ಡಿ, ನಟಿ ತಾರಾ ಅನುರಾಧಾ, ಸಾಹಿತಿ ಮೀನಾಕ್ಷಿ ಬಾಳಿ ಮತ್ತು ಶಿಗ್ಗಾವಿಯ ವೇದರಾಣಿ ದಾಸನೂರು ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.



ವಿಜಯಪುರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 16ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕಗಳನ್ನು ಪಡೆದು ಶಿಲ್ಪಾ ಪಡೆಪ್ಪಗೋಳ, ಅಫರಿನ್ ಆರ್.ಶಿಲೇದಾರ, ಪಲ್ಲವಿ ಯರನಾಳ, ಸೌಜನ್ಯಾ ಜಿಂಜರವಾಡ ಮತ್ತು ವನಿತಾ ಸಾವಂತ ಅವರು ಸಂಭ್ರಮಿಸಿದರು —ಪ್ರಜಾವಾಣಿ ಚಿತ್ರ

ಬಿಸಿಬೂದಿ: ಗಾಯಗೊಂಡಿದ್ದ ಮೂವರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಇಲ್ಲಿನ ಭೈರಮಂಗಲ ರಸ್ತೆಯಲ್ಲಿ ಇರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದಲ್ಲಿ ಬಿಸಿ ಬೂದಿ ಸಿಡಿದು ಸಂಭವಿಸಿದ್ದ ಅವಘಡದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಮೂವರು ಕಾರ್ಮಿಕರು ಮೃತಪಟ್ಟಿದ್ದಾರೆ. ಇದರೊಂದಿಗೆ ಈ ಘಟನೆಯಲ್ಲಿ ಸತ್ತ ಕಾರ್ಮಿಕರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಮಲೇಶ್ (31), ಲಖನ್ (28) ಬುಧವಾರ ರಾತ್ರಿ ಹಾಗೂ ತರುಣ್ ಕುಮಾರ್ (24) ಗುರುವಾರ ಮೃತಪಟ್ಟಿದ್ದಾರೆ.

ದುರ್ಘಟನೆ ನಡೆದ ಜನವರಿ 7ರಂದು ಮತ್ತೊಬ್ಬ ಕಾರ್ಮಿಕ ಉಮೇಶ್ ಕುಮಾರ್ ಸಿಂಗ್ (34) ಕೊನೆಯುಸಿರೆಳೆದಿದ್ದರು. ಪ್ರಕರಣದ ದೂರುದಾರ ಸಂಟೂನ ಸದಾಯ್ ಎಂಬ ಕಾರ್ಮಿಕ ಸಾವು-ಬದುಕಿನ ಮಧ್ಯೆ ಆಸ್ಪತ್ರೆಯಲ್ಲಿ ಹೋರಾಡುತ್ತಿದ್ದಾರೆ.

ಬಿಸಿ ಬೂದಿ ಹಾಗೂ ಅರೆಬರೆ ಬೆಂದಿದ್ದ ಕಸ ಕಾರ್ಮಿಕರ ಮೇಲೆ ಬಿದ್ದಿದ್ದರಿಂದ ಎಲ್ಲರಿಗೂ ತೀವ್ರತರವಾದ ಸುಟ್ಟ ಗಾಯಗಳಾಗಿದ್ದವು. ಎಲ್ಲರಿಗೂ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆರೋಗ್ಯ ಕ್ಷೀಣಿಸಿದ್ದರಿಂದ ನಾಲ್ವರು ಕಾರ್ಮಿಕರು ಕೊನೆಯುಸಿರೆಳೆದಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸ್ಥಾವರದ ನಿರ್ವಹಣೆಯ ಹೊಣೆ ಹೊತ್ತಿರುವ ಐವರು ಅಧಿಕಾರಿಗಳ ವಿರುದ್ಧ ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹೆಬಾ ಪಟೇಲ್

ರಾಮರಸಕ್ಕೆ ಹೆಬಾ ಪಟೇಲ್ ನಾಯಕಿ

‘ಜಟ್ಟ’, ‘ಮೈತ್ರಿ’ ಚಿತ್ರದ ನಿರ್ದೇಶಕ ಬಿ.ಎಂ. ಗಿರಿರಾಜ್ ನಿರ್ದೇಶನದ ‘ರಾಮರಸ’ ಸಿನಿಮಾದ ನಾಯಕಿಯಾಗಿ ‘ಅಧ್ಯಕ್ಷ’ ಖ್ಯಾತಿಯ ಹೆಬಾ ಪಟೇಲ್ ಆಯ್ಕೆಯಾಗಿದ್ದಾರೆ. ಕನ್ನಡ ಚಿತ್ರರಂಗದಿಂದ ನಟನೆಯ ಪಯಣ ಆರಂಭಿಸಿದ್ದ ಹೆಬಾ, ಹಲವಾರು ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಇವರು ನಟಿಸಿದ ಮೊದಲ ಚಿತ್ರ ‘ಅಧ್ಯಕ್ಷ’ ಕನ್ನಡದ ಹಿಟ್ ಚಿತ್ರಗಳಲ್ಲಿ ಒಂದಾಗಿದೆ. ನಂತರ ತೆಲುಗಿನಲ್ಲಿ ‘ಕುಮಾರಿ 21F’ ಚಿತ್ರ ಇವರಿಗೆ ಖ್ಯಾತಿ ತಂದು ಕೊಟ್ಟಿತ್ತು. ನಿರ್ದೇಶಕ ಗುರು ದೇಶಪಾಂಡೆ ನಿರ್ಮಾಣ ಮಾಡುತ್ತಿರುವ ಈ ಚಿತ್ರದಲ್ಲಿ ‘ಜಿ ಅಕಾಡೆಮಿ’ಯಲ್ಲಿ ನಟನೆ ಕಲಿತಿರುವ ಹದಿನೈದು ಪ್ರತಿಭೆಗಳು ನಟಿಸುತ್ತಿದ್ದಾರೆ. ನಾಯಕನ ಪಾತ್ರದಲ್ಲಿ ‘ಬಿಗ್‌ಬಾಸ್’ ಖ್ಯಾತಿಯ ಕಾರ್ತಿಕ್ ಮಹೇಶ್ ಅಭಿನಯಿಸುತ್ತಿದ್ದಾರೆ. ದೊಡ್ಡ ಬಜೆಟ್‌ನಲ್ಲೇ ಸಿನಿಮಾ ನಿರ್ಮಾಣವಾಗಿದ್ದು, ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿ ಸಿನಿಮಾವಿದೆ. ❖

ವರ್ಷಕ್ಕೆ ಎರಡು ಸಿನಿಮಾ ಶರಣ್



ಶರಣ್

ಅಭಿಲಾಷ್ ಪಿ.ಎಸ್.

ನಟ ಶರಣ್ ಸಿನಿಗ್ರಾಫ್ ಇತ್ತೀಚೆಗೆ ಇಳಿಕೆಯಾಗಿದೆ. ಕಳೆದ ವರ್ಷದ ಏಪ್ರಿಲ್‌ನಲ್ಲಿ ಅವರು ನಟಿಸಿದ್ದ ‘ಅವತಾರ ಪುರುಷ-2’ ಸಿನಿಮಾವನ್ನು ಹೊರತುಪಡಿಸಿ ಇಲ್ಲಿಯವರೆಗೆ ಬೇರೆ ಸಿನಿಮಾಗಳು ತೆರೆಕಂಡಿಲ್ಲ. ಕಳೆದ ವರ್ಷ ಎರಡು ಬಾರಿ ಬಿಡುಗಡೆ ದಿನಾಂಕ ಘೋಷಿಸಿ ಮುಂದೂಡಿಕೆಯಾಗಿದ್ದ ನವನೀತ್ ನಿರ್ದೇಶನದ, ಶರಣ್ ನಟನೆಯ ‘ಛೂ ಮಂತರ್’ ಇಂದು (ಜ.10) ಬಿಡುಗಡೆಯಾಗುತ್ತಿದ್ದು, ‘ಸಿನಿಮಾ ಪುರವಣಿ’ ಜೊತೆಗೆ ಅವರು ಮಾತನಾಡಿದ್ದಾರೆ.

‘ನಾನು ಸಿನಿಮಾ ಒಪ್ಪಿಕೊಳ್ಳುವ ರೀತಿ ಬೇರೆಯವರಿಗಿಂತ ಭಿನ್ನ. ಕೆಲವೊಮ್ಮೆ ನಾನಾ ಕಾರಣಗಳಿಂದ ಸಿನಿಮಾ ವಿಳಂಬವಾಗುತ್ತದೆ. ಉದ್ದೇಶಪೂರ್ವಕವಾಗಿ ಯಾರೂ ತಡ ಮಾಡುವುದಿಲ್ಲ. ಆದರೆ ನಾನು ಸಿನಿಮಾ ಒಪ್ಪಿಕೊಳ್ಳುವ ರೀತಿಯನ್ನು ಬದಲಾಯಿಸಿಕೊಳ್ಳಬೇಕಾಗಿದೆ. ವರ್ಷಕ್ಕೆ ಎರಡು ಸಿನಿಮಾಗಳಲ್ಲಾದರೂ ನಟಿಸುತ್ತೇನೆ. ಕಳೆದ ವರ್ಷ ‘ಅವತಾರ ಪುರುಷ’ ಸೀಕ್ವೆಲ್ ಬಂತಷ್ಟೇ. ನನ್ನ ಬೇರೆ ಸಿನಿಮಾಗಳೇ ಬರಲಿಲ್ಲ. ಈ ಅವಧಿಯಲ್ಲಿ ನಾನು ‘ಛೂ ಮಂತರ್’ ಆದ ತಕ್ಷಣ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಳ್ಳೋಣ ಎಂದಿದ್ದೆ. ಆದರೆ ಕಾರಣಾಂತರಗಳಿಂದ ಈ ಸಿನಿಮಾ ವಿಳಂಬವಾಯಿತು. ಒಂದು ಸಿನಿಮಾ ವಿಳಂಬವಾಯಿತು ಎಂದು ಏಕಾಏಕಿ ಮತ್ತೊಂದು ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ. ಹೌದು, ನಾನು ಸಿನಿಮಾ ಮಾಡುವುದು ತುಂಬಾ ಕಮ್ಮಿಯಾಯಿತು ಎಂದೆನಿಸುತ್ತಿದೆ. ಎರಡು ಸಿನಿಮಾಗಳು ಚರ್ಚೆಯ ಹಂತದಲ್ಲಿವೆ. ಇದರಲ್ಲಿ ಒಂದು ಸಿನಿಮಾದ ಶೂಟಿಂಗ್ ಆರಂಭವಾಗಿದೆ. ಎರಡೂ ಶೀಘ್ರದಲ್ಲೇ ಘೋಷಣೆಯಾಗಲಿದೆ’ ಎನ್ನುತ್ತಾ ಮಾತು ಆರಂಭಿಸಿದರು.

‘ಛೂ ಮಂತರ್ ಸಿನಿಮಾದಲ್ಲಿ ನಿಮ್ಮ ಪಾತ್ರ ಹೇಗೆ ಭಿನ್ನವಾಗಿದೆ?’ ಎನ್ನುವ ಪ್ರಶ್ನೆಗೆ ಉತ್ತರಿಸುತ್ತಾ, ‘ಈ ಸಿನಿಮಾದಲ್ಲಿ ಭಿನ್ನ ಶರಣ್ ಇರುತ್ತಾನೆ. ಆದರೆ ಪ್ರೇಕ್ಷಕರಿಗೆ ಹಳೇ ಶರಣ್ ಮಿಸ್ ಆಗಲ್ಲ. ‘ಗುರುಶಿಷ್ಯರು’ ಸಿನಿಮಾದಲ್ಲಿ ಒಂದು ಭಿನ್ನವಾದ ಪಾತ್ರವನ್ನು ಪ್ರಯತ್ನಿಸಿದೆ. ಆದರೆ ‘ಶರಣಿಸಮ್’ ಎನ್ನುವುದು ಮರೆಯಾಗಲಿಲ್ಲ. ‘ಛೂ ಮಂತರ್’ ಸಿನಿಮಾದಲ್ಲಿ ಭಿನ್ನ ಶೈಲಿಯ ಶರಣ್‌ನ ಪ್ರಮಾಣ ಹೆಚ್ಚಿರುತ್ತದೆ. ನಾನು ಈ ಸಿನಿಮಾದಲ್ಲಿ ‘ಡೈನಮೋ’ ಎಂಬ ಪಾತ್ರ ಮಾಡಿದ್ದೇನೆ. ಮನರಂಜನಾತ್ಮಕ ದೃಷ್ಟಿಯಿಂದ ನೋಡುವುದಾದರೆ ‘ಅಧ್ಯಕ್ಷ’, ‘ರ‍್ಯಾಂಬೋ’, ‘ಗುರುಶಿಷ್ಯರು’ ಸಿನಿಮಾಗಳಿಗಿಂತ ಭಿನ್ನವಾದ ಶೈಲಿಯಲ್ಲಿ ‘ಛೂ ಮಂತರ್’ನಲ್ಲಿ ನಾನು ಎಂಟರ್‌ಟೈನ್ ಮಾಡುತ್ತೇನೆ. ಈ ಪಾತ್ರಕ್ಕೆ ನ್ಯಾಯ ಒದಗಿಸಿದ್ದೇನೆ’ ಎಂದರು.

‘ನಾನು ಮೊದಲ ಬಾರಿಗೆ ಹಾರರ್ ಜಾನರ್‌ನ ಸಿನಿಮಾ ಕೈಗೆತ್ತಿಕೊಂಡಿರುವುದು. ಹಾರರ್ ಜಾನರ್‌ನ ಪ್ರಪಂಚದಲ್ಲಿ ಕಣ್ಣಿಗೆ ಮತ್ತು ಕಿವಿಗೆ ಹೆಚ್ಚಿನ ಕೆಲಸ. ಈ ಸಿನಿಮಾದಲ್ಲಿ ಛಾಯಾಚಿತ್ರಗ್ರಹಣ ಹಾಗೂ ಶಬ್ದ ವಿನ್ಯಾಸ ಅದ್ಭುತವಾಗಿ ಮೂಡಿಬಂದಿದೆ. ಸೆಟ್‌ನಲ್ಲಿ ದೃಶ್ಯವೊಂದನ್ನು ಮುಗಿಸಿ ಮಾನಿಟರ್ ನೋಡಿದಾಗಲೇ ಶೇ 40ರಷ್ಟು ನಾವು ಗೆದ್ದಾಗಿತ್ತು. ಇಡೀ ಸಿನಿಮಾ ಹಾರರ್ ಜಾನರ್‌ನಲ್ಲಿ ಇಲ್ಲ. ಈ ಸಿನಿಮಾದ ‘ಯುಎಸ್‌ಪಿ’ ಅಂದರೆ ಮುಖ್ಯವಾದ ಅಂಶವೇ ಹಾರರ್. ಈ ಕಥೆ ಬೇರೆ ಬೇರೆ ರಸಗಳನ್ನು ಹೊಂದಿದೆ. ಹಾರರ್ ಸಿನಿಮಾಗಳನ್ನು ಇಷ್ಟಪಡುವವರ ಸಂಖ್ಯೆ ದೊಡ್ಡದಿದೆ. ನನಗೆ ಮೊದಲಿನಿಂದಲೂ ಹಾರರ್ ಸಿನಿಮಾಗಳೆಂದರೆ ಇಷ್ಟ. ನನಗೆ ಒತ್ತಡ ಹೆಚ್ಚು ಇದ್ದಾಗ ಹಾರರ್ ಸಿನಿಮಾ ನೋಡುತ್ತೇನೆ. ಅದೇ ರೀತಿ ಅಯ್ಯೋ ಹಾರರ್ ಸಿನಿಮಾವೇ ಎಂದು ಪ್ರಶ್ನಿಸುವ ವರ್ಗದ ಸಂಖ್ಯೆಯೂ ದೊಡ್ಡದಿದೆ. ‘ಛೂ ಮಂತರ್’ ಸಿನಿಮಾ ಎರಡೂ ವರ್ಗಕ್ಕೆ ಇಷ್ಟವಾಗುತ್ತದೆ. ‘ಫ್ಯಾಮಿಲಿ ಇಷ್ಟ ಪಡುವ ದೆವ್ವದ ಪಿಕ್ಚರ್ ಇದು’ ಎಂದು ನಾನೇ ತಮಾಷೆಗೆ ಹೇಳುತ್ತಿರುತ್ತೇನೆ’ ಎಂದು ಶರಣ್ ಮಾತಿಗೆ ವಿರಾಮವಿತ್ತರು. ❖

ಫೆ.14ಕ್ಕೆ ಭುವನಂ ಗಗನಂ



‘ರತ್ನನ್ ಪ್ರಪಂಚ’, ‘ಸಲಾರ್’ ಖ್ಯಾತಿಯ ಪ್ರಮೋದ್ ಹಾಗೂ ‘ದಿಯಾ’ ಖ್ಯಾತಿಯ ಪೃಥ್ವಿ ಅಂಬಾರ್ ನಟನೆಯ ‘ಭುವನಂ ಗಗನಂ’ ಸಿನಿಮಾ ಫೆ.14ರಂದು ಬಿಡುಗಡೆಯಾಗಲಿದೆ.

ಗಿರೀಶ್ ಮೂಲಿಮನಿ ಈ ಸಿನಿಮಾಗೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ‘ಭುವನಂ ಗಗನಂ’ ಪ್ರೇಮ, ಪ್ರಣಯ ಮತ್ತು ಕೌಟುಂಬಿಕ ಭಾವನೆಗಳನ್ನು ಹೊಂದಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ನಡೆಯುತ್ತದೆ. ‘ಲವ್ ಮಾಕ್ಟೇಲ್’ ಖ್ಯಾತಿಯ ರೇಚಲ್ ಡೇವಿಡ್ ಪ್ರಮೋದ್ ಅವರಿಗೆ ಜೋಡಿಯಾಗಿದ್ದು, ಅಶ್ವತಿ ಪೃಥ್ವಿಗೆ ಜೋಡಿಯಾಗಿದ್ದಾರೆ. ಅಚ್ಯುತ್ ಕುಮಾರ್, ಶರತ್ ಲೋಹಿತಾಶ್ವ, ಪ್ರಕಾಶ್ ತುಮ್ಮಿನಾಡು, ಸಿದ್ಲಿಂಗು ಶ್ರೀಧರ್, ಹರಿಣಿ, ಸ್ಪರ್ಶ ರೇಖಾ, ಪ್ರಜ್ವಲ್ ಶೆಟ್ಟಿ ಮತ್ತು ಚೇತನ್ ದುರ್ಗ ಚಿತ್ರದ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ಉದಯ್ ಲೀಲಾ ಛಾಯಾಚಿತ್ರಗ್ರಹಣ, ಗುಮ್ಮನೇನಿ ವಿಜಯ್ ಅವರ ಸಂಗೀತ ಮತ್ತು ಸುನೀಲ್ ಕಶ್ಯಪ್ ಸಂಕಲನವಿದೆ. ❖

ಮೂರು ಸಿನಿಮಾಗಳು ತೆರೆಗೆ

ಇಂದು (ಜ.10) ಕನ್ನಡದ ಮೂರು ಸಿನಿಮಾಗಳು ತೆರೆಕಾಣುತ್ತಿವೆ. ಕಳೆದ ವರ್ಷಾಂತ್ಯದಲ್ಲಿ ತೆರೆಕಂಡ ‘ಮ್ಯಾಕ್ಸ್’ ಇನ್ನೂ ಹಲವು ಚಿತ್ರಮಂದಿರಗಳನ್ನು ಉಳಿಸಿಕೊಂಡಿದೆ. ಸಂಕ್ರಾಂತಿ ಹಬ್ಬದ ಹೊಸ್ತಿಲಲ್ಲಿ ತೆಲುಗಿನ ರಾಮ್‌ಚರಣ್ ನಟನೆಯ ‘ಗೇಮ್ ಚೇಂಜರ್’ ಕೂಡಾ ಇಂದು ಬಿಡುಗಡೆಯಾಗುತ್ತಿದೆ. ಹೀಗಾಗಿ ಹೊಸ ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳ ಕೊರತೆ ಎದುರಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಏಕಪರದೆ ಚಿತ್ರಮಂದಿರಗಳ ಮಾಲೀಕರು ಪರದೆಯನ್ನು ತೆಲುಗು ಚಿತ್ರಕ್ಕೆ ನೀಡಿದ್ದಾರೆ ಎಂದು ‘ಛೂ ಮಂತರ್’ ತಂಡ ಆರೋಪಿಸಿದೆ. ಇಂದು ತೆರೆಕಾಣಬೇಕಿದ್ದ ‘ಸಂಜು ವೆಡ್ಸ್ ಗೀತಾ-2’ ಸಿನಿಮಾ ಮುಂದೂಡಿಕೆಯಾಗಿದೆ.

ಛೂ ಮಂತರ್: ಶರಣ್ ನಟನೆಯ ಈ ಸಿನಿಮಾವನ್ನು ನವನೀತ್ ನಿರ್ದೇಶಿಸಿದ್ದಾರೆ. ಸಿನಿಮಾದಲ್ಲಿ ಶರಣ್ ಜೊತೆಗೆ ಪ್ರಭು ಮುಂಡ್ಕೂರು, ಅದಿತಿ ಪ್ರಭುದೇವ ಹಾಗೂ ಮೇಘನಾ ಗಾಂವ್ಕರ್ ನಟಿಸಿದ್ದು, ತರುಣ್ ಸ್ಟುಡಿಯೋಸ್ ಲಾಂಛನದಲ್ಲಿ ತರುಣ್ ಶಿವಪ್ಪ ಹಾಗೂ ಮಾನಸ ತರುಣ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಇದೊಂದು ಹಾರರ್ ಜಾನರ್ ಸಿನಿಮಾವಾಗಿದ್ದು, ನಟ ಚಿಕ್ಕಣ್ಣ ಕೂಡ ಈ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. ಹೀಗೆ ‘ಅಧ್ಯಕ್ಷ’ ಮತ್ತು ‘ಉಪಾಧ್ಯಕ್ಷ’ನ ಸಮ್ಮಿಲನ ಈ ಚಿತ್ರದಲ್ಲಿದೆ.



ಅದಿತಿ ಪ್ರಭುದೇವ

ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು: ಕೇಶವ್ ಮೂರ್ತಿ ನಿರ್ದೇಶನದ ಈ ಚಿತ್ರದಲ್ಲಿ ದಿಲೀಪ್ ರಾಜ್, ಶಿಲ್ಪಾ ಮಂಜುನಾಥ್, ಮಧುಸೂದನ್, ಅಪೂರ್ವ ಭಾರಧ್ವಾಜ್, ಪ್ರಸನ್ನ ಶೆಟ್ಟಿ, ವಂಶಿ ಕೃಷ್ಣ ಮತ್ತಿತರ ಕಲಾವಿದರು ನಟಿಸಿದ್ದಾರೆ. ಪಿಕ್ಚರ್ ಶಾಪ್, ಮಗೇಶ್ ರವೀಂದ್ರನ್, ಕುಬೇಂದ್ರನ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಚಿತ್ರಕ್ಕೆ ಪ್ರಸಾದ್ ಕೆ. ಶೆಟ್ಟಿ ಸಂಗೀತ, ಹರ್ಷಕುಮಾರ್ ಗೌಡ ಛಾಯಾಚಿತ್ರಗ್ರಹಣ, ಕುಬೇಂದ್ರನ್ ಸಂಕಲನ, ಕೇಶವ್ ಮೂರ್ತಿ ಸಂಭಾಷಣೆಯಿದೆ. ಇವುಗಳ ಜೊತೆಗೆ ಲೋಕೇಶ್ ಬಿ.ನಿರ್ದೇಶನದ ‘ಟೆಡ್ಡಿ ಬೇರ್’ ಸಿನಿಮಾ ಬಿಡುಗಡೆಗೊಳ್ಳುತ್ತಿದ್ದು, ಭಾರ್ಗವ, ಶೈಲಜಾ ಸಿಂಹ ತಾರಾಬಳಗದಲ್ಲಿದ್ದಾರೆ. ❖

ಬಿಟಿಎಂ ಬಡಾವಣೆ 4ನೇ ಹಂತದಲ್ಲಿ ರಸ್ತೆ; ಕೆಂಗೇರಿ ಉಪನಗರದಲ್ಲಿ ನಿವೇಶನ • ನಿಯಮ ಉಲ್ಲಂಘಿಸಿದ ಬಿಡಿಎ

ನಿಯಮ ಮೀರಿ ಬದಲಿ ನಿವೇಶನ ಹಂಚಿಕೆ

• ಆರ್. ಮಂಜುನಾಥ್

ಬೆಂಗಳೂರು: ಬಿಟಿಎಂ ನಾಲ್ಕನೇ ಹಂತದ ಬಡಾವಣೆಯ ರಸ್ತೆಗೆ ಬಳಸಿಕೊಂಡ ಜಮೀನಿನ ಮಾಲೀಕರಿಗೆ ಬದಲಿ ನಿವೇಶನ ಹಂಚಿಕೆಯಲ್ಲಿ ನಿಯಮ ಉಲ್ಲಂಘಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಅದಕ್ಕಿಂತಲೂ ಹಿಂದೆ ನಿರ್ಮಿಸಿದ್ದ ಬಡಾವಣೆಗಳಲ್ಲಿ ಮೂರು ನಿವೇಶನಗಳನ್ನು ಪರಿಹಾರದ ರೂಪದಲ್ಲಿ ನೀಡಿದೆ.

ಬೈರಸಂದ್ರ– ತಾವರೆಕೆರೆ– ಮಡಿವಾಳ (ಬಿಟಿಎಂ) ಬಡಾವಣೆಯ ನಿರ್ಮಾಣಕ್ಕಾಗಿ ಹೊರಡಿಸಲಾಗಿದ್ದ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಗಳಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು ಬೇಗೂರು ಹೋಬಳಿ ಬಿಳೇಕಹಳ್ಳಿ ಗ್ರಾಮದ ಸರ್ವೆ ನಂ. 62ರಲ್ಲಿ 16 ಗುಂಟೆ ಜಮೀನು ಸೇರಿರಲಿಲ್ಲ. ಆದರೂ ಜಮೀನನ್ನು ಬಿಡಿಎ ರಸ್ತೆ ನಿರ್ಮಿಸಲು ಬಳಸಿಕೊಂಡಿದೆ. ಯಾವುದೇ ಪರಿಹಾರವನ್ನೂ ನೀಡಿರಲಿಲ್ಲ. ಹೀಗಾಗಿ ಪರ್ಯಾಯ ನಿವೇಶನ ನೀಡುವಂತೆ ಜಮೀನಿನ ಜಂಟಿ ಮಾಲೀಕರಾದ ಕೆ. ದೇವದಾಸ್ ಹಲವು ಮನವಿ ಸಲ್ಲಿಸಿದ್ದರು. ಅದಕ್ಕೆ ಬಿಡಿಎ ಸ್ಪಂದಿಸಿರಲಿಲ್ಲ.

ದೇವದಾಸ್ ಅವರು ಹೈಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿದ್ದರು. ಬದಲಿ ನಿವೇಶನ ನೀಡುವಂತೆ ಹೈಕೋರ್ಟ್ 2021ರ ಮಾರ್ಚ್ 26ರಂದು ನೀಡಿದ್ದ ಆದೇಶವನ್ನೂ ಬಿಡಿಎ ಪಾಲಿಸದಿದ್ದರಿಂದ ಅವರು 'ನ್ಯಾಯಾಂಗ ನಿಂದನೆ' ಪ್ರಕರಣವನ್ನೂ 2024ರ ಆಗಸ್ಟ್ 13ರಂದು ದಾಖಲಿಸಿದ್ದರು. 'ಬದಲಿ ನಿವೇಶನ ನೀಡಲಾಗುತ್ತಿದೆ' ಎಂದು ಬಿಡಿಎ ತಿಳಿಸಿದ್ದರಿಂದ ಪ್ರಕರಣವನ್ನು ನ್ಯಾಯಾಲಯ ವಿಲೇವಾರಿ ಮಾಡಿತ್ತು.

'ಹಂಚಿಕೆ ಆದೇಶದಂತೆ ಕ್ರಮ'

'ಬಡಾವಣೆ ನಿರ್ಮಾಣಕ್ಕೆ ಹೊರಡಿಸಲಾದ ಭೂಸ್ವಾಧೀನದ ಅಂತಿಮ ಅಧಿಸೂಚನೆಯನ್ನು ಬದಲಿ ನಿವೇಶನ ನೀಡಲು ಪರಿಗಣಿಸುವುದಿಲ್ಲ. ಹಂಚಿಕೆಗೆ ಲಭ್ಯವಿರುವ ನಿವೇಶನಗಳಿಗೆ ಹೊರಡಿಸಲಾಗಿರುವ ಆದೇಶದಂತೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ' ಎಂದು ಬಿಡಿಎ ಆಯುಕ್ತರ ಸೂಚನೆ ಮೇರೆಗೆ ಬಿಡಿಎ ಉಪ ಕಾರ್ಯದರ್ಶಿಯೊಬ್ಬರು ಮಾಹಿತಿ ನೀಡಿದರು.

'ಬಿಟಿಎಂ ಬಡಾವಣೆ ನಾಲ್ಕನೇ ಹಂತದ ಭೂಸ್ವಾಧೀನಕ್ಕೆ 1990ರ ನವೆಂಬರ್ 3ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಇದರಲ್ಲಿ ಬಿಳೇಕಹಳ್ಳಿ ಭಾಗದ ಜಮೀನುಗಳಿವೆ. ಇದೇ ಭಾಗದಲ್ಲಿಯೇ ದೇವದಾಸ್ ಅವರ ಜಮೀನು ಇತ್ತು. ಹೀಗಾಗಿ, ಬಿಡಿಎ ನಿಯಮ ಹಾಗೂ ಸರ್ಕಾರದ ಆದೇಶದಂತೆ 1990ರ ನಂತರ ರಚಿಸಲಾಗಿರುವ ಬಡಾವಣೆಗಳಲ್ಲಿ ಮಾತ್ರ ಬದಲಿ ನಿವೇಶನ ಹಂಚಿಕೆಯಾಗಬೇಕು. ಬದಲಿ ನಿವೇಶನಗಳನ್ನು ನೀಡಲು ಭೂಸ್ವಾಧೀನ ಅಂತಿಮ ಅಧಿಸೂಚನೆಯನ್ನು ಪರಿಗಣಿಸಬೇಕೇ ಹೊರತು ನಿವೇಶನ ಹಂಚಿಕೆ ದಿನವನ್ನಲ್ಲ' ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಪಡೆದಿರುವ ಕುಮಾರ್ ಹೇಳಿದರು.

ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆ


1964 ಜುಲೈ 3	ಕೆಂಗೇರಿ ಉಪನಗರ ಬಡಾವಣೆ
1965ರ ಜನವರಿ 29	ಕೆಂಗೇರಿ ಉಪನಗರ ವಿಸ್ತರಿಸಿದ ಬಡಾವಣೆ
1979ರ ಆಗಸ್ಟ್ 30	ಮಹಾಲಕ್ಷ್ಮಿ ಬಡಾವಣೆ
1978ರ ಫೆಬ್ರುವರಿ 7	ಬಿಟಿಎಂ ಬಡಾವಣೆ 1ನೇ ಹಂತ
1990ರ ನವೆಂಬರ್ 3	ಬಿಟಿಎಂ ಬಡಾವಣೆ 4ನೇ ಹಂತ

ಬದಲಿ ನಿವೇಶನಗಳನ್ನು ಅದೇ ಅಥವಾ ನಂತರದ ಬಡಾವಣೆಗಳಲ್ಲಿ ನೀಡಬೇಕು. ಈ ಪ್ರಕರಣವನ್ನು ಪರಿಶೀಲಿಸುತ್ತೇನೆ


ಎನ್. ಜಯರಾಂ
ಬಿಡಿಎ ಆಯುಕ್ತ

ಭೂಸ್ವಾಧೀನವಿಲ್ಲದೆ ಅನುಮೋದಿತ ನಕ್ಷೆಯಂತೆ ರಸ್ತೆ ನಿರ್ಮಿಸಲಾಗಿದ್ದು, ಸರ್ಕಾರದ ಆದೇಶದಂತೆ (ನಇ/442/ಬೆಭೂಸ್ವಾ/2017– 9 ಅಕ್ಟೋಬರ್ 2018) ಒಂದು ಎಕರೆಗೆ ಅಭಿವೃದ್ಧಿಪಡಿಸಿದ ಶೇ 50ರಷ್ಟು ನಿವೇಶನಗಳನ್ನು ನೀಡಬಹುದು. ಅದರಂತೆ ಹದಿನೈದೂವರೆ ಗುಂಟೆ ಜಮೀನಿಗೆ, 4,641.86 ಚದರ ಅಡಿಗಳ ಅಭಿವೃದ್ಧಿ ನಿವೇಶನಗಳನ್ನು ಜಂಟಿ ಖಾತೆದಾರರಾದ ಕೆ. ಕೃಷ್ಣಪ್ಪ, ಕೆ. ರಾಮಣ್ಣ, ದೇವದಾಸ್, ಮುನಿವೆಂಕಟಪ್ಪ, ಕೆ. ದೊರೆಸ್ವಾಮಿ ಅವರಿಗೆ ಹಂಚಿಕೆ ಮಾಡಬೇಕು. ಜಮೀನು ಬಳಸಿಕೊಂಡು ರಸ್ತೆ ನಿರ್ಮಿಸಲಾಗಿರುವ ಅದೇ ಬಡಾವಣೆ ಅಥವಾ ನಂತರದ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಭೂಸ್ವಾಧೀನಾಧಿಕಾರಿ, ಭೂಸ್ವಾಧೀನ ವಿಭಾಗದ ಉಪ ಆಯುಕ್ತ, ಎಂಜಿನಿಯರ್ ಸದಸ್ಯ, ಮುಖ್ಯ ಕಾನೂನು ಅಧಿಕಾರಿ ಹಾಗೂ ಕಾರ್ಯದರ್ಶಿಯವರಿದ್ದ 'ಭೂಪರಿಹಾರ ನೀಡುವ ಸಮಿತಿ' ಸೂಚಿಸಿತ್ತು.

ರಸ್ತೆ ನಿರ್ಮಾಣಕ್ಕೆ ಬಳಸಿಕೊಂಡಿದ್ದ ಜಮೀನಿಗೆ ಬದಲಾಗಿ 4,760 ಚದರ ಅಡಿ ವಿಸ್ತೀರ್ಣದ ಮೂರು ನಿವೇಶನಗಳನ್ನು 2024ರ ಸೆಪ್ಟೆಂಬರ್ 2ರಂದು ದೇವದಾಸ್ ಅವರಿಗೆ ನೋಂದಣಿ ಮಾಡಿಕೊಡಲಾಗಿದೆ.



ಡಿನೋಟಿಫೈ, ಬದಲಿ ಹಂಚಿಕೆಯಲ್ಲಿ ನಿಯಮ ಮೀರದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಿರ್ದೇಶನ



ಬದಲಿ ನಿವೇಶನ ಹಂಚಿಕೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸರ್ಕಾರದ ಆದೇಶ

ಉಪ ಮುಖ್ಯಮಂತ್ರಿ ನಿರ್ದೇಶನ ಮೀರಿದ ಬಿಡಿಎ



ಡಿ.ಕೆ. ಶಿವಕುಮಾರ್

'ಭೂಸ್ವಾಧೀನಪಡಿಸಿಕೊಂಡ ಜಮೀನುಗಳನ್ನು ಅಧಿಸೂಚನೆಯಿಂದ ಕೈಬಿಡುವುದು (ಡಿನೋಟಿಫೈ) ಮತ್ತು ಬದಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ನನ್ನ ಗಮನಕ್ಕೆ ತಾರದೇ ಪತ್ರ ವ್ಯವಹಾರ ನಡೆಸುವುದಾಗಲೀ, ತೀರ್ಮಾನ ಕೈಗೊಳ್ಳುವುದಾಗಲೀ ಮಾಡುವಂತಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನ ನೀಡಿದ್ದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ, ಬಿಎಂಆರ್‌ಡಿಎ ಆಯುಕ್ತ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ 2024ರ ಆಗಸ್ಟ್ 28ರಂದೇ ಪತ್ರ ಬರೆದು ಈ ಕುರಿತು ನಿರ್ದೇಶನ ನೀಡಿದ್ದರು. ಉಪ ಮುಖ್ಯಮಂತ್ರಿಯವರ ನಿರ್ದೇಶನ ಉಲ್ಲಂಘಿಸಿ ಈ ಪ್ರಕರಣದಲ್ಲಿ ನಿವೇಶನ ಹಂಚಿಕೆ ಮಾಡಲಾಗಿದೆ.

'ಮಾಫಿಯಾ ಬೆಂಬಲಿಸಿದ ಪೊಲೀಸರ ವಿರುದ್ಧ ಕ್ರಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಿಯಲ್ ಎಸ್ಟೇಟ್ ಮಾಫಿಯಾ ಜತೆಗೆ ಕೈಜೋಡಿಸುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಸಿದರು.

ಪುಲಕೇಶಿನಗರದಲ್ಲಿ ನೂತನವಾಗಿ ನಿರ್ಮಿಸಿರುವ ಪೊಲೀಸ್ ವಸತಿ ಸಮುಚ್ಚಯವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಮಾಫಿಯಾದ ಜತೆಗೆ ಕೈ ಜೋಡಿಸುವ ಅಧಿಕಾರಿಗಳನ್ನು ಸರ್ಕಾರ ಸಹಿಸುವುದಿಲ್ಲ. ಯಾವುದೇ ಕಾರಣಕ್ಕೂ ರಿಯಲ್ ಎಸ್ಟೇಟ್ ದಂಧೆಗೆ ಬೆಂಬಲ ನೀಡಬಾರದು. ಅಪರಾಧಿಗಳಿಗೆ ಭಯದ ವಾತಾವರಣ ಹಾಗೂ ಜನ ಸಾಮಾನ್ಯರಿಗೆ ಭಯ ಮುಕ್ತ ವಾತಾವರಣ ನಿರ್ಮಿಸಬೇಕು' ಎಂದು ಸೂಚಿಸಿದರು.

'ರಾಜ್ಯದಲ್ಲಿ ಜನಸಂಖ್ಯೆ ಏಳು ಕೋಟಿ ದಾಟಿದೆ. ಜನರ ಆಸ್ತಿ ರಕ್ಷಣೆ ಹಾಗೂ ಸಮಾಜದಲ್ಲಿ ನೆಮ್ಮದಿ ವಾತಾವರಣ ಸೃಷ್ಟಿಸುವ ಜವಾಬ್ದಾರಿ ಪೊಲೀಸರ ಮೇಲಿದೆ. ಇದಕ್ಕಾಗಿ ಇಲಾಖೆಗೆ ಅಗತ್ಯ ಸೌಲಭ್ಯ, ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಬದ್ಧವಿದೆ' ಎಂದರು.

'ರಾಜ್ಯದಲ್ಲಿ ಅಪರಾಧಗಳ ಪ್ರಮಾಣ ಕಡಿಮೆ ಆಗುತ್ತಿದೆ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಇದ್ದಾಗ ಅಭಿವೃದ್ಧಿಗೂ ವೇಗ ಸಿಗಲಿದೆ. ಹೀಗಾಗಿ, ಜನಸ್ನೇಹಿ ಪೊಲೀಸ್ ವ್ಯವಸ್ಥೆಯನ್ನು ರೂಪಿಸಿ ಠಾಣೆಗೆ ಬರುವವರನ್ನು ಉತ್ತಮವಾಗಿ ನಡೆಸಿಕೊಳ್ಳಿ' ಎಂದು ಸೂಚಿಸಿದರು.

ಗೃಹ ಸಚಿವ ಜಿ. ಪರಮೇಶ್ವರ ಮಾತನಾಡಿ, 'ರಾಜ್ಯದಲ್ಲಿ ಕೊಲೆ, ಸುಲಿಗೆಯಂತಹ ಅಪರಾಧ ಚಟುವಟಿಕೆಗಳು ಕಡಿಮೆ ಆಗಿವೆ. ಆದರೆ, ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಿದ್ದು, ಆ ಅಪರಾಧ ಪ್ರಕರಣಗಳನ್ನು ತಗ್ಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ರಾಷ್ಟ್ರದಲ್ಲೇ ಮೊದಲ ಬಾರಿಗೆ ಸೈಬರ್ ವಿಭಾಗಕ್ಕೆ ಡಿಜಿಪಿ ದರ್ಜೆಯ ಅಧಿಕಾರಿಯನ್ನು ನಿಯೋಜಿಸಲಾಗುತ್ತಿದೆ. ದತ್ತಾಂಶ ಕಳವು ಜಾಲವನ್ನು ತಡೆಗಟ್ಟಲೂ ಪ್ರಯತ್ನಿಸಲಾಗುತ್ತಿದೆ' ಎಂದು ತಿಳಿಸಿದರು.

'ಬೆಂಗಳೂರಿನಲ್ಲಿ ಮಹಿಳೆಯರ, ಮಕ್ಕಳ ಸುರಕ್ಷತೆಗೆ ಹೆಚ್ಚು ಒತ್ತು ನೀಡಲಾಗಿದೆ. ನಿರ್ಭಯಾ ಯೋಜನೆ ಅಡಿ ಬೆಂಗಳೂರಿನಲ್ಲಿ ₹650 ಕೋಟಿ ವೆಚ್ಚದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಮನುಷ್ಯಲ್ಲಿರುವ ಅತ್ಯಂತ ಶ್ರೇಷ್ಠವಾದ ಗುಣ ನಂಬಿಕೆ. ಹೀಗಾಗಿ ಜನರು ಇಟ್ಟಿರುವ ನಂಬಿಕೆಯನ್ನು ಪೊಲೀಸರು ಉಳಿಸಿಕೊಳ್ಳಬೇಕು' ಎಂದು ಹೇಳಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು, ಶಾಸಕ ರಿಜ್ವಾನ್ ಅರ್ಷದ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ರಾಜ್ಯ ಪೊಲೀಸ್ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ರಾಮಚಂದ್ರ ರಾವ್, ನಗರ ಪೊಲೀಸ್ ಆಯುಕ್ತ ಬಿ.ದಯಾನಂದ್ ಉಪಸ್ಥಿತರಿದ್ದರು.

'ಗೃಹ ಯೋಜನೆ' ಮುಂದುವರಿಕೆ

'ಪೊಲೀಸ್ ವಸತಿ ಗೃಹ ಯೋಜನೆ'ಯನ್ನು ರಾಜ್ಯ ಸರ್ಕಾರ ಮುಂದುವರೆಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು. 'ಕಾನೂನು ಸುವ್ಯವಸ್ಥೆ ಕಾಪಾಡಲು ಕಾನ್‌ಸ್ಟೆಬಲ್, ಎಎಸ್‌ಐ, ಪಿಎಸ್‌ಐ, ಇನ್‌ಸ್ಪೆಕ್ಟರ್‌ಗಳು ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಅವರ ಯೋಗ ಕ್ಷೇಮ ನೋಡಿಕೊಳ್ಳುವುದು ಸರ್ಕಾರದ ಜವಾಬ್ದಾರಿ' ಎಂದರು.

ಪರಮೇಶ್ವರ ಮಾತನಾಡಿ, 'ಪೊಲೀಸ್ ವಸತಿ ನಿಗಮದಿಂದ ಇಲಾಖೆಯ ಅಧಿಕಾರಿ, ಸಿಬ್ಬಂದಿಗೆ ₹28 ಲಕ್ಷ ವೆಚ್ಚದಲ್ಲಿ ಎರಡು ಕೊಠಡಿಗಳ ಸುಸಜ್ಜಿತ ಮನೆ ನಿರ್ಮಿಸಿ ಕೊಡಲಾಗುತ್ತಿದೆ' ಎಂದು ಹೇಳಿದರು.

'ಪೊಲೀಸ್ ವಸತಿ ಗೃಹ ಯೋಜನೆ ಅಡಿ ಶೇ 46ರಷ್ಟು ಮನೆಗಳನ್ನು ನಿರ್ಮಿಸಲಾಗಿದೆ' ಎಂದು ಹೇಳಿದರು. 'ವಸತಿಗೆ ಹೆಚ್ಚಿನ ಅನುದಾನ ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರ ಅನುದಾನ ನೀಡಿದರೆ ಇಲಾಖೆಯ ಸಿಬ್ಬಂದಿಗೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸಲು ಅನುಕೂಲ ಆಗಲಿದೆ' ಎಂದರು.

ಪೊಲೀಸರು ತಮ್ಮ ಕರ್ತವ್ಯ, ಸಮವಸ್ತ್ರ, ಘನತೆಗೆ ಎಂದೂ ಕಳಂಕ ತಂದುಕೊಳ್ಳಬಾರದು. ಪೊಲೀಸರನ್ನು ರಾಜಕಾರಣಿಗಳೂ ಬಳಸಿಕೊಳ್ಳಬಾರದು

ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

'ಮಳೆಗಾಲ: ತ್ಯಾಜ್ಯ ಸಂಗ್ರಹಕಾರರಿಗೆ ಸಂಕಷ್ಟ, ಸೋಂಕಿನ ಭೀತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಗಾಲದಲ್ಲಿ ನಗರದಲ್ಲಿ ಉದ್ಭವಿಸುವ ಪ್ರವಾಹದಿಂದ ತ್ಯಾಜ್ಯ ಸಂಗ್ರಹಿಸುವವರಿಗೆ ಅತ್ಯಂತ ಹೆಚ್ಚಿನ ಸಂಕಷ್ಟ ಉಂಟಾಗುತ್ತಿದ್ದು, ಹಲವು ರೀತಿಯ ಸೋಂಕುಗಳಿಂದ ಬಳಲುತ್ತಾರೆ ಎಂದು 'ಹಸಿರು ದಳ' ಸಂಸ್ಥೆ ಪ್ರಕಟಿಸಿರುವ 'ನಗರ ಪ್ರವಾಹ' ವರದಿಯಲ್ಲಿ ತಿಳಿಸಲಾಗಿದೆ.

ರಾಯಸಂದ್ರ, ಮುನ್ನೇಕೊಳಾಲು, ಕೊಪ್ಪ ರಸ್ತೆ ಹಾಗೂ ವಿನಾಯಕ ನಗರಗಳಲ್ಲಿರುವ ತ್ಯಾಜ್ಯ ಸಂಗ್ರಹಿಸುವವರ ತಾಣಗಳಲ್ಲಿ ಒಂದು ಅಡಿಯಿಂದ ಆರು ಅಡಿಯವರೆಗೂ ಮಳೆನೀರು ನಿಲ್ಲುತ್ತದೆ. ಮಳೆನೀರು ಕಾಲುವೆ ಒತ್ತುವರಿ, ಆಡಳಿತ ನಿರ್ವಹಣೆಯಲ್ಲಿ ಕೊರತೆಯಿಂದ ಇಂತಹ ಸಮಸ್ಯೆಗಳಾಗುತ್ತಿವೆ ಎಂದು ವರದಿ ಹೇಳಿದೆ.

ನಗರದಲ್ಲಿ 25 ಸ್ಥಳಗಳಲ್ಲಿ ತ್ಯಾಜ್ಯ ವಿಲೇವಾರಿ ಹಾಗೂ ತ್ಯಾಜ್ಯ ಸಂಗ್ರಹಿಸುವವರ ತಾಣಗಳಿವೆ. ಅಲ್ಲಿನ ಬಹುತೇಕ ಪ್ರದೇಶಗಳು ಮಳೆಗಾಲದಲ್ಲಿ ಎಂಟರಿಂದ ಹತ್ತು ದಿನಗಳು ಮಳೆ ನೀರಿನಿಂದ ಆವೃತವಾಗಿರುತ್ತವೆ. ಕೆಮ್ಮು, ಚಳಿ-ಜ್ವರದಿಂದ ಇಲ್ಲಿನ ನಿವಾಸಿಗಳು ಬಳಲುತ್ತಿದ್ದು, ಟೈಫಾಯ್ಡ್, ಡೆಂಗಿ, ಕಣ್ಣಿನ ಸೋಂಕುಗಳಿಗೂ ಒಳಗಾಗುತ್ತಿದ್ದಾರೆ ಎಂದು ತಿಳಿಸಲಾಗಿದೆ.



ಬಿಬಿಎಂಪಿ ವ್ಯಾಪ್ತಿಯಲ್ಲಿ ತ್ಯಾಜ್ಯ ಸಂಗ್ರಹ (ಸಾಂದರ್ಭಿಕ ಚಿತ್ರ)

'ನಗರ ಯೋಜನೆಯಲ್ಲಿ ಪ್ರಗತಿ, ಪರಿಣಾಮಕಾರಿ ತ್ಯಾಜ್ಯ ನಿರ್ವಹಣೆ, ಹವಾಮಾನಕ್ಕೆ ಅನುಗುಣವಾದ ಮೂಲಸೌಕರ್ಯ, ಸಮುದಾಯದ ಪಾಲ್ಗೊಳ್ಳುವಿಕೆ, ನೀತಿ ಮತ್ತು ಆಡಳಿತವನ್ನು ಒಳಗೊಂಡ ಪ್ರವಾಹ ಸಂಕಷ್ಟ ನಿರ್ವಹಣೆ ಯೋಜನೆಗಳನ್ನು (ಎಫ್‌ಆರ್‌ಎಂಎಸ್) ಅಳವಡಿಸಿಕೊಳ್ಳಬೇಕು' ಎಂದು ಶಿಫಾರಸು ಮಾಡಲಾಗಿದೆ.

'ಬೆಂಗಳೂರಿನ ವಸತಿ, ನೀರು, ಮತ್ತು ಸ್ವಚ್ಛತೆಯ ಸವಾಲುಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ 'ನಗರ ಪ್ರವಾಹ' ವರದಿ ಮಹತ್ವದ ಹೆಜ್ಜೆಯಾಗಿದೆ' ಎಂದು ನಗರ ಯೋಜಕರಾದ ವಿಶ್ವನಾಥ್ ಶ್ರೀಕಂಠಯ್ಯ ಅವರು ವರದಿ ಬಿಡುಗಡೆ ಸಂದರ್ಭದಲ್ಲಿ ಹೇಳಿದರು.

'ಈ ವರದಿಯನ್ನು ಬಿಬಿಎಂಪಿಗೆ ನೀಡಿ, ನಗರದಲ್ಲಿ ಹೊಸ ಬದಲಾವಣೆಯ ಪರಿಕಲ್ಪನೆಯನ್ನು ರೂಪಿಸಲು ಸಲಹೆ ನೀಡಲಾಗುತ್ತದೆ' ಎಂದರು.

ಐಶ್ವರ್ಯಾ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಚಿನ್ನಾಭರಣ ಮತ್ತು ಹಣ ಪಡೆದು ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಮೂರನೇ ಪ್ರಕರಣದಲ್ಲಿ ಐಶ್ವರ್ಯಾ ಗೌಡ ಅಲಿಯಾಸ್ ನವ್ಯಶ್ರೀ ವಿರುದ್ಧ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಹೈಕೋರ್ಟ್ ರಾಜ್ಯ ಪ್ರಾಸಿಕ್ಯೂಷನ್‌ಗೆ ಆದೇಶಿಸಿದೆ.

'ರಾಜರಾಜೇಶ್ವರಿ ನಗರ ಠಾಣೆಯಲ್ಲಿ ದಾಖಲಾಗಿರುವ ಎರಡನೇ ಎಫ್‌ಐಆರ್ ಮತ್ತು ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಐಶ್ವರ್ಯಾ ಗೌಡ ಮತ್ತು ಅವರ ಪತಿ ಕೆ.ಎನ್. ಹರೀಶ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ. ಚೌಟ ಅವರ ವಾದವನ್ನು ಆಲಿಸಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಮುಂದಿನ ವಿಚಾರಣೆವರೆಗೂ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಆದೇಶಿಸಿತು. ರಾಜ್ಯ ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಶ್ರೀರಾಮ್ ಟಿ. ನಾಯಕ್ ವಕಾಲತ್ತು ವಹಿಸಿದ್ದಾರೆ.

ಆರ್.ಆರ್. ನಗರದ ಡಾ.ಮಂಜುಳಾ ಎ. ಪಾಟೀಲ ಅವರು ಸಲ್ಲಿಸಿರುವ ದೂರಿನ ಅನ್ವಯ ಆರ್.ಆರ್. ನಗರ ಠಾಣೆಯ ಪೊಲೀಸರು ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 316(2), 318(4), 352,351(2), 61(2), 3(5)ರ ಅಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ.

ಈ ಕುರಿತಂತೆ 4ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ನ್ಯಾಯಿಕ ವಿಚಾರಣೆ ನಡೆಯುತ್ತಿದೆ.

ನಗರದಲ್ಲಿ ಇಂದು

ವೈಕುಂಠ ಏಕಾದಶಿ: ಭಜನೆ: ವಿನಾಯಕ ವೆಂಕಟೇಶ್ವರಸ್ವಾಮಿ ಭಜನಾ ಮಂಡಳಿ, ರಾಮ ಭಜನಾ ಮಂಡಳಿ, ಸಂಗೀತ ಕಾರ್ಯಕ್ರಮ: ಸಂತವಾಣಿ ಸುಧಾಕರ್, ದತ್ತಶ್ರೀ ಮತ್ತು ತಂಡ, ವಿಷ್ಣು ಸಹಸ್ರನಾಮ ಪಾರಾಯಣ: ಪದ್ಮಾವತಿ ಮತ್ತು ತಂಡ, ಭಜನೆ: ತಿಲಕವತಿ ಕೆ. ಶಿವರಂಜನಿ ಮಹಿಳಾ ಸಂಸ್ಕೃತಿ ಸಂಘ, ಭಕ್ತಿ ಗೀತೆ: ಉಷಾ ಮಧುಸೂದನ್ ಗೋ ಮಾತಾ ಭಜನಾ ಮಂಡಳಿ, ಸಂಗೀತ ಕಾರ್ಯಕ್ರಮ: ರೂಪಾರಾಜು ಮತ್ತು ತಂಡ, ಮೀರಾ ಭಜನೆ ಮತ್ತು ಭಕ್ತಿ ಗೀತೆಗಳು: ಮೈಥಲಿ ಮಾಂಡ್ಯಂ, ಭಕ್ತಿ ಗೀತೆಗಳು: ಗೀತಾ ಎಂ.ಆರ್., ಭರತನಾಟ್ಯ ಪ್ರದರ್ಶನ: ವಂಶಿಕಾ ಆರ್. ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ಎಂ.ಜಿ. ರೈಲ್ವೆ ಕಾಲೊನಿ, ಮಾಗಡಿ ರಸ್ತೆ, ಬೆಳಿಗ್ಗೆ 5ರಿಂದ

ಅಂತರರಾಷ್ಟ್ರೀಯ ಸಾವಯವ ಸಿರಿಧಾನ್ಯ ವ್ಯಾಪಾರ ಮೇಳದ ಪೂರ್ವಭಾವಿ ಕಾರ್ಯಕ್ರಮ: ಅತಿಥಿಗಳು: ಎನ್. ಚಲುವರಾಯಸ್ವಾಮಿ, ಎನ್. ಜಿ.ಟಿ. ಪುತ್ರ, ವೈ.ಎಸ್. ಪಾಟೀಲ್, ವಿ. ಅನ್ಬುಕುಮಾರ್, ಆಯೋಜನೆ ಮತ್ತು ಸ್ಥಳ: ಕ್ರಿಸ್ತು ಜಯಂತಿ ಕಾಲೇಜು, ಬೆಳಿಗ್ಗೆ 10



ಚಲುವರಾಯ ಸ್ವಾಮಿ

ತಿರುಪ್ಪಾವೈ ನೃತ್ಯೋತ್ಸವ: ಅತಿಥಿಗಳು: ಎ. ಜಾಕಿರ್ ಹುಸೇನ್, ನೃತ್ಯ ಪ್ರದರ್ಶನ: ಅನುರಾಧಾ ವಿಕ್ರಾಂತ್, ರಮ್ಯಾ ಭಟ್, ಐಶ್ವರ್ಯಾ, ರಿಹಾ ವಿಕ್ರಾಂತ್, ಎಸ್. ಗೌರಿ, ಸುಕೃತಾ ಟಿ.ಎಸ್., ಸ್ಪಂದನಾ ಎಸ್., ಆಕೃತಿ, ಶೋಭಾ ಶಶಿಕುಮಾರ್, ಕೌಸಲ್ಯಾ ನಿವಾಸ್, ಪವನ್ ಸಿಂಗ್, ಮೇಘನಾ, ಹರಿಕಾ, ಮಾನಸಾ ಡಿ., ವರುಣಿಕಾ, ಸಂಯುಕ್ತಾ, ಆಶ್ವಿ, ಅಸ್ವಿಕಾ, ಶ್ರೀಲೇಖಾ, ಆಯೋಜನೆ: ಎಂ.ಎಸ್. ನಾಟ್ಯಕ್ಷೇತ್ರ, ಸ್ಥಳ: ಸೇವಾ ಸದನ, 14ನೇ ಕ್ರಾಸ್ ಮಲ್ಲೇಶ್ವರ, ಸಂಜೆ 5.30

ವಾರ್ಷಿಕೋತ್ಸವ: ಕರ್ನಾಟಕ ಸಂಗೀತ: ಗಾಯನ: ಭಾರ್ಗವ, ಪಿಟೀಲು: ಅಚ್ಯುತರಾವ್, ಮೃದಂಗ: ನಾಗೇಂದ್ರ ಪ್ರಸಾದ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾಶಿವ ಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ: 'ಶಿವಕಮಲ ಸಾಹಿತ್ಯ' ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಅತಿಥಿಗಳು: ಎಂ.ಬಿ. ಪಾಟೀಲ, ಪ್ರಶಸ್ತಿ ಪುರಸ್ಕೃತರು: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6ರಿಂದ

'ಕಾವ್ಯಾನಂದ ಪುರಸ್ಕಾರ–2023' ಪ್ರದಾನ ಸಮಾರಂಭ: ಪುರುಷೋತ್ತಮ ಬಿಳಿಮಲೆ, ಪ್ರಶಸ್ತಿ ಪುರಸ್ಕೃತರು: ಲಲಿತಾ ಕೆ. ಹೊಸಪ್ಯಾಟಿ, 'ಬ್ಯೂಟಿ ಬೆಳ್ಳಕ್ಕಿ' ಪುಸ್ತಕದ ಕುರಿತು: ಸಂಗಮೇಶ ಎಸ್. ಗಣಿ, ಆಯೋಜನೆ: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಪ್ರೊ. ಮುಜಾಫರ್ ಅಸ್ಸಾದಿ ಒಂದು ಸ್ಮರಣೆ: ಮಾತನಾಡುವವರು: ಶಾಕಿರಾ ಖಾನಂ, ದಿನೇಶ್ ಅಮೀನ್‌ಮಟ್ಟು, ಕಿರಣ್ ಗಾಜನೂರು, ವಿಖಾರ್ ಅಹ್ಮದ್ ಸಯೀದ್, ಹರಿಪ್ರಸಾದ್, ಎಸ್.ವೈ. ಸುರೇಂದ್ರ ಕುಮಾರ್, ಸ್ಥಳ: ಸಾಲಾರ್ ಸಭಾಂಗಣ, ಇಂಡಿಯನ್ ಎಕ್ಸ್‌ಪ್ರೆಸ್ ವೃತ್ತ, ಮೋದಿ ಮಸೀದಿ ಹತ್ತಿರ, ಸಂಜೆ 6.15

'ಶೇಷಗ್ರಸ್ತರು' ನಾಟಕ ಪ್ರದರ್ಶನ: ನಿರ್ದೇಶನ: ರಮೇಶ್ ಚಂದ್, ಸಹನಿರ್ದೇಶನ: ರಚನಾ ಹೇರೂರು, ಬೆಳಕು ವಿನ್ಯಾಸ: ಅಕ್ಷರ ವೇಣುಗೋಪಾಲ, ರಂಗವಿನ್ಯಾಸ: ಶಶಿಧರ ಅಡಪ, ಅಪ್ಪಯ್ಯ, ನಿರ್ವಹಣೆ: ಚಂದ್ರಕಾಂತ್ ಎಂ., ಪ್ರಸಾಧನ: ಎನ್.ಕೆ. ರಾಮಕೃಷ್ಣ, ಆಯೋಜನೆ: ರಂಗಸಂಪದ, ಸ್ಥಳ: ರಂಗ ಶಂಕರ, ಜೆ.ಪಿ. ನಗರ, ಸಂಜೆ 7.30

ಮಯೂರ ಓದಿ

ನಿಧನ ವಾರ್ತೆ

ಪಂಜೇರಿರ ಬೆಳ್ಯಪ್ಪ



ಮಡಿಕೇರಿ: ನಿವೃತ್ತ ಆರ್‌ಎಫ್‌ಒ ಹಾಗೂ ಲೇಖಕ ಪಂಜೇರಿರ ಬೆಳ್ಯಪ್ಪ (78) ಅವರು ಅನಾರೋಗ್ಯದಿಂದ ಮೈಸೂರಿನ ಆಸ್ಪತ್ರೆಯಲ್ಲಿ ಇತ್ತೀಚೆಗೆ ನಿಧನರಾದರು. ನಗರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಅವರಿಗೆ ಪತ್ನಿ ಕಾಮವ್ವ, ಪುತ್ರ ಪತ್ರಕರ್ತ ಜಗದೀಶ್ ಬೆಳ್ಯಪ್ಪ ಸೇರಿ ಇಬ್ಬರು ಪುತ್ರರು ಹಾಗೂ ಒಬ್ಬ ಪುತ್ರಿ ಇದ್ದಾರೆ.

ಕೊಡವ ಜಾನಪದ ಪದ್ಧತಿ ಪರಂಪರೆಗಳ ಕುರಿತು ಮೂರು ಪುಸ್ತಕಗಳನ್ನು ರಚಿಸಿರುವ ಅವರಿಗೆ ಕೊಡವ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿತ್ತು.

‘ಐಟಿಎಫ್’ನಲ್ಲಿ ದೇಸಿ ತಳಿಗಳ ಬೀಜ ಮೇಳ

‘ಸಮುದಾಯ ಬೀಜ ಬ್ಯಾಂಕ್’ ಸ್ಥಾಪನೆಗೆ ಉತ್ತೇಜನ • ವೈವಿಧ್ಯಮಯ ಸೊಪ್ಪು ಮತ್ತು ತರಕಾರಿ ಬೀಜಗಳ ಪ್ರದರ್ಶನ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಸಾವಯವ, ಸಿರಿಧಾನ್ಯ ಉತ್ಪನ್ನಗಳ ಮಾರುಕಟ್ಟೆ ವಿಸ್ತರಣೆಗೆ ಆದ್ಯತೆ ನೀಡುತ್ತಿರುವ ಕೃಷಿ ಇಲಾಖೆ, ಈ ಬಾರಿಯ ಅಂತರರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ವಾಣಿಜ್ಯ ಮೇಳದಲ್ಲಿ(ಇಂಟರ್‌ನ್ಯಾಷನಲ್ ಟ್ರೇಡ್ ಫೇರ್– ಐಟಿಎಫ್) ದೇಸಿ ತಳಿಯ ಬಿತ್ತನೆ ಬೀಜಗಳ ಪ್ರದರ್ಶನ ಆಯೋಜಿಸುತ್ತಿದೆ.

ಇದೇ 23ರಿಂದ 25ರವರೆಗೆ ನಗರದ ಅರಮನೆ ಮೈದಾನದಲ್ಲಿ ಜಿಬಿಝೆಡ್ ಮತ್ತು ಎಫ್‌ಐಬಿಎಲ್ ಸಹಯೋಗದೊಂದಿಗೆ ಆಯೋಜಿಸುತ್ತಿರುವ ಐಟಿಎಫ್ ಮೇಳದಲ್ಲಿ ದೇಸಿ ತಳಿಗಳ ಪ್ರದರ್ಶನಕ್ಕಾಗಿ ಪ್ರತ್ಯೇಕ ವಿಭಾಗವನ್ನು (ಪೆವಿಲಿಯನ್) ಮೀಸಲಿಟ್ಟಿದೆ.

ಈ ವಿಭಾಗದಲ್ಲಿ ರಾಗಿ, ಜೋಳ, ಭತ್ತ, ತೊಗರಿ, ಅವರೆ, ಗೋಧಿ, ಸಿರಿಧಾನ್ಯಗಳು ಸೇರಿದಂತೆ ರಾಜ್ಯದ ವಿವಿಧ ಪ್ರದೇಶಗಳ ಸ್ಥಳೀಯ ಆಹಾರ ಧಾನ್ಯಗಳ ದೇಸಿ ತಳಿಯ ಬೀಜಗಳನ್ನು ಪ್ರದರ್ಶನಕ್ಕಿಡಲಾಗುತ್ತಿದೆ.



ಸಮುದಾಯ ಬೀಜ ಬ್ಯಾಂಕ್(ಸಂಗ್ರಹ ಚಿತ್ರ)



ಸರ್ಕಾರ ಈ ವರ್ಷದ ಬಜೆಟ್‌ನಲ್ಲಿ ಸ್ಥಳೀಯ ತಳಿಗಳ ಸಂರಕ್ಷಣೆಗಾಗಿ ಸಮುದಾಯ ಬೀಜ ಬ್ಯಾಂಕ್‌ಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ಈ ಯೋಜನೆಯಡಿ ದೇಸಿ ತಳಿಗಳ ಬೀಜ ಪ್ರದರ್ಶನವನ್ನು ಏರ್ಪಡಿಸಿದೆ. ರಾಜ್ಯದಾದ್ಯಂತ ದೇಸಿ ತಳಿ ಸಂರಕ್ಷಣೆಯಲ್ಲಿ ತೊಡಗಿರುವ ಬೀಜ ಸಂರಕ್ಷಕರನ್ನು ಮೇಳಕ್ಕೆ ಆಹ್ವಾನಿಸಲಾಗುತ್ತಿದೆ. ಅವರಿಗೆ ಉಚಿತವಾಗಿ ಮಳಿಗೆಗಳನ್ನು ನೀಡಿ, ಅವರ ಸಂಗ್ರಹದಲ್ಲಿರುವ ತಳಿಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಕೃಷಿ ಇಲಾಖೆ ನಿರ್ದೇಶಕ ಜಿ.ಟಿ. ಪುತ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರದರ್ಶನದಲ್ಲಿರಲಿರುವ ದೇಸಿ ತಳಿಗಳು: ಗೋಧಿಯಲ್ಲಿ, ಕುಂಚರ ಸಣ್ಣ, ಬಸ್ಸಿ,ಸದಕ ಸಣ್ಣ, ಸದಕ ದೊಡ್ಡ, ರಾಗಿಯಲ್ಲಿ, ಉದುರು ಮಲ್ಲಿಗೆ, ಕರಿರಾಗಿ, ಕುರುಬರಾಗಿ, ಕರಿಗಿಡ್ಡ, ಜಗಳೂರು ರಾಗಿ ತಳಿಗಳು, ಭತ್ತದಲ್ಲಿ, ಗಂಧಸಾಲೆ, ಹೊಳೆಸಾಲು, ರತ್ನಚೂಡಿ, ಕಗ್ಗ, ರಕ್ತಸಾಲಿ, ದೊಡ್ಡ ಬೈರನೆಲ್ಲು ತಳಿಗಳನ್ನು ಬೀಜ ಸಂರಕ್ಷಕರು ಪ್ರದರ್ಶನ ದಲ್ಲಿ ಇಡಲಿದ್ದಾರೆ. ಇದರ ಜೊತೆಗೆ, ಕೆಂಪು ನವಣೆ, ಬಿಳಿ ನವಣೆ, ಹುಲ್ಲು ನವಣೆ, ಕೃಷ್ಣದೇವರಾಯ ನವಣೆ, ಉರುವಲು ನವಣೆ, ಅಂಡಕೊರಲೆಯಂತಹ ಸಿರಿಧಾನ್ಯ ತಳಿಗಳು ಮತ್ತು ವೈವಿಧ್ಯಮಯ ಸೊಪ್ಪು ಮತ್ತು ತರಕಾರಿ ಬೀಜಗಳನ್ನು ಪ್ರದರ್ಶನದಲ್ಲಿ ಇಡಲಾಗುತ್ತಿದೆ.

ಮೇಳದ ವೈಶಿಷ್ಟ್ಯ

ಮಣ್ಣಿನ ಮ್ಯೂಸಿಯಂ: ರಾಜ್ಯದ ವಿವಿಧ ಪ್ರದೇಶಗಳಲ್ಲಿರುವ ಕೆಂಪು ಮಣ್ಣು, ಕಪ್ಪು ಮಣ್ಣು, ಜಂಬಿಟ್ಟಿಗೆ(ಲ್ಯಾಟರೈಟ್) ಸೇರಿದಂತೆ ಹಲವು ರೀತಿಯ ಮಣ್ಣಿನ ಮಾದರಿಗಳ ‘ಮ್ಯೂಸಿಯಂ’ ಮೇಳದಲ್ಲಿರಲಿದೆ.

ಶಿಲೆಯಿಂದ ಮಣ್ಣಾಗುವವರೆಗೂ, ಮಣ್ಣು ರೂಪುಗೊಳ್ಳುವ ವಿಧಾನವನ್ನು ವಿವರಿಸುವ ಮಾದರಿಗಳಿರುತ್ತವೆ. ವಿವಿಧ ಬಣ್ಣಗಳ ಮಣ್ಣಿನ ಸೃಷ್ಟಿಯ ಹಿಂದಿನ ವಿಜ್ಞಾನವನ್ನೂ ಇಲ್ಲಿ ವಿವರಿಸಲಾಗುತ್ತದೆ. ಈ ಮೂಲಕ ಬೆಳೆ ಬೆಳೆಯುವ ಮೂಲ ವಸ್ತುವಾದ ಮಣ್ಣಿನ ಮಹತ್ವದ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಕೃಷಿ ಅಧಿಕಾರಿಗಳು ವಿವರಿಸಿದರು.

ಮರೆತು ಹೋದ ಆಹಾರ: ಅಪರೂಪದ ಹಣ್ಣುಗಳ ಪ್ರದರ್ಶನವಿರುತ್ತದೆ. ಮರೆತುಹೋದ ತಿಂಡಿ–ತಿನಿಸುಗಳನ್ನು ನೆನಪಿಸುವುದಕ್ಕಾಗಿ ಇಲಾಖೆ ರಾಜ್ಯದ ವಿವಿಧೆಡೆ ಪಾಕ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಮೇಳದಲ್ಲೂ ಸಿರಿಧಾನ್ಯಗಳಿಂದ ವೈವಿಧ್ಯಮಯ ಆಹಾರ ತಯಾರಿಸುವ ‘ಪಾಕ ಸ್ಪರ್ಧೆ’ಯೂ ನಡೆಯಲಿದೆ.

‘ಇವೆಲ್ಲ ಉದಾಹರಣೆಗಳಷ್ಟೇ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ, ವೈವಿಧ್ಯಮಯ ತಳಿಗಳು ಪ್ರದರ್ಶನದಲ್ಲಿರಲಿವೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೀಜ ಸಂರಕ್ಷರಿಂದ ಪ್ರದರ್ಶನ: ರಾಜ್ಯದಾದ್ಯಂತ ನೂರಾರು ದೇಸಿ ತಳಿಯ ಬೀಜ ಸಂರಕ್ಷಕರಿದ್ದಾರೆ. ಉತ್ತರ ಕನ್ನಡ, ಬೆಳಗಾವಿ, ದಾವಣಗೆರೆ, ಹಾವೇರಿ, ಕೋಲಾರ, ಮಂಡ್ಯ ಮತ್ತು ಶಿವಮೊಗ್ಗ ಜಿಲ್ಲೆ ಸೇರಿದಂತೆ ರಾಜ್ಯದ ಆಯ್ದ 15 ಜಿಲ್ಲೆಗಳಿಂದ 30 ಮಂದಿ ದೇಸಿ ತಳಿ ಬೀಜ ಸಂರಕ್ಷಕರನ್ನು ಮೇಳಕ್ಕೆ ಆಹ್ವಾನಿಸಿದ್ದೇವೆ. ತಳಿ ಸಂರಕ್ಷಿಸಿರುವವರೇ, ತಳಿಗಳನ್ನು ಪ್ರದರ್ಶಿಸಿ ಮಾಹಿತಿ ಹಂಚಿಕೊಳ್ಳಲಿದ್ದಾರೆ’ ಎಂದು ಜಿ.ಟಿ. ಪುತ್ರ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಪತ್ತೆಯಾಗದ ಚಿರತೆ: ಮೈಸೂರು ಇನ್ಫೊಸಿಸ್ ಟ್ರೈನಿಗಳಿಗೆ 2 ವಾರ ರಜೆ

ಮೈಸೂರು: ಇಲ್ಲಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಇನ್ಫೊಸಿಸ್ ಆವರಣದಲ್ಲಿ ಚಿರತೆ ಸೆರೆ ಕಾರ್ಯಾಚರಣೆ ಹತ್ತನೇ ದಿನಕ್ಕೆ ಕಾಲಿಟ್ಟಿದೆ. ಚಿರತೆ ಪತ್ತೆಯಾಗದಿರುವುದರಿಂದ ಇಲ್ಲಿನ ಟ್ರೈನಿಗಳಿಗೆ ಜ. 26ರವರೆಗೆ ತರಬೇತಿಯಿಂದ ವಿನಾಯಿತಿ ನೀಡಲಾಗಿದೆ.

ಶುಕ್ರವಾರ ಬೆಳಿಗ್ಗೆಯಿಂದಲೇ ಕ್ಯಾಂಪಸ್‌ನಿಂದ ಹೊರಹೋಗುವಂತೆ ಟ್ರೈನಿಗಳಿಗೆ ಸೂಚಿಸಿದ್ದು, ಶುಕ್ರವಾರ ಹಾಗೂ ಶನಿವಾರ ಕ್ಯಾಂಪಸ್‌ನಿಂದ ಬೆಂಗಳೂರಿಗೆ ವಿಶೇಷ ಬಸ್‌ಗಳ ವ್ಯವಸ್ಥೆಯನ್ನೂ ಮಾಡಿದೆ. 26ರಂದು ಸಂಜೆ ವೇಳೆಗೆ ಹಿಂತಿರುಗುವಂತೆ ಸೂಚಿಸಿದೆ. ಜ. 15ರಿಂದ ಆನ್‌ಲೈನ್ ತರಬೇತಿ ಮುಂದುವರಿಯಲಿದ್ದು, ಇನ್ನೊಮ್ಮೆ ಸ್ಪಷ್ಟ ನಿರ್ದೇಶನ ನೀಡುವುದಾಗಿ ಹೇಳಿದೆ.

ಕಳೆದ ಡಿಸೆಂಬರ್ 31ರಂದು ಮುಂಜಾನೆ ಕ್ಯಾಂಪಸ್‌ನಲ್ಲಿ ಚಿರತೆ ಕಾಣಿಸಿಕೊಂಡ ಬಳಿಕ ಅರಣ್ಯ ಇಲಾಖೆಯು ಸೆರೆಗೆ ಕಾರ್ಯಾಚರಣೆ ನಡೆಸುತ್ತಿದೆ. 12ಕ್ಕೂ ಹೆಚ್ಚು ಕ್ಯಾಮೆರಾ ಟ್ರ್ಯಾಪ್ ಅಳವಡಿಸಲಾಗಿದ್ದು, ಬೋನುಗಳನ್ನೂ ಇಡಲಾಗಿದೆ.

ಸಿಲಿಂಡರ್ ಸ್ಫೋಟ: ಕಟ್ಟಡಕ್ಕೆ ಹಾನಿ



ಬೆಂಗಳೂರು: ಎಂ.ಎಸ್.ರಾಮಯ್ಯ (ಎಂಎಸ್‌ಆರ್) ನಗರದ ಟಿಬೆಟಿಯನ್ ಫಾಸ್ಟ್ ಫುಡ್ ಸೆಂಟರ್‌ನಲ್ಲಿ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಗುರುವಾರ ಬೆಳಿಗ್ಗೆ 7.30ರ ಸುಮಾರಿಗೆ ಸ್ಫೋಟ ಸಂಭವಿಸಿದ್ದು, ಕಟ್ಟಡಕ್ಕೆ ಹಾನಿಯಾಗಿದೆ. ಮಳಿಗೆಯಲ್ಲಿದ್ದ ವಸ್ತುಗಳು ಚೆಲ್ಲಾಪಿಲ್ಲಿ ಆಗಿ ಬಿದ್ದಿದ್ದವು. ಸ್ಫೋಟದ ಶಬ್ದಕ್ಕೆ ಅಕ್ಕಪಕ್ಕದ ನಿವಾಸಿಗಳು ಬೆಚ್ಚಿಬಿದ್ದಿದ್ದರು.

ಸ್ಫೋಟದ ರಭಸಕ್ಕೆ ಬಹುಮಹಡಿ ಕಟ್ಟಡದಲ್ಲಿದ್ದ ಎರಡು ಮಳಿಗೆಯ ಕಬ್ಬಿಣದ ಶೆಟರ್ ಕುಸಿದು ರಸ್ತೆಯ ಬದಿಗೆ ಬಿದ್ದಿತ್ತು. ಕಟ್ಟಡಕ್ಕೂ ಹಾನಿಯಾಗಿದೆ. ಪಕ್ಕದಲ್ಲೇ ಇದ್ದ ರಾಮಯ್ಯ ಸಂಸ್ಥೆಯ ಕಟ್ಟಡದ ಕಿಟಕಿಯ ಗಾಜುಗಳು ಪುಡಿಯಾಗಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಬುಧವಾರ ರಾತ್ರಿ 11 ಗಂಟೆ ಸುಮಾರಿಗೆ ಫಾಸ್ಟ್ ಫುಡ್ ಸೆಂಟರ್ ಬಂದ್ ಮಾಡಿ ಮಾಲೀಕ ಮನೆಗೆ ತೆರಳಿದ್ದರು. ಬೆಳಿಗ್ಗೆ ಸ್ಫೋಟ ಸಂಭವಿಸಿದೆ. ಮಧ್ಯಾಹ್ನ ಅಥವಾ ಸಂಜೆ ವೇಳೆ ಘಟನೆ ನಡೆದಿದ್ದರೆ ಹೆಚ್ಚಿನ ಅಪಾಯ ಸಂಭವಿಸುವ ಸಾಧ್ಯತೆಯಿತ್ತು ಎಂದು ಸ್ಥಳೀಯರು ಮಾಹಿತಿ ನೀಡಿದರು.

ಕಟ್ಟಡ ಹಳೆಯದಾಗಿದ್ದು, ಸ್ಫೋಟದಿಂದ ಕುಸಿಯುವ ಭೀತಿ ಎದುರಾಗಿದೆ. ಕಟ್ಟಡದಲ್ಲಿದ್ದವರನ್ನು ಸ್ಥಳಾಂತರ ಮಾಡಲಾಗಿದೆ.

ಸದಾಶಿವನಗರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ‘ಅನಿಲ ಸೋರಿಕೆಯ ಕಾರಣ ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ಅನುದಾನಿತ ಶಿಕ್ಷಕಿಯರಿಗೂ ಶಿಶುಪಾಲನಾ ರಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನಿತ ಪ್ರಾಥಮಿಕ ಶಾಲೆಗಳ ಶಿಕ್ಷಕಿಯರಿಗೂ ಶಿಶುಪಾಲನಾ ರಜೆ (ಸಿಸಿಎಲ್) ಸೌಲಭ್ಯವನ್ನು ವಿಸ್ತರಿಸಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಹಿಳಾ ಉದ್ಯೋಗಿಗಳಿಗೆ ಶಿಶುಪಾಲನಾ ರಜೆ ಸೌಲಭ್ಯ ನೀಡಲಾಗಿತ್ತು. ಈ ನಿಯಮದಂತೆ ಸರ್ಕಾರಿ ಉದ್ಯೋಗದಲ್ಲಿದ್ದ ಮಹಿಳೆಯರು ಮಕ್ಕಳಿಗೆ 18 ವರ್ಷ ತುಂಬುವುದರ ಒಳಗೆ ಆರು ತಿಂಗಳ ರಜೆ ಸೌಲಭ್ಯ ಪಡೆಯಲು ಅವಕಾಶವಾಗಿತ್ತು.

2024ರ ಜನವರಿಯಲ್ಲಿ ಅನುದಾನಿತ ಪ್ರೌಢಶಾಲೆಗಳ ಸಿಬ್ಬಂದಿಗೂ ವಿಸ್ತರಿಸಲಾಗಿತ್ತು. ಆದರೆ, ಪ್ರಾಥಮಿಕ ಶಿಕ್ಷಕರಿಗೆ ಸೌಲಭ್ಯ ದೊರೆತಿರಲಿಲ್ಲ.

‘ಹವಾಮಾನ ವೈಪರೀತ್ಯದಿಂದ ರೈತರಿಗೆ ಸಂಕಷ್ಟ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಹವಾಮಾನ ವೈಪರೀತ್ಯವು ಸಣ್ಣ ಮತ್ತು ಅತಿಸಣ್ಣ ರೈತರನ್ನು ಸಂಕಷ್ಟಕ್ಕೆ ದೂಡಿದ್ದು, ಕೃಷಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ’ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ್ ದಳವಾಯಿ ಹೇಳಿದರು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಭಾರತೀಯ ಕೃಷಿ ಮಾರುಕಟ್ಟೆ ಸಂಸ್ಥೆ (ಹೈದರಾಬಾದ್) ಆಶ್ರಯದಲ್ಲಿ ಜಿಕೆವಿಕೆಯಲ್ಲಿ ಆಯೋಜಿಸಿರುವ 38ನೇ ಭಾರತೀಯ ಕೃಷಿ ಮಾರುಕಟ್ಟೆ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹವಾಮಾನ ವೈಪರೀತ್ಯಕ್ಕೆ ಅನುಗುಣವಾಗಿ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಹೆಚ್ಚಿನ ಸಂಶೋಧನೆಗಳನ್ನು ಕೈಗೊಳ್ಳುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಾದ ಅಗತ್ಯವಿದೆ ಎಂದರು.



ಉದ್ಘಾಟನಾ ಸಮಾರಂಭದಲ್ಲಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಸಿದ್ದಯ್ಯ ಮಾತನಾಡಿದರು.

‘ದೇಶದಲ್ಲಿ ಕೊಯ್ಲಿನ ನಂತರ ಶೇ 6ರಷ್ಟು ಆಹಾರ ಧಾನ್ಯಗಳು ಮತ್ತು ಶೇ 26ರಷ್ಟು ಹಣ್ಣು-ತರಕಾರಿಗಳು ಪೋಲಾಗುತ್ತಿವೆ. ಕೊಯ್ಲೋತ್ತರ ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತುನೀಡುವ ಮೂಲಕ ಶೇಖರಣೆ ಮತ್ತು ಮೌಲ್ಯವರ್ಧನೆ ಮಾಡಬೇಕಾದುದು ಅತ್ಯಗತ್ಯ. ರೈತರಿಗೆ ಪೂರಕವಾಗುವಂತಹ ಇನ್ನಷ್ಟು ಕಾಯ್ದೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ’ ಎಂದು ತಿಳಿಸಿದರು.

ದೇಶದ ಜನಸಂಖ್ಯೆಯಲ್ಲಿ ಶೇ 34ರಷ್ಟು ಯುವಜನತೆ ಇದ್ದಾರೆ. ಕೃಷಿಯನ್ನು ಅತಿದೊಡ್ಡ ಉದ್ಯೋಗ ಸೃಷ್ಟಿಸುವ ವಲಯವನ್ನಾಗಿ ರೂಪಿಸಿ, ಯುವಜನರಿಗೆ ನೆರವಾಗಬೇಕಿದೆ. ಮಾರುಕಟ್ಟೆಯ ಅಲಭ್ಯತೆಯ ಕಾರಣದಿಂದಾಗಿ ಕೃಷಿಕರು ನಷ್ಟ ಅನುಭವಿಸುವಂತಾಗಿದೆ. ಆದ್ದರಿಂದ ಸೂಕ್ತ ಸ್ಥಳಗಳಲ್ಲಿ ಮಾರುಕಟ್ಟೆಗಳು ಮತ್ತು ಗೋದಾಮುಗಳ ನಿರ್ಮಾಣದ ಜೊತೆಗೆ ರೈತರಿಗೆ ದ್ವಿತೀಯ ಕೃಷಿಯ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಭಾರತೀಯ ಕೃಷಿ ಮಾರುಕಟ್ಟೆ ಸಂಸ್ಥೆಯ ಅಧ್ಯಕ್ಷ ಪ್ರೊ.ಎಸ್. ಮಹೇಂದ್ರದೇವ್ ಮಾತನಾಡಿ, ‘ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸೂಕ್ತ ಮಾರುಕಟ್ಟೆ ಒದಗಿಸಲು ರೈತ ಉತ್ಪಾದಕ ಸ್ವಸಹಾಯ ಸಂಘಗಳ ರಚನೆ ಅತ್ಯಗತ್ಯ. ಕೃಷಿ ಮತ್ತು ತೋಟಗಾರಿಕೆಯ ಎಲ್ಲಾ ಉತ್ಪನ್ನಗಳಿಗೆ ವೈಜ್ಞಾನಿಕ ದರ ನಿಗದಿ ಮಾಡುವುದರಿಂದ ರೈತರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಬಹುದಾಗಿದೆ’ ಎಂದರು.

ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪಿ.ಜಿ.ಚಂಗಪ್ಪ, ಭಾರತೀಯ ಕೃಷಿ ಮಾರುಕಟ್ಟೆ ಸಂಸ್ಥೆಯ(ಹೈದರಾಬಾದ್) ಕಾರ್ಯದರ್ಶಿ ಟಿ.ಸತ್ಯನಾರಾಯಣ, ಕೃಷಿ ನಿರ್ವಹಣಾ ಕೇಂದ್ರದ ನಿರ್ದೇಶಕ (ಅಹಮದಾಬಾದ್) ಸುಖ್‌ಪಾಲ್ ಸಿಂಗ್, ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಟಿ.ಕೆ.ಪ್ರಭಾಕರ ಶೆಟ್ಟಿ, ಎಂ.ಚಂದ್ರೇಗೌಡ, ಕೃಷಿ ವಿಶ್ವವಿದ್ಯಾಲಯದ ಡೀನ್(ಕೃಷಿ) ಎನ್.ಬಿ.ಪ್ರಕಾಶ್ ಉಪಸ್ಥಿತರಿದ್ದರು.

ಇದೇ 20ರಿಂದ ಬಿಯರ್ ತುಸು ತುಟ್ಟಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹೊಸ ವರ್ಷದ ಆರಂಭದಲ್ಲೇ ಬಿಯರ್ ಪ್ರಿಯರಿಗೆ ತುಸು ಕಹಿ ಹೆಚ್ಚಿಸಲು ಮುಂದಾಗಿರುವ ರಾಜ್ಯ ಸರ್ಕಾರವು, ಬಿಯರ್ ಮೇಲಿನ ಸುಂಕವನ್ನು ಏರಿಕೆ ಮಾಡಿ ಅಧಿಸೂಚನೆ ಹೊರಡಿಸಿದೆ.

ವಿವಿಧ ಬಿಯರ್‌ಗಳ ಮೇಲಿನ ಸುಂಕವನ್ನು ಏರಿಕೆ ಮಾಡಿರುವ ಅಧಿಸೂಚನೆ ಬುಧವಾರ ಹೊರಬಿದ್ದಿದ್ದು, ಇದೇ 20ರಿಂದ ಜಾರಿಯಾಗಲಿದೆ. ಸುಂಕ ಪ್ರಮಾಣ ಏರಿಕೆಯ ಆಧಾರದಲ್ಲಿ ಕೆಲ ಪ್ರೀಮಿಯಂ ಬಿಯರ್‌ಗಳ ಚಿಲ್ಲರೆ ಮಾರಾಟ ಬೆಲೆಯಲ್ಲಿ ₹10ರಿಂದ ₹50ರವರೆಗೂ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ಬಿಯರ್ ಮೇಲಿನ ಸುಂಕ ಏರಿಕೆ ಸಂಬಂಧ 2024ರ ಆಗಸ್ಟ್‌ನಲ್ಲೇ ಕರಡನ್ನು ಹೊರಡಿಸಲಾಗಿತ್ತು. ಆದರೆ ಜಾರಿಗೆ ಬಂದಿರಲಿಲ್ಲ. ಈಗ ಆರ್ಥಿಕ ವರ್ಷದ ಕಡೆಯ ತ್ರೈಮಾಸಿಕದ ಆರಂಭದಲ್ಲೇ ಜಾರಿಗೆ ತರಲಾಗಿದೆ.

‘ಈ ಆರ್ಥಿಕ ವರ್ಷದಲ್ಲಿ ಐಎಂಎಲ್ ಮಾರಾಟ ತುಸು ಕಡಿಮೆ ಇದ್ದು, ಬಿಯರ್ ಮಾರಾಟ ಏರಿಕೆಯ ಹಾದಿಯಲ್ಲಿತ್ತು. ಆದರೆ ಈಗ ಸುಂಕ ಏರಿಕೆ ಮಾಡಿರುವ ಕಾರಣ ಬಿಯರ್ ಮಾರಾಟಕ್ಕೆ ಸ್ವಲ್ಪ ಧಕ್ಕೆಯಾಗಬಹುದು. ಆದರೆ ಬೇಸಿಗೆ ಆರಂಭದ ವೇಳೆಗೆ ಬಿಯರ್ ಮಾರಾಟ ಏರಿಕೆಯ ಹಾದಿಗೆ ಮರಳುವ ಸಾಧ್ಯತೆ ಇದೆ’ ಎನ್ನುತ್ತಾರೆ ಬೆಂಗಳೂರಿನ ವಿಜಯನಗರದ ಮದ್ಯ ಮಾರಾಟಗಾರ ವಿನಯ್.

ರಾಜ್ಯಕ್ಕೆ ಮಾನವ ಹಕ್ಕು ಆಯೋಗ ನೋಟಿಸ್

ನವದೆಹಲಿ: ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನಿರಾಕರಿಸಿದ ಕಾರಣಕ್ಕೆ ವೃದ್ಧರೊಬ್ಬರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಇಲಾಖೆ ಹಾಗೂ ಕರ್ನಾಟಕ ಸರ್ಕಾರಕ್ಕೆ ಮಾನವ ಹಕ್ಕು ಆಯೋಗ ನೋಟಿಸ್ ಜಾರಿ ಮಾಡಿದೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಆಯೋಗವು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ನೋಟಿಸ್ ನೀಡಿದೆ. ನಾಲ್ಕು ವಾರಗಳಲ್ಲಿ ವಿಸ್ತೃತ ವರದಿ ನೀಡುವಂತೆ ಸೂಚಿಸಿದೆ. ಈ ಪ್ರಕರಣದಲ್ಲಿ ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಆಗಿದೆ ಎಂದು ಆಯೋಗ ಅಭಿಪ್ರಾಯಪಟ್ಟಿದೆ.



ಸಂಕ್ರಾಂತಿ ಮುನ್ನುಡಿ

ಸಂಕ್ರಾಂತಿ ಹಬ್ಬದ ಅಂಗವಾಗಿ ಕೆ.ಆರ್. ಮಾರುಕಟ್ಟೆಗೆ ತಂದಿರುವ ಕಬ್ಬಿನ ಜಲ್ಲೆಗಳನ್ನು ಕಾರ್ಮಿಕರು ಕೆಳಗಿಳಿಸುತ್ತಿದ್ದ ದೃಶ್ಯ ಗುರುವಾರ ಕಂಡುಬಂತು

ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

ಯುಜಿಸಿ ಕರಡು ನಿಯಮ ಹಿಂಪಡೆಯಲು ಒತ್ತಾಯ

ಚೆನ್ನೈ (ಪಿಟಿಐ): ಯುಜಿಸಿ ಪ್ರಕಟಿಸಿರುವ ಕರಡು ನಿಯಮಗಳನ್ನು ಹಿಂಪಡೆಯುವಂತೆ ಶಿಕ್ಷಣ ಸಚಿವಾಲಯವನ್ನು ತಮಿಳುನಾಡು ವಿಧಾನಸಭೆ ಗುರುವಾರ ಒತ್ತಾಯಿಸಿದೆ.

ಈ ಕುರಿತ ನಿರ್ಣಯವನ್ನು ಅಂಗೀಕರಿಸಿರುವ ವಿಧಾನಸಭೆ, ‘ಯುಜಿಸಿಯ ಈ ನಡೆ ಸಂವಿಧಾನದ ಮೂಲತತ್ವ ಹಾಗೂ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು’ ಎಂದು ಹೇಳಿದೆ. ಬಿಜೆಪಿ ಮಿತ್ರ ಪಕ್ಷ ಪಿಎಂಕೆ ಹಾಗೂ ವಿರೋಧ ಪಕ್ಷ ಎಐಎಡಿಎಂಕೆ ಸೇರಿದಂತೆ ಎಲ್ಲ ಪಕ್ಷಗಳೂ ನಿರ್ಣಯವನ್ನು ಬೆಂಬಲಿಸಿವೆ.

ನಿರ್ಣಯ ಕುರಿತು ಮಾತನಾಡಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ‘ಯುಜಿಸಿಯ ಕರಡು ನಿಯಮಗಳು ವಿಶ್ವವಿದ್ಯಾಲಯಗಳನ್ನು ನಾಶ ಮಾಡಲಿವೆ’ ಎಂದರು.

ಈ ನಿರ್ಣಯ ವಿರೋಧಿಸಿ ಮಾತನಾಡಿದ ಬಿಜೆಪಿ ಶಾಸಕ ನಾಯನಾರ್ ನಾಗೇಂದ್ರನ್, ‘ಈಗಷ್ಟೆ ಕರಡು ನಿಯಮಗಳನ್ನು ಪ್ರಕಟಿಸಲಾಗಿದೆ. ಸಲಹೆ, ಶಿಫಾರಸು ಸಲ್ಲಿಸಲು ಫೆ.5ರವರೆಗೆ ಅವಕಾಶ ಇದೆ. ಈಗಲೇ ವಿರೋಧಿಸುವುದನ್ನು ಒಪ್ಪಲಾಗದು’ ಎಂದು ಹೇಳಿದರು.

ನಂತರ, ಅವರು ಪಕ್ಷದ ಶಾಸಕರೊಂದಿಗೆ ಸಭಾತ್ಯಾಗ ಮಾಡಿದರು.

ಎಸ್‌ಪಿ ಬಿ.ಟಿ.ಕವಿತಾ ನೇತೃತ್ವ • ಕರಿವರದರಾಜ ಬೆಟ್ಟಕ್ಕೆ ಪ್ರತಿದಿನ ನಡಿಗೆ

ಬೊಜ್ಜು ಕರಗಿಸಲು ಪೊಲೀಸರ ಚಾರಣ

• ಬಾಲಚಂದ್ರ ಎಚ್.

ಚಾಮರಾಜನಗರ: ಜಿಲ್ಲೆಯ ಪೊಲೀಸರು ಬೊಜ್ಜಿನ ಸಮಸ್ಯೆ ನಿವಾರಣೆ ಹಾಗೂ ಮಾನಸಿಕ–ದೈಹಿಕ ಆರೋಗ್ಯ ಕ್ಷಮತೆಯತ್ತ ಹೆಜ್ಜೆ ಇಟ್ಟಿದ್ದು, ಇದಕ್ಕೆ ‘ಕರಿವರದರಾಜ ಬೆಟ್ಟಕ್ಕೆ ಚಾರಣ’ ಕಾರ್ಯಕ್ರಮ ನೆರವಾಗಿದೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ಅವರ ನೇತೃತ್ವದಲ್ಲಿ ನಡೆದಿರುವ ನಿತ್ಯ ಚಾರಣದಿಂದ, ನಗರದ ಮಹಿಳಾ ಠಾಣೆ, ನಗರ, ಗ್ರಾಮಾಂತರ, ಪೂರ್ವ, ಪಟ್ಟಣ, ಸೆನ್, ಡಿಸಿಆರ್‌ಬಿ, ಡಿಎಆರ್‌ನ 34 ಅಧಿಕಾರಿಗಳು ಹಾಗೂ ಸಿಬ್ಬಂದಿಯ ದೇಹ ತೂಕ ಇಳಿದಿದೆ. ಆರಂಭದಲ್ಲಿ ಏದುಸಿರು ಬಿಡುತ್ತಿದ್ದವರು ಈಗ ಸಲೀಸಾಗಿ ಬೆಟ್ಟ ಹತ್ತಿ ಇಳಿಯುತ್ತಿದ್ದಾರೆ. ಎರಡು ತಿಂಗಳಿನಿಂದ ನಿರಂತರವಾಗಿ ಚಾರಣ ನಡೆಯುತ್ತಿದೆ.

ತುರ್ತು ಸಿಬ್ಬಂದಿಯನ್ನು ಹೊರತುಪಡಿಸಿ, ಪ್ರತಿದಿನ ತಲಾ ಒಂದು ಠಾಣೆಯ 20–25 ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸುತ್ತಿದ್ದಾರೆ. ಪ್ರತಿ ಠಾಣೆಗೆ ವಾರಕ್ಕೊಮ್ಮೆ ಪಾಳಿ ಬರುವುದರಿಂದ ಕರ್ತವ್ಯಕ್ಕೆ ತೊಂದರೆ ಇಲ್ಲ. ಬೆಳಿಗ್ಗೆ 6ಕ್ಕೆ ಚಾಮರಾಜನಗರದಿಂದ 6 ಕಿಮೀ ದೂರದಲ್ಲಿರುವ ಬೆಟ್ಟಕ್ಕೆ ಎಲ್ಲರೂ ವಾಹನಗಳಲ್ಲಿ ತೆರಳಿ ಒಂದೆಡೆ ಸೇರುತ್ತಾರೆ. ಬೆಳಿಗ್ಗೆ 6.30ರಿಂದ 9.15ರವರೆಗೂ ಚಾರಣ ನಡೆಯುತ್ತದೆ. ಅದು ಸುಮಾರು 6 ಕಿ.ಮೀ ನಡಿಗೆ.

ಮುಖ್ಯಾಂಶಗಳು

- ಎರಡು ತಿಂಗಳಿಂದ ನಡೆಯುತ್ತಿರುವ ಚಾರಣ
- ಪ್ರತಿ ದಿನವೂ ಒಂದು ಠಾಣೆಯ ಸಿಬ್ಬಂದಿ ನಿಯೋಜನೆ
- ತೂಕ ಇಳಿದಿರುವುದರಿಂದ ಮೂಡಿದ ಹರ್ಷ



ಪ್ರಾಯೋಗಿಕವಾಗಿ ಜಿಲ್ಲಾ ಕೇಂದ್ರದ ಠಾಣೆಗಳಲ್ಲಿ ಅನುಷ್ಠಾನಕ್ಕೆ ತಂದಿರುವ ಚಾರಣ ಕಾರ್ಯಕ್ರಮವನ್ನು ಎಲ್ಲ ಠಾಣೆಗಳಿಗೂ ವಿಸ್ತರಿಸುವ ಉದ್ದೇಶವಿದೆ

ಬಿ.ಟಿ.ಕವಿತಾ, ಎಸ್‌ಪಿ

ಬೆಟ್ಟ ಹತ್ತಿದ ಬಳಿಕ 15 ನಿಮಿಷ ಯೋಗ–ಧ್ಯಾನದ ಅಭ್ಯಾಸವೂ ನಡೆಯುತ್ತದೆ. ಕೆಳಗಿಳಿದ ಬಳಿಕ ನೀರು, ಆರೋಗ್ಯಕರ ಪೇಯ ಸೇವಿಸಿ ಕೆಲಸಕ್ಕೆ ಹಾಜರಾಗುತ್ತಾರೆ.

ಚಾರಣದಲ್ಲಿ ಭಾಗವಹಿಸುವುದು ಕಡ್ಡಾಯವಲ್ಲ. ಮಂಡಿನೋವು ಸಹಿತ ಇತರೆ ಅನಾರೋಗ್ಯ ಸಮಸ್ಯೆ ಇದ್ದವರಿಗೆ, ಬೆಟ್ಟ ಹತ್ತಲು ಕಷ್ಟವಾಗುವವರಿಗೆ ವಿನಾಯಿತಿಯನ್ನೂ ನೀಡಲಾಗಿದೆ. ಕೆಲವರು ಬೆಟ್ಟದ ಕೆಳಗೆಯೇ ವಾಕಿಂಗ್ ಮಾಡುತ್ತಾರೆ.



ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಟಿ.ಕವಿತಾ ನೇತೃತ್ವದಲ್ಲಿ ಕರಿವರದರಾಜ ಬೆಟ್ಟದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಚಾರಣ

‘5 ಕೆ.ಜಿ ತೂಕ ಇಳಿಯಿತು’

‘ಚಾರಣಕ್ಕೂ ಮುನ್ನ 90 ಕೆ.ಜಿ ಇದ್ದೆ. ಈಗ ತೂಕ 85ಕ್ಕೆ ಇಳಿದಿದ್ದು, ಬಹಳ ಸಂತೋಷವಾಗಿದೆ’ ಎಂದು ಕಾನ್‌ಸ್ಟೆಬಲ್ ಇಮ್ರಾನ್ ತಿಳಿಸಿದರು.

‘ಕೆಲಸದಲ್ಲಿ ಮೊದಲಿಗಿಂತ ಹೆಚ್ಚಿನ ಉತ್ಸಾಹ ಮೂಡಿದೆ. ಸಹೋದ್ಯೋಗಿಗಳೂ ತೂಕ ಇಳಿಸಿಕೊಂಡಿದ್ದಾರೆ. ಇಲಾಖೆ ಮುಖ್ಯಸ್ಥರು ಕೆಳಹಂತದ ಸಿಬ್ಬಂದಿ ಜೊತೆ ಚಾರಣ ಮಾಡುತ್ತಿರುವುದು ಖುಷಿ ಕೊಟ್ಟಿದೆ. ಇದುವರೆಗೂ ಇಲಾಖೆಯಲ್ಲಿ ಇಂತಹ ಪ್ರಯತ್ನ ನಡೆದಿರಲಿಲ್ಲ’ ಎಂದು ಹೇಳಿದರು.

ಕರಗಿದ ಬೊಜ್ಜು: ‘ಸಿಬ್ಬಂದಿಯ ಪೈಕಿ ಕೆಲವರು ಕನಿಷ್ಠ 2 ಕೆ.ಜಿಯಿಂದ 10 ಕೆ.ಜಿಯವರೆಗೂ ತೂಕ ಇಳಿಸಿಕೊಂಡಿದ್ದಾರೆ. ದೀರ್ಘಕಾಲೀನ ಅನಾರೋಗ್ಯ ಸಮಸ್ಯೆಗಳು ನಿಯಂತ್ರಣಕ್ಕೆ ಬಂದಿವೆ’ ಎಂದು ಬಿ.ಟಿ.ಕವಿತಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕುಟುಂಬ ನಿರ್ವಹಣೆ ಹಾಗೂ ಸದಾ ಒತ್ತಡದ ಕೆಲಸದ ನಡುವೆ ಆರೋಗ್ಯದ ಕಡೆ ಗಮನ ಕೊಡದೆ ಬೊಜ್ಜು, ಮಧುಮೇಹ, ರಕ್ತದೊತ್ತಡದಂಥ ಅನಾರೋಗ್ಯ ಸಮಸ್ಯೆಗಳನ್ನು ಹಲವು ಸಿಬ್ಬಂದಿ ಎದುರಿಸುತ್ತಿದ್ದಾರೆ. ಕೆಲಸದಲ್ಲೂ ನಿರುತ್ಸಾಹ ಕಾಣುತ್ತಿದ್ದುದರಿಂದ ಚಾರಣವನ್ನು ಆಯೋಜಿಸಲಾಯಿತು. ಉತ್ತಮ ಸ್ಪಂದನೆ ವ್ಯಕ್ತವಾಗಿದೆ’ ಎಂದು ಹೇಳಿದರು.

ಹಿನ್ನೆಲೆ ಗಾಯಕ ಪಿ.ಜಯಚಂದ್ರನ್ ಇನ್ನಿಲ್ಲ

ತ್ರಿಶ್ಶೂರ್ (ಕೇರಳ) (ಪಿಟಿಐ): ಕನ್ನಡವೂ ಸೇರಿ ವಿವಿಧ ಭಾಷೆಗಳಲ್ಲಿ ಹಲವು ಸುಮಧುರ ಗೀತೆಗಳಿಗೆ ದನಿ ನೀಡಿದ್ದ, ಹೆಸರಾಂತ ಗಾಯಕ ಪಿ.ಜಯಚಂದ್ರನ್ ಇಲ್ಲಿ ನಿಧನರಾದರು. ಅವರಿಗೆ 80 ವರ್ಷ ವಯಸ್ಸಾಗಿತ್ತು.



ಪಿ.ಜಯಚಂದ್ರನ್

ಪ್ರೀತಿ, ಬಾಂಧವ್ಯ, ಭಕ್ತಿಗೀತೆಗಳಿಗೆ ಭಾವ ತುಂಬಿ ಹಾಡುತ್ತಿದ್ದ ಅವರನ್ನು ಆಪ್ತ ಬಳಗ ಆತ್ಮೀಯವಾಗಿ ‘ಭಾವ ಗಾಯಕನ್’ ಎಂದೇ ಗುರುತಿಸುತ್ತಿತ್ತು.

ಅವರಿಗೆ ಪತ್ನಿ ಲಲಿತಾ, ಪುತ್ರಿ ಲಕ್ಷ್ಮೀ, ಗಾಯಕರೂ ಆದ ಪುತ್ರ ದಿನಕರನ್ ಇದ್ದಾರೆ.

‘ಗುರುವಾರ ಇಲ್ಲಿನ ತಮ್ಮ ಮನೆಯಲ್ಲಿಯೇ ಕುಸಿದುಬಿದ್ದಿದ್ದ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ, ರಾತ್ರಿ 7.55ರ ವೇಳೆಗೆ ಮೃತಪಟ್ಟರು’ ಎಂದು ಆಸ್ಪತ್ರೆಗೆ ಮೂಲಗಳು ತಿಳಿಸಿವೆ.

ಕನ್ನಡ, ಮಲಯಾಳ, ಹಿಂದಿ, ತೆಲುಗು, ತಮಿಳು ಭಾಷೆಗಳಲ್ಲಿ 16 ಸಾವಿರಕ್ಕೂ ಅಧಿಕ ಗೀತೆಗಳನ್ನು ಹಾಡಿದ್ದಾರೆ.

ಹಿನ್ನೆಲೆ ಗಾಯನಕ್ಕಾಗಿ ರಾಷ್ಟ್ರ ಪ್ರಶಸ್ತಿ, ಕೇರಳ ಸರ್ಕಾರದ ಪ್ರತಿಷ್ಠಿತ ಜೆ.ಸಿ. ಡೇನಿಯಲ್ ಪ್ರಶಸ್ತಿ, ಐದು ಬಾರಿ ಕೇರಳ ಸರ್ಕಾರದಿಂದ ರಾಜ್ಯ ಚಲನಚಿತ್ರ ಪ್ರಶಸ್ತಿ, ಎರಡು ಬಾರಿ ತಮಿಳುನಾಡು ಸರ್ಕಾರದ ರಾಜ್ಯ ಚಲನಚಿತ್ರ ಪ್ರಶಸ್ತಿಗೆ ಅವರು ಪುರಸ್ಕೃತರಾಗಿದ್ದರು.

ಕನ್ನಡದಲ್ಲಿ ‘ಒಲವಿನ ಉಡುಗೊರೆ ಕೊಡಲೇನು. ರಕುತದಿ ಬರೆದನು ಇದ ನಾನು..’, ‘ಮಂದಾರ ಪುಷ್ಪವು ನೀನು...’, ‘ಹಿಂದೂಸ್ತಾನವೂ ಎಂದೂ ಮರೆಯದ...’ ‘ಚಂದ ಚಂದಾ.. ಸಂಗಾತಿ ನೋಟವೇ ಚಂದಾ..’ ಸೇರಿದಂತೆ ಅವರು ದನಿ ನೀಡಿದ್ದ ಹಲವು ಗೀತೆಗಳು ಕೇಳುಗರ ಮನಗೆದ್ದಿವೆ.

₹15 ಕೋಟಿ ಮೌಲ್ಯದ ಚಿನ್ನಾಭರಣ ಕಳ್ಳತನ ಪ್ರಕರಣ

ಆರೋಪಿಗಳು ಸಿಕ್ಕಿದರೂ ಕರೆತರಲು ತೊಡಕು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಾಲೀಕನ ಮನೆಯಲ್ಲಿ ನಗದು, ಚಿನ್ನಾಭರಣ ಸೇರಿದಂತೆ ₹15.15 ಕೋಟಿ ಮೌಲ್ಯದ ವಸ್ತುಗಳನ್ನು ದೋಚಿ ಪರಾರಿಯಾಗಿದ್ದ ಆರೋಪಿಗಳನ್ನು ನೇಪಾಳದಲ್ಲಿ ಪತ್ತೆಹಚ್ಚಿದರೂ ತಾಂತ್ರಿಕ ಸಮಸ್ಯೆಯಿಂದಾಗಿ ಅವರನ್ನು ನಗರಕ್ಕೆ ಕರೆತರಲು ವಿಜಯನಗರ ಪೊಲೀಸರಿಗೆ ಸಾಧ್ಯವಾಗಿಲ್ಲ.

ವಿಜಯನಗರದ ಅರಿಹಂತ್ ಚಿನ್ನಾಭರಣ ಅಂಗಡಿ ಮಾಲೀಕ ಸುರೇಂದ್ರ ಕುಮಾರ್ ಜೈನ್ ಅವರ ಮನೆಯಲ್ಲಿದ್ದ ₹14.75 ಕೋಟಿ ಮೌಲ್ಯದ ಚಿನ್ನಾಭರಣ, ₹40.80 ಲಕ್ಷ ನಗದು ಕಳ್ಳತನವಾಗಿತ್ತು. ಮನೆಯಲ್ಲಿ ಕೆಲಸಕ್ಕಿದ್ದ ನೇಪಾಳದ ನಮ್ರಾಜ್ ಜತೆಗೆ ಇನ್ನೂ ಮೂವರು ಆರೋಪಿಗಳು ಸೇರಿ ಕೃತ್ಯ ಎಸಗಿರುವುದು ಪೊಲೀಸ್ ತನಿಖೆಯಿಂದ ಗೊತ್ತಾಗಿತ್ತು. ಘಟನೆ ನಡೆದ ಕೆಲ ದಿನಗಳಲ್ಲಿಯೇ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿತ್ತು.

ಈ ಪೈಕಿ ಪ್ರಮುಖ ಆರೋಪಿಗಳಾದ ನಮ್ರಾಜ್ ಮತ್ತು ಆತನ ಪತ್ನಿ ದಾನ್ ಕಿರಣ್ ಚಿನ್ನಾಭರಣ, ನಗದು ಸಹಿತ ನೇಪಾಳಕ್ಕೆ ಪರಾರಿ ಆಗಿದ್ದರು. ನೇಪಾಳಕ್ಕೆ ತೆರಳಿದ್ದ ವಿಜಯನಗರ ಪೊಲೀಸರು 21 ದಿನ ಹುಡುಕಾಟ ನಡೆಸಿ, ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

‘ಆರೋಪಿಗಳು ನೇಪಾಳದಲ್ಲಿ ಇರುವುದರಿಂದ ನೇರವಾಗಿ ಬಂಧಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರನ್ನು ಹಸ್ತಾಂತರ ಮಾಡುವಂತೆ ಇಂಟರ್‌ಪೋಲ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು. ತನಿಖೆ ಪ್ರಗತಿಯಲ್ಲಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಅರಿಹಂತ್ ಜ್ಯೂವೆಲ್ಲರ್ಸ್ ಮಳಿಗೆ ಮಾಲೀಕ ಸುರೇಂದ್ರ ಕುಮಾರ್ ಜೈನ್ ಅವರು ಎರಡು ತಿಂಗಳ ಹಿಂದೆಯೇ ಗುಜರಾತ್‌ಗೆ ತೆರಳುವುದಾಗಿ ಕೆಲಸಗಾರರಿಗೆ ಹೇಳಿದ್ದರು. ಆರೋಪಿಗಳು ಕಳ್ಳತನಕ್ಕೆ ಕಾರ್ಯತಂತ್ರ ರೂಪಿಸಿದ್ದರು. ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ ಎಂಬ ಕಾರಣಕ್ಕೆ ಆರೋಪಿಗಳನ್ನು ಉದ್ಯೋಗಕ್ಕೆ ಸೇರಿಸುವ ಮುನ್ನ ಆಧಾರ್ ಕಾರ್ಡ್ ಹಾಗೂ ಪೊಲೀಸ್ ಪರಿಶೀಲನೆ ನಡೆಸಿರಲಿಲ್ಲ’ ಎಂದು ಪೊಲೀಸರು ತಿಳಿಸಿದರು.

‘ಸುರೇಂದ್ರ ಕುಮಾರ್ ಜೈನ್ ಅವರ ಮನೆಯಲ್ಲಿ ನಮ್ರಾಜ್ ಹಾಗೂ ಆತನ ಪತ್ನಿ ಆರು ತಿಂಗಳಿನಿಂದ ಕೆಲಸ ಮಾಡಿಕೊಂಡಿದ್ದರು. ಉಳಿದುಕೊಳ್ಳಲು ಮನೆ ವ್ಯವಸ್ಥೆ ಇರದ ನಮ್ರಾಜ್ ದಂಪತಿಗೆ ತಮ್ಮದೇ ಮನೆಯಲ್ಲಿ ಸುರೇಂದ್ರ ಅವರು ಒಂದು ಕೊಠಡಿ ನೀಡಿದ್ದರು. ನಮ್ರಾಜ್ ಆಭರಣ ಅಂಗಡಿಯ ಭದ್ರತಾ ಸಿಬ್ಬಂದಿಯಾಗಿರುವುದರ ಜೊತೆಗೆ ಮಾಲೀಕನ ಮನೆಯ ಹೂದೋಟದಲ್ಲಿ ಗಿಡಗಳಿಗೆ ನೀರು ಹಾಕುವುದು ಸೇರಿದಂತೆ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

ನವೆಂಬರ್ 1ರಂದು ಜಾತ್ರೆಯ ನಿಮಿತ್ತ ಸುರೇಂದ್ರ ಕುಮಾರ್ ಜೈನ್ ಅವರ ಕುಟುಂಬ ಗುಜರಾತ್‌ಗೆ ತೆರಳಿದ್ದ ವೇಳೆ ಮನೆಯಲ್ಲಿದ್ದ ಚಿನ್ನಾಭರಣ, ನಗದು ದೋಚಿಕೊಂಡು ನಮ್ರಾಜ್ ಪತ್ನಿಯೊಂದಿಗೆ ಪರಾರಿಯಾಗಿದ್ದ.

ಸ್ಥಾವರ ಸ್ಥಾಪನೆ ಆತಂಕ; ಸರ್ವೆಗೆ ತಡೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆ ಸಲುವಾಗಿ ಅಧಿಕಾರಿಗಳು ಸರ್ವೆ ಮಾಡಲು ಬಂದಿದ್ದಾರೆ ಎಂದು ಆತಂಕಗೊಂಡ ತಾಲ್ಲೂಕಿನ ಅರಸಿನಕೇರಿ ಗ್ರಾಮಸ್ಥರು ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳನ್ನು ಗುರುವಾರ ತರಾಟೆಗೆ ತೆಗೆದುಕೊಂಡಿದ್ದಾರೆ.

ಅಧಿಕಾರಿಗಳು ನಿಕ್ಷೇಪ ಪತ್ತೆ ಸರ್ವೆಗಾಗಿ ಅರಸಿನಕೇರಿಗೆ ತೆರಳಿದ್ದಾಗ ಗ್ರಾಮಸ್ಥರು ಅಧಿಕಾರಿಗಳ ವಾಹನದ ಮುಂದೆ ಕುಳಿತು ಅವರನ್ನು ತರಾಟೆಗೆ ತೆಗೆದುಕೊಂಡರು. ‘ನಾವು ಪರಮಾಣು ಸ್ಥಾವರದ ಬಗ್ಗೆ ಸರ್ವೆ ಮಾಡಲು ಬಂದಿಲ್ಲ. ಭೂಮಿಯಲ್ಲಿರುವ ಖನಿಜದ ಬಗ್ಗೆ ಮಾಹಿತಿ ಸಂಗ್ರಹಿಸಲು ಮಾತ್ರ ಬಂದಿದ್ದೇವೆ’ ಎಂದು ಅಧಿಕಾರಿಗಳು ಮೇಲಿಂದ ಮೇಲೆ ಹೇಳಿದರೂ ಗ್ರಾಮಸ್ಥರು ಕೇಳಲಿಲ್ಲ. ಅಧಿಕಾರಿಗಳ ವಿರುದ್ಧ ಆಕ್ರೋಶಗೊಂಡರು. ಜನ ಅವರ ವಾಹನಗಳ ಮುಂದೆ ಕುಳಿತು ಪ್ರತಿಭಟಿಸಿದರು.



ಕೊಪ್ಪಳ ತಾಲ್ಲೂಕಿನ ಅರಸನಕೇರಿಯಲ್ಲಿ ವಾಹನದ ಮುಂದೆ ಕುಳಿತು ವಿರೋಧ ವ್ಯಕ್ತಪಡಿಸಿದ ಮಹಿಳೆಯರು

ಇದರಿಂದ ಆತಂಕಗೊಂಡ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಬಂದ ಕಂದಾಯ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ, ಗ್ರಾಮಸ್ಥರಿಗೆ ತಿಳಿ ಹೇಳಿದ ಬಳಿಕ ಪರಿಸ್ಥಿತಿ ಶಾಂತವಾಯಿತು.

ಡಿಎಸ್‌ಪಿ ಸೇರಿ ಇಬ್ಬರ ಅಮಾನತು • ಮೃತರ ಹಾಗೂ ಗಾಯಾಳುಗಳ ಕುಟುಂಬಗಳಿಗೆ ಪರಿಹಾರ ಘೋಷಣೆ

ತಿರುಪತಿ ಕಾಲ್ತುಳಿತ: ನ್ಯಾಯಾಂಗ ತನಿಖೆಗೆ

ತಿರುಪತಿ (ಪಿಟಿಐ): 'ತಿರುಪತಿಯ ವೆಂಕಟೇಶ್ವರ ಸ್ವಾಮಿ ದೇಗುಲದಲ್ಲಿ ಬುಧವಾರ ಸಂಭವಿಸಿದ್ದ ಕಾಲ್ತುಳಿತ ಪ್ರಕರಣ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ' ಎಂದು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಗುರುವಾರ ತಿಳಿಸಿದರು.

'ನಿರ್ಲಕ್ಷ್ಯದ ಆರೋಪದ ಮೇರೆಗೆ ಡಿಎಸ್‌ಪಿ ಸೇರಿದಂತೆ ಇಬ್ಬರು ಅಧಿಕಾರಿಗಳ ಅಮಾನತು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ) ಸೇರಿದಂತೆ ಮೂವರು ಹಿರಿಯ ಅಧಿಕಾರಿಗಳ ವರ್ಗಾವಣೆ ಮಾಡಲಾಗಿದೆ' ಎಂದು ನಾಯ್ಡು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ತಿರುಪತಿಯ ನಿರ್ವಹಣೆ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಕೆಲ ಲೋಪ ದೋಷಗಳಿರುವುದು ಗಮನಕ್ಕೆ ಬಂದಿದ್ದು, ಅವುಗಳನ್ನು ಸರಿಪಡಿಸಲಾಗುವುದು' ಎಂದು ಅವರು ಹೇಳಿದರು.

ತಲಾ ₹ 25 ಲಕ್ಷ ಪರಿಹಾರ: ಪ್ರಕರಣಕ್ಕೆ ಸಂಬಂಧಿಸಿದಂತೆ ತೀವ್ರ ಬೇಸರ ವ್ಯಕ್ತಪಡಿಸಿದ ಅವರು, ಮೃತಪಟ್ಟ ಆರು ಜನರ ಕುಟುಂಬಗಳಿಗೆ ತಲಾ ₹25 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹2 ಲಕ್ಷ ಪರಿಹಾರವನ್ನು ಘೋಷಿಸಿದರು.

ಈ ಹಿಂದೆ ತಿರುಮಲ ಬೆಟ್ಟಗಳಲ್ಲಿ ಟೋಕನ್ ನೀಡುವ ವ್ಯವಸ್ಥೆ ಇತ್ತು. ಅದಕ್ಕೆ ವಿರುದ್ಧವಾಗಿ ಹಿಂದಿನ ಆಡಳಿತವು ತಿರುಪತಿಯಲ್ಲಿ ಟೋಕನ್ ನೀಡುವ ಹೊಸ ವ್ಯವಸ್ಥೆ ಪರಿಚಯಿಸಿತ್ತು ಎಂದು ನಾಯ್ಡು ಹೇಳಿದರು.

ತಿರುಪತಿಯ ಎಂಜಿಎಂ ಶಾಲೆ ಬಳಿಯ ಬೈರಾಗಿ ಪಟ್ಟೇಡ ಬಳಿ ನೂರಾರು ಜನರು ವೈಕುಂಠ ದ್ವಾರ ದರ್ಶನಕ್ಕಾಗಿ ಟಿಕೆಟ್ ಪಡೆಯಲು ನಿಂತಿದ್ದಾಗ ನೂಕು ನುಗ್ಗಲು ಉಂಟಾಯಿತು. ಈ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಆರು ಮಂದಿ ಮೃತಪಟ್ಟು, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದರು.



ತಿರುಪತಿಯಲ್ಲಿ ಸಂಭವಿಸಿದ್ದ ಕಾಲ್ತುಳಿತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್‌. ಚಂದ್ರಬಾಬು ನಾಯ್ಡು ಗುರುವಾರ ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸಿದರು – ಪಿಟಿಐ ಚಿತ್ರ

'ನಾವು ಸತ್ತು ಹೋದವೆಂದೇ ಭಾವಿಸಿದ್ದೆವು...'

'ಐದು ನಿಮಿಷ, ನಾವೆಲ್ಲಾ ಸತ್ತು ಹೋಗಿದ್ದೇವೆ ಎಂಬ ಭಾವನೆ ಮೂಡಿತ್ತು. ನಾನು ಕಳೆದ 25 ವರ್ಷಗಳಿಂದ ಈ ದೇವಸ್ಥಾನಕ್ಕೆ ಬರುತ್ತಿದ್ದೇನೆ. ಆದರೆ, ಈ ರೀತಿ ಎಂದೂ ಆಗಿರಲಿಲ್ಲ...'

–ಇದು, ಇಲ್ಲಿನ ವೆಂಕಟೇಶ್ವರ ದೇವಸ್ಥಾನದಲ್ಲಿ ವೈಕುಂಠ ದ್ವಾರ ದರ್ಶನಕ್ಕಾಗಿ ಟಿಕೆಟ್ ಪಡೆಯುವ ವೇಳೆ ಉಂಟಾದ ನೂಕು ನುಗ್ಗಲು ಹಾಗೂ ಕಾಲ್ತುಳಿತದಲ್ಲಿ ಬದುಕುಳಿದಿರುವ ಭಕ್ತೆ, ಡಿ.ವೆಂಕಟಲಕ್ಷ್ಮಿ ಹೇಳುವ ಮಾತು.

ಸ್ಥಳೀಯ ಸುದ್ದಿವಾಹಿನಿ ಜೊತೆ ಮಾತನಾಡಿದ ಅವರು, 'ಆರು ಜನ ಹುಡುಗರು ನನ್ನನ್ನು ಪಕ್ಕಕ್ಕೆ ಎಳೆದು ಬದುಕಿಸಿದರು. ನಂತರ, ಕುಡಿಯಲು ನೀರು ಕೂಡ ಕೊಟ್ಟರು' ಎಂದು ಬುಧವಾರದ ಭೀಕರ ಕ್ಷಣಗಳನ್ನು ವಿವರಿಸಿದ್ದಾರೆ.

'ಹಠಾತ್ತನೆ ಜನರು ಮುನ್ನುಗ್ಗಿದ್ದರಿಂದ ನೂಕು ನುಗ್ಗಲು ಉಂಟಾಯಿತು. ನಾನು ನಿಂತಿದ್ದ ಸ್ಥಳದಲ್ಲಿಯೇ 10 ಜನರು ಬಿದ್ದು, ಗಾಯಗೊಂಡರು. ಜೋರಾದ ಕಿರುಚಾಟ ಶುರುವಾಯಿತು. ಅಷ್ಟಾದರೂ ಜನರು ಬರುವುದು ನಿಲ್ಲಲಿಲ್ಲ. ದಟ್ಟಣೆಯನ್ನು ನಿಯಂತ್ರಿಸಲಾಗಲಿಲ್ಲ' ಎಂದೂ ಅವರು ಹೇಳಿದ್ದಾರೆ.

'ಭಕ್ತರು ಸಾಗುವುದಕ್ಕೆ ಪೊಲೀಸರು ವ್ಯವಸ್ಥಿತ ಕ್ರಮ ಕೈಗೊಂಡಿದ್ದಲ್ಲಿ, ಇಂತಹ ದುರ್ಘಟನೆ ಸಂಭವಿಸುತ್ತಿರಲಿಲ್ಲ. ಇನ್ನೊಂದೆಡೆ, ಆ ಸ್ಥಳದಲ್ಲಿ ಏನಾಗುತ್ತಿದೆ ಎಂಬುದು ಕೂಡ ಯಾರಿಗೂ ಗೊತ್ತಾಗಲಿಲ್ಲ' ಎಂದು ವಿವರಿಸಿದ್ದಾರೆ.

'ನಾನು ಬುಧವಾರ ಬೆಳಿಗ್ಗೆ 11ರ ವೇಳೆಗೆ ಇಲ್ಲಿಗೆ ಬಂದೆ. ಸಂಜೆ 7ಕ್ಕೆ ಬಾಗಿಲು ತೆರೆಯಿತು. ಭಕ್ತರು ಸಾಲಾಗಿ ಹೋಗುವಂತೆ ಒಬ್ಬ ಸಿಬ್ಬಂದಿ ಹೇಳಿದರು. ಆದರೆ, ಅವರ ಮಾತನ್ನು ಯಾರೂ ಕೇಳಲಿಲ್ಲ. ಪೊಲೀಸರು ಕೂಡ ಹೊರಗಡೆಯೇ ಇದ್ದರು' ಎಂದು ಮತ್ತೊಬ್ಬ ಭಕ್ತೆ ಹೇಳಿದ್ದಾರೆ.'5 ಸಾವಿರ ಜನರು ಜಮಾಯಿಸಿದ್ದಾರೆ ಎಂಬುದಾಗಿ ಪೊಲೀಸರಿಗೆ ತಿಳಿಸುವಂತೆ ಭಕ್ತರೊಬ್ಬರು ಸೂಚಿಸಿದರು. ಈ ವೇಳೆ, ಪೊಲೀಸರು ದಿಢೀರನೆ ಬಾಗಿಲುಗಳನ್ನು ತೆಗೆದಿದ್ದರಿಂದ ಕಾಲ್ತುಳಿತ ಉಂಟಾಯಿತು' ಎಂದೂ ವಿವರಿಸಿದ್ದಾರೆ.

'ದಿಢೀರ್ ನೂಕಾಟ ಕಾರಣ'

ಹೈದರಾಬಾದ್: 'ಟಿಕೆಟ್‌ಗಾಗಿ ಸಾಲಿನಲ್ಲಿ ನಿಂತಿದ್ದವರ ಕಡೆಗೆ ಭಾರಿ ಸಂಖ್ಯೆಯಲ್ಲಿ ಭಕ್ತರು ಹಠಾತ್ತನೇ ನುಗ್ಗಿದರು. ಇದರಿಂದ ನೂಕು ನುಗ್ಗಲು ಹಾಗೂ ಕಾಲ್ತುಳಿತ ಉಂಟಾಯಿತು. ಇದರಿಂದಾಗಿಯೇ ಆರು ಜನರು ಮೃತಪಟ್ಟರು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ' ಎಂದು ತಿರುಪತಿ ಪೂರ್ವ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಗಳಲ್ಲಿ ಹೇಳಲಾಗಿದೆ.

ತಿರುಪತಿಯಲ್ಲಿ ಬುಧವಾರ ರಾತ್ರಿ ಉಂಟಾದ ಕಾಲ್ತುಳಿತದಲ್ಲಿ ಐವರು ಮಹಿಳೆಯರು ಸೇರಿ ಆರು ಜನರು ಮೃತಪಟ್ಟಿದ್ದಾರೆ. ಈ ಘಟನೆಗೆ ಸಂಬಂಧಿಸಿ ಪೊಲೀಸರು ಎರಡು ಎಫ್‌ಐಆರ್ ದಾಖಲಿಸಿದ್ದಾರೆ.

'ಈ ಆರು ಜನರು ಆಕಸ್ಮಿಕವಾಗಿ ಕೆಳಗೆ ಬಿದ್ದರು. ಅವರನ್ನು ಕೂಡಲೇ ಎಸ್‌ವಿಆರ್‌ಆರ್‌ಜಿಜಿ ಆಸ್ಪತ್ರೆಗೆ ದಾಖಲಿಸಲಾಯಿತು. ಕರ್ತವ್ಯದಲ್ಲಿದ್ದ ವೈದ್ಯರು ಪರೀಕ್ಷಿಸಿ, ಎಲ್ಲರೂ ಮೃತಪಟ್ಟಿದ್ದಾಗಿ ಘೋಷಿಸಿದರು' ಎಂದೂ ಎಫ್‌ಐಆರ್‌ಗಳಲ್ಲಿ ಉಲ್ಲೇಖಿಸಲಾಗಿದೆ.

'ತಮಿಳುನಾಡಿನ ಸೇಲಂ ಜಿಲ್ಲೆಯ ಮೆಟ್ಟೂರಿನ ಆರ್.ಮಲ್ಲಿಕಾ (50) ಅವರು ವಿಷ್ಣುನಿವಾಸಂ ಬಳಿ ಟೋಕನ್‌ಗಾಗಿ ಸರದಿಯಲ್ಲಿ ನಿಂತಿದ್ದರು. ನೂರಾರು ಭಕ್ತರು ದಿಢೀರನೆ ನುಗ್ಗಿದ್ದರಿಂದ, ಅನಾರೋಗ್ಯದಿಂದ ಬಳಲುತ್ತಿದ್ದ ಮಲ್ಲಿಕಾ ಅವರು ಕುಸಿದರು. ಅವರನ್ನು ಎಸ್‌ವಿಆರ್‌ಆರ್‌ಜಿಜಿ ಆಸ್ಪತ್ರೆಗೆ ದಾಖಲಿಸಲಾಯಿತು. ಅವರು ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದರು' ಎಂದು ಮೊದಲ ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ಈ ಘಟನೆ ಬಳಿಕ, ಬಾಲಯ್ಯಪಲ್ಲಿ ಮಂಡಲ ತಹಶೀಲ್ದಾರ್ ಪಿ.ಶ್ರೀನಿವಾಸುಲು ಅವರು ನೀಡಿರುವ ದೂರು ಆಧರಿಸಿ ಈ ಎಫ್‌ಐಆರ್ ದಾಖಲಿಸಲಾಗಿದೆ. ಮತ್ತೊಂದು ಎಫ್‌ಐಆರ್‌ನಲ್ಲಿ, ಐದು ಜನರ ಸಾವು ಕುರಿತು ವಿವರಿಸಲಾಗಿದೆ.

ವೈಕುಂಠ ಏಕಾದಶಿಯಂದು ವೆಂಕಟೇಶ್ವರ ದೇವರ ದರ್ಶನ ಪಡೆಯುವುದಕ್ಕಾಗಿ ಟಿಟಿಡಿ ವಿತರಿಸುವ ಕೂಪನ್ ಪಡೆಯಲು ಜನರು 12 ಗಂಟೆಗೂ ಹೆಚ್ಚು ಕಾದಿದ್ದರು. ವೈಕುಂಠ ಏಕಾದಶಿ ಜ.10ರಂದು ಇದೆ.

ವರ್ಗಾವಣೆ ಆದವರು

- ಎಸ್‌ಪಿ ಸುಬ್ಬರಾಯುಡು,
- ಟಿಟಿಡಿ ಜಂಟಿ ಕಾರ್ಯ ನಿರ್ವಾಹಕ ಅಧಿಕಾರಿ ಕೆ. ಗೌತಮಿ, ಸಿವಿಎಸ್‌ಒ ಶ್ರೀಧರ್

ಅಮಾನತು ಆದವರು

- ಡಿಎಸ್‌ಪಿ ರಮಣ್ ಕುಮಾರ್,
- ಎಸ್‌ವಿ ಗೋಶಾಲಾದ ನಿರ್ದೇಶಕ ಡಾ. ಹರಿನಾಥ ರೆಡ್ಡಿ

'ಪೊಲೀಸರ ಸ್ಥಳ ನಿಯೋಜನೆ ಬದಲಾಯಿಸಿದ್ದೇ ಕಾಲ್ತುಳಿತಕ್ಕೆ ಕಾರಣ'



ವೈ.ಎಸ್‌.ಜಗನ್ ಮೋಹನ್ ರೆಡ್ಡಿ

ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರು ಜ.6ರಿಂದ 8 ವರೆಗೆ ಕುಪ್ಪಂನಲ್ಲಿ ಇದ್ದರು. ಅವರ ಕಾರ್ಯಕ್ರಮದ ಭದ್ರತೆಗಾಗಿ ಪೊಲೀಸರನ್ನು ಕುಪ್ಪಂನಲ್ಲಿ ನಿಯೋಜನೆ ಮಾಡಿ, ತಿರುಪತಿಯಲ್ಲಿನ ಜನದಟ್ಟಣೆ ನಿರ್ವಹಣೆಗೆ ಕ್ರಮ ಕೈಗೊಳ್ಳದಿರುವುದೇ ಕಾಲ್ತುಳಿತಕ್ಕೆ ಕಾರಣ ಎಂದು ವೈ.ಎಸ್.ಆರ್ ಕಾಂಗ್ರೆಸ್ ಮುಖ್ಯಸ್ಥ ವೈ.ಎಸ್.ಜಗನ್ ಮೋಹನ್ ರೆಡ್ಡಿ ಗುರುವಾರ ಆರೋಪಿಸಿದ್ದಾರೆ.

ಈ ಘಟನೆ ಕುರಿತು ಸರ್ಕಾರ, ಟಿಟಿಡಿ ಆಡಳಿತ ಮತ್ತು ಜಿಲ್ಲೆಯ ಅಧಿಕಾರಿಗಳಿಗೆ ಉತ್ತರದಾಯಿತ್ವ ನಿಗದಿ ಮಾಡಬೇಕು ಎಂದೂ ಆಗ್ರಹಿಸಿದ್ದಾರೆ.

ಭೇಟಿ: ತಿರುಪತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನು ಅವರು ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ಸಿ.ಎಂ ನೈತಿಕ ಹೊಣೆ ಹೊರಲಿ: ವೈಎಸ್‌ಆರ್‌ಸಿಪಿ

ಕಾಲ್ತುಳಿತ ಘಟನೆ ಕುರಿತು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ವಿರೋಧ ಪಕ್ಷ ವೈ.ಎಸ್.ಆರ್. ಕಾಂಗ್ರೆಸ್ ಪಕ್ಷ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ನೈತಿಕ ಹೊಣೆ ಹೊರಬೇಕು ಎಂದು ಆಗ್ರಹಿಸಿದೆ.

'ಹೆಚ್ಚುವರಿ ಇ.ಒ, ಎಸ್‌ಪಿ ಹಾಗೂ ಅಧೀನ ಅಧಿಕಾರಿಗಳು, ಟಿಟಿಡಿಯ ಜಾಗೃತ ದಳದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಬೇಕು. ಮೃತರ ಕುಟುಂಬಗಳಿಗೆ ತಲಾ ₹ 1ಕೋಟಿ, ಗಾಯಗೊಂಡವರಿಗೆ ತಲಾ ₹20 ಲಕ್ಷ ಪರಿಹಾರ ನೀಡಬೇಕು' ಎಂದು ಟಿಟಿಡಿಯ ಮಾಜಿ ಅಧ್ಯಕ್ಷ ಹಾಗೂ ವೈಎಸ್‌ಆರ್‌ಸಿಯ ನಾಯಕ ಬಿ.ಕರುಣಾಕರ ರೆಡ್ಡಿ ಆಗ್ರಹಿಸಿದ್ದಾರೆ.

ಗಾಯಾಳುಗಳ ಭೇಟಿ ಮಾಡಿದ ನಾಯ್ಡು

ತಿರುಪತಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿರುವ ಶ್ರೀ ವೆಂಕಟೇಶ್ವರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ (ಎಸ್‌ವಿಐಎಂಎಸ್) ಗುರುವಾರ ಭೇಟಿ ನೀಡಿದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ಗಾಯಾಳುಗಳ ಯೋಗಕ್ಷೇಮ ವಿಚಾರಿಸಿದರು.

ಆಸ್ಪತ್ರೆಯಲ್ಲಿ 90 ನಿಮಿಷಗಳವರೆಗೂ ಇದ್ದ ಅವರು, ಪ್ರತಿ ಗಾಯಾಳುವನ್ನು ಮಾತನಾಡಿಸಿದರು. ಇದಕ್ಕೂ ಮುನ್ನ ಅವರು, ಕಾಲ್ತುಳಿತ ಸಂಭವಿಸಿದ್ದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಧಿಕಾರಿಗಳಿಂದ ಅವರು ಮಾಹಿತಿ ಪಡೆದರು.

ಪತ್ನಿ ಸಾವು: ಪತಿಯ ಆಕ್ರಂದನ

ಪ್ರಜಾವಾಣಿ ವಾರ್ತೆ

ಚೆನ್ನೈ: ಕಾಲ್ತುಳಿತದಲ್ಲಿ ಪತ್ನಿ ಮಲ್ಲಿಕಾ (50) ಮೃತಪಟ್ಟ ವಿಷಯ ತಿಳಿಯುತ್ತಿದ್ದಂತೆ ತಮಿಳುನಾಡಿನ ಸೇಲಂನ ಕೃಷ್ಣನ್ (70) ಅವರ ಆಕ್ರಂದನ ಮುಗಿಲು ಮುಟ್ಟಿತ್ತು. ಇಬ್ಬರು ಮಕ್ಕಳನ್ನು ಕೋವಿಡ್ ಸಂದರ್ಭದಲ್ಲಿ ಕಳೆದುಕೊಂಡಿದ್ದ ಕೃಷ್ಣನ್ ಅವರಿಗೆ, ಪತ್ನಿಯ ಸಾವು ತೀವ್ರ ಆಘಾತ ತರಿಸಿದೆ.

'ಇನ್ನು ಮುಂದೆ ನನ್ನವರು ಎಂದು ಕರೆಯಲು ಯಾರೂ ಇಲ್ಲ. ಕೋವಿಡ್ ವೇಳೆ ಇಬ್ಬರು ಮಕ್ಕಳನ್ನು ಕಳೆದುಕೊಂಡೆ, ಈಗ ಪತ್ನಿಯೂ ಇಲ್ಲ. ಹೇಗೆ ಸಮಾಧಾನ ಮಾಡಿಕೊಳ್ಳಲಿ' ಎಂದು ಕಣ್ಣೀರು ಹಾಕಿದರು.

ಸೇಲಂನ ಮೇಚೇರಿಯ ದಂಪತಿ ಗ್ರಾಮದ ಕೆಲವರೊಂದಿಗೆ ರೈಲಿನಲ್ಲಿ ಬುಧವಾರ ತಿರುಪತಿಗೆ ಬಂದಿದ್ದರು.

'ವೈಕುಂಠ ದ್ವಾರ ದರ್ಶನಕ್ಕಾಗಿ ಟಿಕೆಟ್ ಪಡೆಯುವ ಸಂದರ್ಭದಲ್ಲಿ ನೂಕು ನುಗ್ಗಲಾಗಿ ಕಾಲ್ತುಳಿತ ಸಂಭವಿಸಿತು. ಅಲ್ಲಿ ಸಿಲುಕಿದ ಪತ್ನಿಯ ಸೊಂಟಕ್ಕೆ ಗಾಯವಾಯಿತು. ನಾನು ಅವರನ್ನು ಮೇಲಕ್ಕೆತ್ತಿ ಸುರಕ್ಷಿತ ಪ್ರದೇಶಕ್ಕೆ ತಲುಪಿಸಿದೆ. ಆದರೆ ಪತ್ನಿ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದರು. ಇದೆಲ್ಲ ಸಂಜೆ 7ರಿಂದ 8 ಗಂಟೆಯ ನಡುವೆ ಸಂಭವಿಸಿತು' ಎಂದು ಕೃಷ್ಣನ್ ತಿಳಿಸಿದರು.

ಮೃತದೇಹ ಪಡೆಯಲು ನಿರಾಕರಣೆ: ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಮಲ್ಲಿಕಾ ಅವರು ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿದ್ದಾರೆ ಎಂದು ಉಲ್ಲೇಖಿಸಲಾಗಿತ್ತು. ಇದಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಕೃಷ್ಣನ್ ಅವರು ಪತ್ನಿಯ ಮೃತದೇಹವನ್ನು ಆಸ್ಪತ್ರೆಯಿಂದ ಪಡೆಯಲು ನಿರಾಕರಿಸಿದರು.

'ನನ್ನ ಹೆಂಡತಿ ಆರೋಗ್ಯವಾಗಿದ್ದರು. ನೂಕುನುಗ್ಗಲು, ಕಾಲ್ತುಳಿತದ ವೇಳೆ ಅವರು ಅಸುನೀಗಿದ್ದಾರೆ. ಹೀಗಿರುವಾಗ ಆರೋಗ್ಯ ಸಮಸ್ಯೆಯಿಂದ ಮೃತಪಟ್ಟಿದ್ದಾರೆ ಎಂದರೆ ಹೇಗೆ' ಎಂದು ಕೃಷ್ಣನ್ ಪ್ರಶ್ನಿಸಿದರು.

ಛತ್ತೀಸಗಢ: ಮೂವರು ನಕ್ಸಲರ ಹತ್ಯೆ

ರಾಯಪುರ/ಸುಕ್ಮಾ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳೊಂದಿಗೆ ಗುರುವಾರ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ನಕ್ಸಲರನ್ನು ಹತ್ಯೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿಯೂ ಆಗಿರುವ ಗೃಹ ಸಚಿವ ವಿಜಯ ಶರ್ಮಾ ತಿಳಿಸಿದ್ದಾರೆ.

'ಇದು ನಕ್ಸಲ ನಿಗ್ರಹಕ್ಕಾಗಿ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಗೆ ಸಂದ ಯಶಸ್ಸು' ಎಂದು ಹೇಳಿದ್ದಾರೆ. ಇದರೊಂದಿಗೆ, ಈ ವರ್ಷ ಈವರೆಗೆ ಹತರಾದ ನಕ್ಸಲರ ಸಂಖ್ಯೆ 9ಕ್ಕೆ ಏರಿದಂತಾಗಿದೆ.

'ಹತ್ಯೆ ಮಾಡಲಾಗಿರುವ ನಕ್ಸಲರ ದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಇತರ ನಕ್ಸಲರಿಗಾಗಿ ಶೋಧ ಕಾರ್ಯ ಮುಂದುವರಿದಿದೆ' ಎಂದು ಶರ್ಮಾ ಅವರು ರಾಯಪುರದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಜ.6ರಂದು ಸಂಭವಿಸಿದ ಕಚ್ಚಾ ಬಾಂಬ್ ಸ್ಫೋಟ ಕುರಿತ ಪ್ರಶ್ನೆಗೆ, 'ಈ ಘಟನೆ ನಂತರ, ನಕ್ಸಲರ ವಿರುದ್ಧ ಭದ್ರತಾ ಪಡೆಗಳಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ' ಎಂದು ಉತ್ತರಿಸಿದರು. ಈ ಸ್ಫೋಟದಲ್ಲಿ ಭದ್ರತಾ ಪಡೆಯ 8 ಸಿಬ್ಬಂದಿ ಹಾಗೂ ಅವರು ಪ್ರಯಾಣಿಸುತ್ತಿದ್ದ ವಾಹನದ ಚಾಲಕ ಮೃತಪಟ್ಟಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ–1, ಬಿಬಿಎಂಪಿ ಮುಖ್ಯರಸ್ತೆ, ನರಸಿಂಹ ರಾಜ ಚೌಕ, ಬೆಂಗಳೂರು–560 002

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್ಆರ್(ಜಿ)/2906/2024–25 ನಮೂನೆ-1 ದಿನಾಂಕ: 08.01.2025

ಪ್ರಕಟಣೆ [ಸೆಕ್ಷನ್ 14ಬಿ(4)(i)]

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14–ಬಿ (4) ರ ಅಡಿಯಲ್ಲಿ ನೀಡಲಾದ ಹಕ್ಕನ್ನು ಚಲಾಯಿಸುತ್ತ, ಮುಖ್ಯ ಆಯುಕ್ತರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅವರು, RMP–2015 ರ ಪ್ರಕಾರ ಕೋಗಿಲು ಮುಖ್ಯ ರಸ್ತೆಯಿಂದ ಸಂಪಿಗೆಹಳ್ಳಿ (ಜಕ್ಕೂರು) ಮೂಲಕ ಗಸ್ತಿಕೆಂಪನಹಳ್ಳಿಗೆ 18.0 ಮೀ ಅಗಲದ (0.00 ಚ.ಮೀ ನಿಂದ ಚ.3210.00 ಮೀ) ಹೊಸ ರಸ್ತೆಯನ್ನು ರಚಿಸುವ ಸಲುವಾಗಿ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾದ 'ವಿಸ್ತೀರ್ಣ'ವನ್ನು ಕಡ್ಡಾಯಗೊಳಿಸಿದ್ದಾರೆ. ಸಾರ್ವಜನಿಕ ಉದ್ದೇಶಕ್ಕಾಗಿ ಜಮೀನುಗಳ ಅಗತ್ಯವಿರುವ ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳಿಗೆ ತಮ್ಮ ಹಕ್ಕುಗಳನ್ನು ಸಲ್ಲಿಸಲು (i) ಮಾರಾಟ / ವಿಭಜನೆ / ಇತರ ಹಕ್ಕು ಪತ್ರಗಳು (ii) ನವೀಕೃತ RTC ಯ (iii) ಮ್ಯುಟೇಶನ್ ಪ್ರತಿ (iv) ತೆರಿಗೆ ಪಾವತಿಸಿದ ರಸೀದಿಗಳು (v) ಕೃಷಿಯೇತರ ಉದ್ದೇಶದ ಮೇಲೆ ಪರಿವರ್ತನೆ ಆದೇಶ (vi) ಕಂದಾಯ ಸ್ಕೆಚ್ (vii) ಆಕಾರ್ ಬ್ಯಾಂಡ್ ಇತ್ಯಾದಿ, ಸಂಬಂಧಿತ ದಾಖಲೆಗಳ ನಕಲುಗಳ ಪ್ರತಿಗಳೊಂದಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಸ್ಥಳದಲ್ಲಿ ವೈಯಕ್ತಿಕವಾಗಿ ಕೆಳಗಿನ ವಿಳಾಸದಲ್ಲಿ ಸೂಚಿಸಿದವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂ ಮಾಲೀಕರು ಇರುವ ಸ್ಥಳ / ಆಸಕ್ತ ವ್ಯಕ್ತಿಗಳು ತಮ್ಮ ಹಕ್ಕುಗಳನ್ನು ಸಲ್ಲಿಸಲು ಹಾಜರಾಗಬೇಕಾದ ಸ್ಥಳ	ವಿಭಾಗೀಯ / ಉಪ ವಿಭಾಗೀಯ / ಶಾಖೆ ಕಛೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (LAQ & TDR) ಕೊಠಡಿ ಸಂಖ್ಯೆ: 208, 2ನೇ ಮಹಡಿ, ಆನೆಕ್ಸ್ ಕಟ್ಟಡ–3, ಎನ್.ಆರ್. ಚೌಕ, ಬೆಂಗಳೂರು–560 002.	ಕಾರ್ಯಪಾಲಕ ಅಭಿಯಂತರರು, ರಸ್ತೆಯ ಮೂಲ ಸೌಕರ್ಯ ಯಲಹಂಕ ವಿಭಾಗ, ಬಿಬಿಎಂಪಿ	ಅಧಿಸೂಚನೆಯ ದಿನಾಂಕದಿಂದ 30 ದಿನಗಳು, ಸಮಯ : ಬೆಳಗ್ಗೆ 10.00 ರಿಂದ ಸಂಜೆ : 5.00 ಗಂಟೆಯವರೆಗೆ

ಸ್ವಾಧೀನಪಡಿಸಿಕೊಳ್ಳಬೇಕಾದ ಅನುಸೂಚಿತ ಆಸ್ತಿಗಳ ಭೂಮಾಲೀಕರು / ಆಸಕ್ತ ವ್ಯಕ್ತಿಗಳು ಮುಖ್ಯ ಆಯುಕ್ತರಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರಿಗೆ ಅಭಿವೃದ್ಧಿ ಹಕ್ಕುಗಳ ಮಂಜೂರಾತಿಗೆ ಒಪ್ಪಿಗೆಯನ್ನು ನೀಡಬೇಕು.

ಭೂಮಾಲೀಕರು ವಿತ್ತೀಯ ಪರಿಹಾರದ ಬದಲಿಗೆ ಡಿಆರ್ (ಕಾಲ್ಪನಿಕ ಭೂಮಿ) ಎಂದು ಒಪ್ಪಿಸಿದ ಭೂಮಿಯ ಎರಡು ಪಟ್ಟು ವಿಸ್ತೀರ್ಣವನ್ನು ಪಡೆಯುತ್ತಾರೆ ಮತ್ತು ಎರಡು ಬಾರಿ ಕಟ್ಟಡದ ಪ್ರದೇಶವನ್ನು ಒಪ್ಪಿಸಿದ ಕಟ್ಟಡದ ಪ್ರದೇಶದ ಮೌಲ್ಯದಿಂದ ಭಾಗಿಸಿದ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ ಕಟ್ಟಡವನ್ನು ನಿರ್ಮಿಸಲಾಗಿದೆ. ಕಾಲ್ಪನಿಕ ಭೂಮಿಯನ್ನು ಮೂಲ ಪ್ಲಾಟ್‌ನಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನಗೊಳಿಸುವುದರ ಮೂಲಕ ಮತ್ತು ಪ್ಲಾಟ್ ಸ್ವೀಕರಿಸುವ ಮೂಲಕ ಬಳಸಿಕೊಳ್ಳಬಹುದು. ಕಾಲ್ಪನಿಕ ಭೂಮಿಯ ಎಫ್ಎಆರ್‌ಗೆ ಅರ್ಹವಾಗಿದೆ ಮತ್ತು ಅಭಿವೃದ್ಧಿ ಹಕ್ಕುಗಳ ನಿಯಮಗಳು, 2016 ರ ಪ್ರಯೋಜನದ ನಿಯಮಗಳಲ್ಲಿ ಸೂಚಿಸಲಾದ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಸ್ವೀಕರಿಸುವ ಪ್ಲಾಟ್‌ನಲ್ಲಿ ಹೆಚ್ಚುವರಿ ನಿರ್ಮಿಸಲಾದ ಪ್ರದೇಶವಾಗಿ ಬಳಸಬಹುದು. ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿ ಮತ್ತು ಭೂ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳ ವಿವರಗಳ ಬಗ್ಗೆ ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗುತ್ತದೆ ಮತ್ತು ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರಗಳನ್ನು (ಡಿಆರ್‌ಸಿ) ನೀಡಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರು (LAQ & TDR) ರವರ ಕಛೇರಿಗೆ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ತಿಳಿಸಬೇಕು.

ಶೆಡ್ಯೂಲ್

ಕೋಗಿಲು ಮುಖ್ಯ ರಸ್ತೆಯಿಂದ ಸಂಪಿಗೆಹಳ್ಳಿ (ಜಕ್ಕೂರು) ವರೆಗೆ ಗಸ್ತಿಕೆಂಪನಹಳ್ಳಿ ಮೂಲಕ 18.0 ಮೀ ಅಗಲದ (ಚ.0.00 ಮೀ ನಿಂದ ಚ.321 0.00 ಮೀ) ಹೊಸ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು.

Sl No	Sy No/ Khatha No	Type of Land		Nature of Land			Dimension of the land / plot and extent in sq.m		Boundaries of the land / plot				Building Details			Present activity on Land/Building (Specify Specific activity such as shop, office, factory, apartment individual house etc.,	Market (guidelines) value of the land per Sqm			Name and address of the owner of the plot/land for which DRC is to be issued / already issued.
		Vacant	Built up	Agriculture	Converted Undeveloped	Approved layout / developed land Building Site	Dimension	Extent	East	West	North	South	Extent in Sqm	Type of Construction	Floor area Ratio		Agricultural/B-Khatha	Converted Undeveloped	A Khatha, Developed Site	
Name of the District: **Bengaluru Urban.** Name of the Taluk: **Yelahanka.** Name of the Village: **Kogilu**																				
1	10	Vacant Land			-			571.17	Remaining portion of Sy. No 10/1	Remaining portion of Sy. No 10/1	Kogilu Road	Sy.no 11	-	-	-	-	7,512.00 /-	19,600.00 /-	28,000.00/-	G.Ramamurthy S/o Gundappa and Others (PRR Stage-1 Final Notification Done by BDA)
2	11	Vacant Land			-			1338.89	Remaining portion of Sy. No 11	Remaining portion of Sy. No 11	Sy.no 10/1	Sy.no 12/1	-	-	-	-	7,512.00 /-	19,600.00 /-	28,000.00/-	Anjinappa S/o Bikkalu Thimmaiah and C.Muniyappa S/o Late Chikkanna (PRR Stage-1 Final Notification Done by BDA)
3	12/1	Vacant Land			-			1462.29	Remaining portion of Sy. No 12/1	Remaining portion of Sy. No 12/1	Sy.no 11	Sy.no 12/3	-	-	-	-	7,512.00 /-	19,600.00 /-	28,000.00/-	Ramakka D/o Late Channappa and Others (PRR Stage-1 Final Notification Done by BDA)
4	12/3	Vacant Land			-			918.04	Remaining portion of Sy. No 12/3	Remaining portion of Sy. No 12/3	Sy.no 12/1	Sy.no 12/4	-	-	-	-	7,512.00 /-	19,600.00 /-	28,000.00/-	C.Muniyappa S/o Chikkanna (PRR Stage-1 Final Notification Done by BDA)
5	12/4	Vacant Land			-			705.46	Remaining portion of Sy. No 12/4	Remaining portion of Sy. No 12/4	Sy.no 12/3	Sy.no 20	-	-	-	-	7,512.00 /-	19,600.00 /-	28,000.00/-	Chikkamuniyappa S/o Chikkanna (PRR Stage-1 Final Notification Done by BDA)
6	20	Vacant Land																		
7	20	Vacant Land			-			2185.1	Remaining portion of Sy. No 20	Remaining portion of Sy. No 20	Sy.no 12	Sy.no 19 & 18	-	-	-	-	7,512.00 /-	19,600.00 /-	28,000.00/-	Venugopal Reddy S/o Krishna Reddy and Others
8	20	Vacant Land																		
9	18	Vacant Land			-			67.65	Remaining portion of Sy. No 18	Sy.no 19/4	Sy.no 20	Remaining portion of Sy. No 18	-	-	-	-	7,512.00 /-	19,600.00 /-	28,000.00/-	Omar Farook S/o A Shakoor
10	19/4	Vacant Land			-			166.68	Sy.no 18	Sy.no 19/3	Sy.no 20	Remaining portion of Sy. No 19/4	-	-	-	-	7,512.00 /-	19,600.00 /-	28,000.00/-	R.G Usha S/o Late. R.Gopal
11	19/3	Vacant Land			-			238.95	Sy.no 19/4	Sy.no 19/2	Sy.no 20	Remaining portion of Sy. No 19/3	-	-	-	-	7,512.00 /-	19,600.00 /-	28,000.00/-	R.G Usha S/o Late. R.Gopal
12	19/2	Vacant Land			-			270.6	Sy.no 19/3	Sy.no 19/1	Remaining portion of Sy. No 19/2	Remaining portion of Sy. No 19/2	-	-	-	-	7,512.00 /-	19,600.00 /-	28,000.00/-	R.G Usha S/o Late. R.Gopal
13	19/1	Vacant Land			-			2261.73	Sy.no 19/2	Sy.no 25	Remaining portion of Sy. No 19/1	Remaining portion of Sy. No 19/1	-	-	-	-	7,512.00 /-	19,600.00 /-	28,000.00/-	R.G Usha S/o Late. R.Gopal
14	25	Vacant Land			-			3657.83	Remaining portion of Sy. No 25	Remaining portion of Sy. No 25	Sy.no 19/1	Sy.no 18	-	-	-	-	7,512.00 /-	19,600.00 /-	28,000.00/-	R.Ashwathanarayana S/o Late. R.Ramaswamaiah and Others
15	18	Vacant Land			-			552.1	Remaining portion of Sy. No 18	Remaining portion of Sy. No 18	Sy.no 25	Gasti kempanahalli village boundary	-	-	-	-	7,512.00 /-	19,600.00 /-	28,000.00/-	Omar Farook S/o A Shakoor
Name of the District: **Bengaluru Urban.** Name of the Taluk: **Yelahanka.** Name of the Village: **Gasti kempanahalli**																				
16	3	Vacant Land			-			4416.61	Remaining portion of Sy. No 3	Remaining portion of Sy. No 3	Kogilu village boundary	Sy.no 4	-	-	-	-	3,756.00 /-	8,610.00 /-	12,300.00 /-	B.S Paramesh S/o B.M Siddalingaiah
17	9	Vacant Land			-			631.14	Sy.no 3	Remaining portion of Sy. No 9	Sy.no 3	Sy.no 3	-	-	-	-	3,756.00 /-	8,610.00 /-	12,300.00 /-	Hasaniyamirja S/o Mohamed Mehabub and B.S Paramesh S/o B.M Siddalingaiah
18	8	Vacant Land			-			2634.43	Sy.no 4	Remaining portion of Sy. No 8	Sy.no 3	Sy.no 7 & 5	-	-	-	-	3,756.00 /-	8,610.00 /-	12,300.00 /-	H.Gopal Reddy @ Gopi S/o Late.Hanumanthappa and others (Free of Cost R.D)
19	4	Vacant Land			-			662.59	Remaining portion of Sy. No 4	Sy.no 8	Sy.no 3	Sy.no 5	-	-	-	-	3,756.00 /-	8,610.00 /-	12,300.00 /-	R.Gopal Krishna and Others (Free of Cost R.D)
20	5/5	Vacant Land			-			582.82	Remaining portion of Sy. No 5/5	Sy.no 7 & 8	Sy.no 4	Sy.no 5/6	-	-	-	-	3,756.00 /-	8,610.00 /-	12,300.00 /-	Srinivas Reddy S/o C.Ramaiah Reddy (Free of Cost R.D)
21	7	Vacant Land			-			1822.83	Sy.no 5	Remaining portion of Sy. No 7	Sy.no 8	Sy.no 5	-	-	-	-	3,756.00 /-	8,610.00 /-	12,300.00 /-	Omar Farook S/o A Shakoor and Y.N Krishna Kumar (Free of Cost R.D)
22	5/6	Vacant Land			-			225.47	Remaining portion of Sy. No 5/6	Sy.no 7	Sy.no 5/5	Sy.no 5/3	-	-	-	-	3,756.00 /-	8,610.00 /-	12,300.00 /-	Suguna W/o Srinivasa Reddy (Free of Cost R.D)
23	5/3	Vacant Land			-			1191.62	Remaining portion of Sy. No 5/3	Sy.no 7	Sy.no 5/6	Sy.no 5/4	-	-	-	-	3,756.00 /-	8,610.00 /-	12,300.00 /-	D.Ragavendra S/o Doddaramaiah (Free of Cost R.D)
24	5/4	Vacant Land			-			3362.46	Remaining portion of Sy. No 5/4	Sy.no 6	Sy.no 5/3	Agrahara village boundary	-	-	-	-	3,756.00 /-	8,610.00 /-	12,300.00 /-	H.Gopal Reddy @ Gopi S/o Hanumanthappa (Free of Cost R.D)
25	6	Vacant Land			-			249.65	Sy. No 5	Remaining portion of Sy. No 6	Sy.no 7	Agrahara village boundary	-	-	-	-	3,756.00 /-	8,610.00 /-	12,300.00 /-	Sumana Gajlakshmi W/o Y.N Narayanaswamy C.R Shanthamma @ Shanthakumari
Name of the District: **Bengaluru Urban.** Name of the Taluk: **Yelahanka.** Name of the Village: **Agrahara**																				
26	14	Vacant Land			-			3709.96	Remaining portion of Sy. No 14	Remaining portion of Sy. No 14	Gasti kempanahalli village boundary	Sy.no 8	-	-	-	-	5,016.00 /-	23,100.00/-	33,000.00 /-	H.Gopal Reddy @ Gopi S/o Hanumanthappa and Others
27	12	Vacant Land			-			103.12	Sy.no 8	Remaining portion of Sy. No 12	Sy.no 14	Sy.no 8	-	-	-	-	5,016.00 /-	23,100.00/-	33,000.00 /-	Chikkabairappa S/o Munibairappa and Others
28	8	Vacant Land			-			700.33	Remaining portion of Sy. No 8	Remaining portion of Sy. No 8	Sy.no 14	Sy.no 11	-	-	-	-	5,016.00 /-	23,100.00/-	33,000.00 /-	K.Venkatasubbaraju and Others
29	11	Vacant Land			-			730.76	Remaining portion of Sy. No 11	Remaining portion of Sy. No 11	Sy.no 8	Sy no. 12	-	-	-	-	5,016.00 /-	23,100.00/-	33,000.00 /-	R.Krishnamurthy S/o Late Y.Ramakrishana
30	12	Vacant Land			-			628.62	Sy.no 11	Remaining portion of Sy. No 12	Sy.no 11	Halla	-	-	-	-	5,016.00 /-	23,100.00/-	33,000.00 /-	Narayanappa S/o Late Munishamappa and Others
31	11	Vacant Land			-			275.12	Remaining portion of Sy. No 11	Sy no. 12	Remaining portion of Sy. No 11	Halla	-	-	-	-	5,016.00 /-	23,100.00/-	33,000.00 /-	R.Krishnamurthy S/o Late Y.Ramakrishana

ವಾದ– ಪ್ರತಿವಾದ ಆಲಿಸಲು ಯಾವುದೇ ಅಡ್ಡಿಯಿಲ್ಲ: ನ್ಯಾಯಪೀಠ • ವಿಚಾರಣೆ ಇದೇ 16ಕ್ಕೆ ಮುಂದೂಡಿಕೆ

ಪ್ರಜ್ವಲ್ ಪ್ರಕರಣ: ದೋಷಾರೋಪ ನಿಗದಿಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತ್ಯಾಚಾರ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಕ್ರಿಮಿನಲ್ ಪ್ರಕರಣಗಳಲ್ಲಿ ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯವು ದೋಷಾರೋಪ ನಿಗದಿಗೆ ಮುನ್ನ ವಾದ-ಪ್ರತಿವಾದವನ್ನು ಆಲಿಸಬಹುದು. ಆದರೆ, ಆರೋಪ ನಿಗದಿ ಮಾಡಬಾರದು’ ಎಂದು ಹೈಕೋರ್ಟ್ ಆದೇಶಿಸಿದೆ.

‘ನನ್ನ ಕಾರು ಚಾಲಕನ ಸ್ಯಾಮ್‌ಸಂಗ್ ಫೋನ್‌ನಿಂದ ಪಡೆದುಕೊಂಡಿರುವ ಫೋಟೊಗಳು ಮತ್ತು ಎಲ್ಲಾ ವಿಡಿಯೊಗಳನ್ನು ನನಗೆ ಒದಗಿಸುವಂತೆ ಪ್ರಾಸಿಕ್ಯೂಷನ್‌ಗೆ ನಿರ್ದೇಶಿಸಬೇಕು’ ಎಂದು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಜ್ವಲ್ ಪರ ವಕೀಲ ಜಿ.ಅರುಣ್, ‘ವಿಚಾರಣಾ ನ್ಯಾಯಾಲಯದಲ್ಲಿ ನಮ್ಮ ಅರ್ಜಿದಾರ-ರನ್ನು ಕಾನೂನುಬದ್ಧವಾಗಿ ಸಮರ್ಥಿಸಿಕೊಳ್ಳುವ ಭಾಗವಾಗಿ ಈ ಅರ್ಜಿ ಸಲ್ಲಿಸಲಾಗಿದೆ. ಈ ನಿಟ್ಟಿನಲ್ಲಿ ಪ್ರಜ್ವಲ್ ಅವರ ಕಾರು ಚಾಲಕನಿಂದ ಪೊಲೀಸರು ಜಪ್ತಿ ಮಾಡಿರುವ ಸ್ಯಾಮ್‌ಸಂಗ್ ಮೊಬೈಲ್‌ನಿಂದ ಪಡೆದುಕೊಂಡಿರುವ ಎಲ್ಲಾ ಫೋಟೊ ಮತ್ತು ವಿಡಿಯೊಗಳನ್ನು ನಮಗೆ ಒದಗಿಸಬೇಕು’ ಎಂದು ಕೋರಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, ‘ಕಾರು ಚಾಲಕನ ಮೊಬೈಲ್ ಫೋನ್‌ನಿಂದ ಪಡೆದುಕೊಂಡಿರುವ ಎಲ್ಲಾ 2 ಸಾವಿರ ವಿಡಿಯೊಗಳು ಮತ್ತು 15 ಸಾವಿರ ಫೋಟೊಗಳನ್ನು ಅವರಿಗೆ ಒದಗಿಸಲಾಗದು. ಏಕೆಂದರೆ ಇದರಲ್ಲಿರುವ ಹಲವು ಮಹಿಳೆಯರ ಗುರುತು ಬಹಿರಂಗವಾಗುವುದಲ್ಲದೆ ಅವರ ಖಾಸಗಿತನಕ್ಕೆ ಸಮಸ್ಯೆ ಉಂಟು ಮಾಡುತ್ತದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಪ್ರಕರಣಕ್ಕೆ ಸಂಬಂಧಿಸಿದ ಡಿಜಿಟಲ್ ಸಾಕ್ಷ್ಯವನ್ನು ಪ್ರಜ್ವಲ್ ಅವರಿಗೆ ಈಗಾಗಲೇ ಪೆನ್ ಡ್ರೈವ್ ಮೂಲಕ ಒದಗಿಸಲಾಗಿದೆ. ಅಷ್ಟಕ್ಕೂ, ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ವಿಳಂಬಗೊಳಿಸುವ ಉದ್ದೇಶದಿಂದ ಪ್ರಜ್ವಲ್ ಈ ಅರ್ಜಿ ಸಲ್ಲಿಸಿದ್ದಾರೆ’ ಎಂದು ದೂರಿದರು.

ಇದಕ್ಕೆ ಪ್ರಜ್ವಲ್ ಪರ ವಕೀಲರನ್ನು ಉದ್ದೇಶಿಸಿದ ನ್ಯಾಯಪೀಠ, ‘ದೂರುದಾರರನ್ನು ಹೊರತುಪಡಿಸಿ ಉಳಿದ ಸಂತ್ರಸ್ತರ ಗುರುತು ಬಹಿರಂಗವಾಗುವುದಕ್ಕೆ ನ್ಯಾಯಾಲಯ ಅವಕಾಶ ನೀಡುವುದಿಲ್ಲ. ನೀವು ಕೇಳುತ್ತಿರುವ ದಾಖಲೆ ಸಾವಿರಾರು ಪುಟಗಳಿವೆ ಎಂದು ಪ್ರಾಸಿಕ್ಯೂಷನ್ ಹೇಳುತ್ತಿದೆ. ನಿಮಗೆ ಅದರ ಅವಶ್ಯ ಏನಿದೆ’ ಎಂದು ಪ್ರಶ್ನಿಸಿತು.

‘ಸಂತ್ರಸ್ತರ ಗುರುತು ಬಹಿರಂಗ-ವಾಗುವುದಕ್ಕೆ ಮತ್ತು ಅವರ ಖಾಸಗಿ ಬದುಕಿಗೆ ಎರವಾಗುವ ಯಾವುದೇ ಬೆಳವಣಿಗೆಗೆ ಅವಕಾಶ ನೀಡುವುದಿಲ್ಲ’ ಎಂದ ನ್ಯಾಯಪೀಠ, ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

47 ವರ್ಷದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಸೈಬರ್ ಅಪರಾಧ ವಿಭಾಗದ ಬೆಂಗಳೂರು ಪೊಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ–1860ರ ಕಲಂ 354(ಎ), 354(ಬಿ), 354(ಸಿ), 376(2)(ಎನ್), 376(2)(ಕೆ), 506, 201 ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆ–2000ರ ಕಲಂ 66(ಇ) ಅಡಿಯಲ್ಲಿ ದಾಖಲಿಸಿಕೊಂಡಿ-ರುವ ಕ್ರಿಮಿನಲ್ ಪ್ರಕರಣ ಇದಾಗಿದೆ.

‘ಸರ್ಕಾರಿ ಶಾಲೆಗಳಿಗೂ ಷರತ್ತುಗಳು ಅನ್ವಯ’

ಬೆಂಗಳೂರು: ‘ಅನುದಾನ ರಹಿತ ಶಾಲೆಗಳಿಗೆ ವಿಧಿಸಲಾಗಿರುವ ಕಟ್ಟಡ–ಅಗ್ನಿ ಸುರಕ್ಷತೆ ಸೇರಿದಂತೆ ಹಲವು ಷರತ್ತುಗಳ ಪಾಲನೆ ಹಾಗೂ ಈ ದಿಸೆಯಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಸರ್ಕಾರಿ ಶಾಲೆಗಳೂ ಅಳವಡಿಸಿಕೊಳ್ಳಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

‘ಮಾನ್ಯತೆ ಪಡೆದ ಅನುದಾನರಹಿತ ಶಾಲೆಗಳ ಸಂಘಟನೆ’ (ಅವರ್ಸ್ ಸ್ಕೂಲ್ಸ್) ಕಾರ್ಯದರ್ಶಿ ಎನ್.ಪ್ರಭಾಕರ ಅರಸ್ ಸೇರಿದಂತೆ ಒಟ್ಟು 11 ವಿದ್ಯಾಸಂಸ್ಥೆ ಪ್ರತಿನಿಧಿಗಳು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ನಿಟ್ಟಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ 2022ರ ಜೂನ್ 6ರಂದು ಹೊರಡಿಸಿದ್ದ ಸುತ್ತೋಲೆಯನ್ನು ಎತ್ತಿ ಹಿಡಿದಿದೆ.

‘ಶಾಲಾ ಕಟ್ಟಡ ಸುರಕ್ಷತಾ ನಿಯಮಗಳನ್ನು ಖಾಸಗಿ ಶಾಲೆಗಳಿಗೆ ಮಾತ್ರ ಕಡ್ಡಾಯ ಗೊಳಿಸಲಾಗಿದೆ. ಆದರೆ, ಸರ್ಕಾರಿ ಶಾಲೆಗಳಲ್ಲಿ ಇದನ್ನು ಜಾರಿಗೊಳಿಸು-



ತ್ತಿಲ್ಲ’ ಎಂಬ ಅರ್ಜಿದಾರರ ವಾದವನ್ನು ಮಾನ್ಯ ಮಾಡಿರುವ ನ್ಯಾಯಪೀಠ, ‘ರಾಜ್ಯ ಸರ್ಕಾರ ಖಾಸಗಿ ಶಾಲೆಗಳಿಗೆ ಕೆಲವೊಂದು ನಿಯಮ, ನಿಬಂಧನೆ ಮತ್ತು ಷರತ್ತುಗಳನ್ನು ವಿಧಿಸಿದಾಗ ಅವುಗಳನ್ನು ರಾಜ್ಯ ಸರ್ಕಾರದ ಶಾಲೆಗಳೂ ಪಾಲನೆ ಮಾಡಬೇಕಾ-ಗುತ್ತದೆ’ ಎಂದು ಹೇಳಿದೆ.


‘ಶಾಲಾ ಕಟ್ಟಡ ಸುರಕ್ಷತಾ ನಿಯಮಾವಳಿ, ರಾಷ್ಟ್ರೀಯ ಕಟ್ಟಡ ಕೋಡ್ ಮತ್ತು ಖಾಸಗಿ ಶಾಲೆಗಳಿಗೆ ಅನ್ವಯಿಸುವ ನಿಯಮಗಳು ಸರ್ಕಾರಿ ಶಾಲೆಗಳಿಗೂ ಅನ್ವಯವಾಗುತ್ತವೆ. ಈ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ವಿನಾಯಿತಿ ಇಲ್ಲ’ ಎಂದು ಸ್ಪಷ್ಟಪಡಿರುವ ನ್ಯಾಯಪೀಠ, ‘ಶಿಕ್ಷಣ ಇಲಾಖೆ ಕಾರ್ಯದರ್ಶಿ ಈ ಸಂಬಂಧ ವಿಸ್ತೃತ ಕ್ರಿಯಾ ಯೋಜನೆ ರೂಪಿಸಬೇಕು ಮತ್ತು ಖಾಸಗಿ ಶಾಲೆಗಳಿಗೆ ಅನ್ವಯವಾಗುವ ನಿಯಮಗಳನ್ನು ಸರ್ಕಾರಿ ಶಾಲೆಗಳಲ್ಲಿ ಹೇಗೆ ಪಾಲನೆ ಮಾಡಲಾಗುತ್ತದೆ ಎನ್ನುವ ಬಗ್ಗೆ ಯೋಜನೆಯೊಂದನ್ನು ಸಲ್ಲಿಸಬೇಕು’ ಎಂದು ನಿರ್ದೇಶಿಸಿದೆ.

ಪೋರ್ಟಲ್: ‘ಖಾಸಗಿ ಸೇರಿದಂತೆ ಎಲ್ಲಾ ಶಾಲೆಗಳು ಈ ಕಟ್ಟಡ ಸುರಕ್ಷತಾ ನಿಯಮಗಳ ಪಾಲನೆ ಬಗೆಗಿನ ವಿವರಗಳನ್ನು ಅಪ್‌ಲೋಡ್ ಮಾಡಲು ಇಲಾಖೆ ಒಂದು ಪೋರ್ಟಲ್ ಅಭಿವೃದ್ಧಿಪಡಿಸಬೇಕು. ಈ ಪೋರ್ಟಲ್‌ನಲ್ಲಿ ಎಲ್ಲಾ ಶಾಲೆಗಳು ನಿಯಮಗಳ ಪಾಲನೆ ಬಗೆಗಿನ ಮಾಹಿತಿಯನ್ನು ಅಪ್‌ಲೋಡ್ ಮಾಡಬೇಕು ಮತ್ತು ಈ ಕುರಿತು ಶಿಕ್ಷಣ ಇಲಾಖೆ ಆರು ವಾರಗಳಲ್ಲಿ ನ್ಯಾಯಾಲಯಕ್ಕೆ ಕ್ರಿಯಾ ಯೋಜನೆ ಸಲ್ಲಿಸಬೇಕು’ ಎಂದು ಆದೇಶಿಸಿದೆ.

ಕಾಲಾವಕಾಶ: ‘ಖಾಸಗಿ ಶಾಲೆಗಳು ಇಷ್ಟು ವರ್ಷದಿಂದ ಶಿಕ್ಷಣ ಸೇವೆ ಒದಗಿಸಿವೆ. ಅವುಗಳ ಮೇಲೆ ಏಕಾಏಕಿ ಒತ್ತಡ ಹೇರಲಾಗದು. ಇಲಾಖೆ ಒಂದಷ್ಟು ಸಮಯಾವಕಾಶ ನೀಡಬೇಕಾಗುತ್ತದೆ. ಹಾಗಾಗಿ ಕಟ್ಟಡ ನಿಯಮ, ನಿಬಂಧನೆಗಳನ್ನು ಪಾಲನೆ ಮಾಡಲು ಶಾಲೆಗಳಿಗೆ ಮುಂದಿನ ಶೈಕ್ಷಣಿಕ ವರ್ಷ ಆರಂಭವಾಗುವ ತನಕ ಕಾಲಾವಕಾಶ ನೀಡಲಾಗಿದೆ’ ಎಂದು ನ್ಯಾಯಪೀಠ ತಿಳಿಸಿದೆ.

‘ಖಾಸಗಿ ಶಾಲೆಗಳು ಎಲ್ಲಾ ಷರತ್ತುಗಳನ್ನು ಪಾಲನೆ ಮಾಡುತ್ತಿವೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಲು ಶಿಕ್ಷಣ ಇಲಾಖೆ ಯಾವುದೇ ಕಾರ್ಯವಿಧಾನ ಹೊಂದಿಲ್ಲ’ ಎಂಬ ಅಂಶವನ್ನು ಪ್ರಸ್ತಾಪಿಸಿರುವ ನ್ಯಾಯಪೀಠ, ‘ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಕಲಂ 36ರಡಿ ಶಾಲೆಗಳಿಗೆ ತಾತ್ಕಾಲಿಕ ಮಾನ್ಯತೆ ನೀಡಲಾಗಿದೆ. ಹಾಗಾಗಿ, ಒಂದು ವರ್ಷದೊಳಗೆ ನಿಯಮದಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಅಗತ್ಯಗಳನ್ನು ಪೂರೈಸಲೇಬೇಕು’ ಎಂದು ತಾಕೀತು ಮಾಡಿದೆ.

ನ್ಯಾಯಮೂರ್ತಿ ಹೇಳಿಕೆ ವಿರುದ್ಧ ರಾಷ್ಟ್ರಪತಿಗೆ ದೂರು: ಕೆ.ಅನ್ನದಾನಿ



ಕೆ.ಅನ್ನದಾನಿ

ಮಂಡ್ಯ: ‘ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಮಂತ್ರಿಯಾಗಲಿ ಎಂದು ದೇವರಿಗೆ ಹರಕೆ ಹೊತ್ತಿರುವುದಾಗಿ ಹೇಳಿರುವ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಎಸ್. ಶಿವಶಂಕರೇಗೌಡ ಅವರನ್ನು ನ್ಯಾಯಮೂರ್ತಿ ಹುದ್ದೆಯಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿ ರಾಷ್ಟ್ರಪತಿ, ರಾಜ್ಯಪಾಲ ಮತ್ತು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆಯುತ್ತೇವೆ’ ಎಂದು ಮಾಜಿ ಶಾಸಕ ಕೆ. ಅನ್ನದಾನಿ ಹೇಳಿದರು.

‘ನ್ಯಾಯಮೂರ್ತಿಯಾದವರು ಶಾಸಕರೊಬ್ಬರ ಪರ ವಕಾಲತ್ತು ವಹಿಸುವುದು ಸರಿಯೇ’ ಎಂದು ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಆಕ್ಷೇಪಿಸಿದರು.

‘ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆಂದು ಆರೋಪಿಸಿ ಕೇಂದ್ರ ಗೃಹಸಚಿವ ಅಮಿತ್ ಶಾ ವಿರುದ್ಧ ದಲಿತ ಸಮುದಾಯದವರನ್ನುಎತ್ತಿಕಟ್ಟಿ ರಾಜ್ಯ ಸರ್ಕಾರವೇ ರಾಜ್ಯದ ಹಲವೆಡೆ ಬಂದ್ ಮಾಡಿಸುತ್ತಿದೆ. ಆದರೆ, ರಾಜ್ಯದಲ್ಲಿರುವುದು ಅಂಬೇಡ್ಕರ್ ಸಿದ್ಧಾಂತವಲ್ಲ, ಸಿದ್ದರಾಮಯ್ಯ ಸಿದ್ಧಾಂತ ಎಂದಿರುವ ನರೇಂದ್ರಸ್ವಾಮಿಯವರ ವಿರುದ್ಧ ಏಕೆ ಕ್ರಮ ಕೈಗೊಂಡಿಲ್ಲ? ಇದು ಸಂವಿಧಾನಕ್ಕೆ ಅಪಮಾನವಲ್ಲವೇ’ ಎಂದು ಪ್ರಶ್ನಿಸಿದರು. ‘ಕಿರುಗಾವಲು ಐಶ್ವರ್ಯಾಗೌಡ ಅವರ ವಂಚನೆ ಪ್ರಕರಣ ಹೊಸ ತಿರುವುಗಳನ್ನು ಪಡೆಯುತ್ತಿದೆ. ₹100 ಕೋಟಿಗೂ ಹೆಚ್ಚು ಅವ್ಯವಹಾರ ನಡೆದಿದ್ದು, ಪ್ರಕರಣವನ್ನು ಇಡಿ ಅಥವಾ ಸಿಬಿಐಗೆ ವಹಿಸಬೇಕು. ಪ್ರಕರಣದ ಹಿಂದಿರುವ ಶಾಸಕರ ಹೆಸರು ಬಹಿರಂಗಪಡಿಸಬೇಕು’ ಎಂದು ಒತ್ತಾಯಿಸಿದರು.

ಸುದ್ದಿ 2 ನಿಮಿಷ

ಶಾಸಕಾಂಗ ಸಭೆಯ ಕಾರ್ಯಸೂಚಿ ಗೊತ್ತಿಲ್ಲ: ಪರಮೇಶ್ವರ

ಬೆಂಗಳೂರು: ‘ಪಕ್ಷದಲ್ಲಿ ಯಾವ ಗೊಂದಲವೂ ಇಲ್ಲ. ಎಸ್‌ಸಿ, ಎಸ್‌ಟಿ ಸಮಾವೇಶದ ಕುರಿತು ಚರ್ಚಿಸಲು ಕರೆದಿದ್ದ ಔತಣಕೂಟ ಸಭೆ ಮುಂದೂಡಲು ಅನೇಕ ಕಾರಣಗಳಿವೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಇದೇ 13ರಂದು ನಡೆಯಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಕಾರ್ಯಸೂಚಿ ಏನು ಎಂಬುದು ನನಗೆ ಗೊತ್ತಿಲ್ಲ’ ಎಂದರು. ‘ಪಕ್ಷ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ನನ್ನ ಜೊತೆ ಮಾತನಾಡಿದ್ದಾರೆ. ಸಭೆಯಲ್ಲಿ ಭಾಗವಹಿಸುವು-ದಾಗಿ ಅವರು ತಿಳಿಸಿದ್ದರಿಂದ ಮುಂದೂಡಲಾಗಿದೆ. ರಹಸ್ಯ ಸಭೆ ಏನೂ ಇಲ್ಲ. ನಮ್ಮ ಸಮಸ್ಯೆಗಳನ್ನು ಚರ್ಚಿಸಲು ಒಂದೆಡೆ ಸೇರುತ್ತಿದ್ದೇವೆ. ಸುರ್ಜೇವಾಲಾ ಅವರು ದಿನ ತಿಳಿಸಿದ ನಂತರ ಸಭೆ ಮಾಡುತ್ತೇವೆ’ ಎಂದರು.



‘ನಮ್ಮ ಸಮುದಾಯದ ಸಭೆಯಿಂದ ಯಾರು ಆತಂಕಕ್ಕೆ ಒಳಗಾಗಿದ್ದಾರೆ? ನನಗೆ ಗೊತ್ತಿರುವ ಹಾಗೇ ಯಾವ ಆತಂಕವೂ ಇಲ್ಲ. ಆತಂಕವಿದೆ ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆಯೇ? ಪಕ್ಷದಿಂದ ಹೊರತಾಗಿ ಸಮಾವೇಶ ಮಾಡುತ್ತೇವೆ ಎಂದು ನಾನು ಎಲ್ಲೂ ಹೇಳಿಲ್ಲ’ಎಂದರು.

ಅಹಿಂದ ವರ್ಸಸ್ ಮೇಲ್ಜಾತಿ ತಿಕ್ಕಾಟ ಇಲ್ಲ: ಸುದ್ದಿಗಾರರ ಜೊತೆ ಮಾತನಾಡಿದ ಸಚಿವ ಎಂ.ಬಿ. ಪಾಟೀಲ, ‘ರಾಜ್ಯ ಕಾಂಗ್ರೆಸ್‌ನಲ್ಲಿ ಯಾವ ಸಮಸ್ಯೆಯೂ ಇಲ್ಲ. ಬೆಳಗಾವಿಯ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಕಾರ್ಯಕ್ರಮದ ಯಶಸ್ವಿಗಾಗಿ ಕಾಂಗ್ರೆಸ್ ಶಾಸಕಾಂಗ ಸಭೆ ಕರೆಯಲಾಗಿದೆ ಅಷ್ಟೆ. ಪಕ್ಷದಲ್ಲಿ ಅಹಿಂದ ವರ್ಸಸ್ ಮೇಲ್ಜಾತಿ ತಿಕ್ಕಾಟ ಎಂದೇನೂ ಇಲ್ಲ’ ಎಂದರು.

ಚಿತ್ರೋತ್ಸವಕ್ಕೆ ಕಿಶೋರ್ ರಾಯಭಾರಿ

ಬೆಂಗಳೂರು: 16 ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ರಾಯಭಾರಿಯನ್ನಾಗಿ ನಟ ಕಿಶೋರ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಈ ಕುರಿತು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕಿಶೋರ್ ಅವರು ಕನ್ನಡ, ತಮಿಳು ಸೇರಿ ದಕ್ಷಿಣಭಾರತದ ಎಲ್ಲಾ ಭಾಷೆಗಳ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಈ ಬಾರಿ ಚಿತ್ರೋತ್ಸವ ಮಾರ್ಚ್ 1 ರಿಂದ 8 ರವರೆಗೆ ನಡೆಯಲಿದೆ.

ಶರಣಾದವರ ಪೂರ್ವಾಪರ...

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಶರಣಾಗಿರುವ ಆರು ಜನ ನಕ್ಸಲರಲ್ಲಿ ವನಜಾಕ್ಷಿ ಗ್ರಾಮ ಪಂಚಾಯಿತಿ ಸದಸ್ಯೆಯಾಗಿದ್ದರು. ತಮಿಳುನಾಡಿನ ವಸಂತ ಕೆ. ಬಿಟೆಕ್ ಪದವೀಧರ. ಅವರ ಪೂರ್ವಾಪರ ಇಲ್ಲಿದೆ.

ಮುಂಡಗಾರು ಲತಾ

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಮುಂಡಗಾರು ಲತಾ ಅವರು ತಮ್ಮ–ತಾಯಿಗೆ 12ನೇ ಮಗಳು. 6ನೇ ತರಗತಿ ಓದಿರುವ ಇವರು ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಯಡಿ ಮನೆ ಕಳೆದುಕೊಳ್ಳುವ ಆತಂಕದಲ್ಲಿ ನಕ್ಸಲ್ ಚಳವಳಿಗೆ ಧುಮುಕಿದರು. 2000ನೇ ಇಸವಿಯಲ್ಲಿ 19ನೇ ವಯಸ್ಸಿನವರಾ-ಗಿದ್ದ ಲತಾ, ಬಂದೂಕು ಹಿಡಿದು ಹೋರಾಟಕ್ಕೆ ಧುಮುಕಿದರು.



ಸುಂದರಿ ಕುತ್ಲೂರು

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ಸಮೀಪದ ಕುತ್ಲೂರು ಗ್ರಾಮದ ಆದಿವಾಸಿ ಕುಟುಂಬದಲ್ಲಿ 6ನೇ ಪುತ್ರಿಯಾಗಿ ಜನಿಸಿದರು. 3ನೇ ತರಗತಿ ನಂತರ ಶಾಲೆ ತೊರೆದಿದ್ದರು. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಯಿಂದ ನೆಲೆ ಕಳೆದುಕೊಂಡ ನಂತರ ವ್ಯವಸ್ಥೆಯ ವಿರುದ್ಧ ತೀವ್ರ ಬೇಸರಗೊಂಡು 2004ರಲ್ಲಿ ನಕ್ಸಲ್ ಚಳವಳಿ ಸೇರಿಕೊಂಡರು. ಆಗ ಅವರಿಗೆ 19 ವರ್ಷ ವಯಸ್ಸಾಗಿತ್ತು. ಇವರ ತಮ್ಮ ವಸಂತ ಕೂಡ ನಕ್ಸಲ್‌ನಾಗಿದ್ದ. ಆತ ಪೊಲೀಸ್ ಗುಂಡಿಗೆ ಬಲಿಯಾಗಿದ್ದ.



ಮಾರೆಪ್ಪ ಅರೋಲಿ

ರಾಯಚೂರು ಜಿಲ್ಲೆ ಮಾನ್ವಿ ತಾಲ್ಲೂಕಿನ ಅರೋಲಿ ಗ್ರಾಮದ ಮಾರೆಪ್ಪ ಅಲಿಯಾಸ್ ಜಯಣ್ಣ ದ್ವಿತೀಯ ಬಿ.ಎ ತನಕ ವಿದ್ಯಾಭ್ಯಾಸ ಮಾಡಿದರು. ತಮ್ಮ 24ನೇ ವಯಸ್ಸಿನಲ್ಲಿ ನಕ್ಸಲ್ ಚಳವಳಿ ಕಡೆಗೆ ಆಕರ್ಷಿತರಾದರು. ಕೇರಳ ಮತ್ತು ಕರ್ನಾಟಕದಲ್ಲಿನ ಮಾವೋವಾದಿ ಚಳವಳಿಯಲ್ಲಿ ಗುರುತಿಸಿಕೊಂಡಿದ್ದರು.



ವಂಸತ ಕೆ.

ತಮಿಳುನಾಡು ರಾಜ್ಯದ ವೆಲ್ಲರೂರಿನ ರಾಣಿಪೇಟ್ ಗ್ರಾಮದ ಸೆಲ್ವಿ ಮತ್ತು ಕುಮಾರ್ ಅವರ ಎರಡನೇ ಪುತ್ರ ವಸಂತ ಕೆ. ಅವರು 2010ರಲ್ಲಿ ಬಿಟೆಕ್ ಪದವಿ ಮುಗಿಸಿದರು. ಕೊಯಮತ್ತೂರಿಗೆ ಕೆಲಸ ಹುಡುಕಲು ಹೋದವರು ನಕ್ಸಲ್ ಚಳವಳಿ ಸೇರಿಕೊಂಡರು. ಕೇರಳ ಮತ್ತು ಕರ್ನಾಟಕದ ನಕ್ಸಲ್ ದಳದ ಸದಸ್ಯರಾಗಿದ್ದರು.



ಮುಖ್ಯ ವಾಹಿನಿಗೆ ಬಂದವರು

ಟಿ.ಎನ್.ಜಿಷಾ

ಕೇರಳದ ವಯನಾಡು ಜಿಲ್ಲೆಯ ಮಕ್ಕಲಿಮಲೆ ಗ್ರಾಮದ ಆದಿವಾಸಿ ಕುಟುಂಬದಲ್ಲಿ ಹುಟ್ಟಿದ ಟಿ.ಎನ್. ಜಿಷಾ 8ನೇ ತರಗತಿ ತನಕ ವಿದ್ಯಾಭ್ಯಾಸ ಮಾಡಿದರು. 2018ರಲ್ಲಿ ಕೇರಳದಲ್ಲಿ ಸಶಸ್ತ್ರ ಹೋರಾಟಕ್ಕೆ ಧುಮುಕಿದರು. 2023ರಲ್ಲಿ ತಂಡದ ಸದಸ್ಯರೊಂದಿಗೆ ಕರ್ನಾಟಕಕ್ಕೆ ಬಂದರು. ಶರಣಾದ ನಕ್ಸಲರಲ್ಲಿ ಇವರು ಅತ್ಯಂತ ಚಿಕ್ಕ ವಯಸ್ಸಿನವರು.



‘ವನಜಾಕ್ಷಿಗೆ ಕೃಷಿ ಮಾಡುವಾಸೆ’



ವನಜಾಕ್ಷಿ ಅವರನ್ನು ಬೆಂಗಳೂರಿನಲ್ಲಿ ಶರಣಾಗತಿ ಸಂದರ್ಭದಲ್ಲಿ ಭೇಟಿ ಮಾಡಿದ ಸ್ನೇಹಿತೆ ಯಶೋದಾ ಮತ್ತು ಅವರ ಸಹೋದರ ಉಮೇಶ್

• ರವಿ ಕೆಳಂಗಡಿ

ಕಳಸ: ನಕ್ಸಲ್ ಚಳವಳಿ ತೊರೆದು ಮುಖ್ಯವಾಹಿನಿಗೆ ಬಂದಿರುವ ವನಜಾಕ್ಷಿ (58), ಚಿಕ್ಕಮಗಳೂರು ಜಿಲ್ಲೆ ಕಳಸ ತಾಲ್ಲೂಕಿನ ಬಾಳೆಹೊಳೆ ಸಮೀಪದ ಭದ್ರಾ ಸೈಟ್ ನಿವಾಸಿ. 1985ರಲ್ಲಿ ವಿದ್ಯಾಭ್ಯಾಸ ಅಂತ್ಯ. 1992ರಲ್ಲಿ ಇಡಕಿಣಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ತುಂಡು ಭೂಮಿ ಉಳಿಸಿಕೊಳ್ಳಲು ಸಾಧ್ಯವಾಗದ ತಾಯಿ ಮಾನಸಿಕವಾಗಿ ನೊಂದಿದ್ದರು. ಸಹೋದರ ಆತ್ಮಹತ್ಯೆಗೆ ಶರಣಾಗಿದ್ದರು. ವ್ಯವಸ್ಥೆಯಿಂದ ಬೇಸತ್ತು 2000ನೇ ಇಸವಿಯಲ್ಲಿ ನಕ್ಸಲ್ ಚಳವಳಿ ಸೇರಿದ್ದರು.

‘ತಮ್ಮ ಮೇಲಿನ 15 ಮೊಕದ್ದಮೆಗಳ ವಿಚಾರಣೆ ಬಹುಬೇಗ ಮುಗಿಯಬಹುದು. ಸರ್ಕಾರ ತಿಳಿಸಿರುವಂತೆ ಪುನರ್ವಸತಿ ಪ್ಯಾಕೇಜ್ ಮತ್ತು 2ಎಕರೆ ಭೂಮಿ ಸಿಕ್ಕರೆ ಕೃಷಿ ಮಾಡಿಕೊಂಡು ಕಳಸ ಸಮೀಪವೇ ಇರುವ ಆಸಕ್ತಿಯನ್ನು ವನಜಾಕ್ಷಿ ಹೊಂದಿದ್ದಾರೆ’ ಎಂದು ಬೆಂಗಳೂರಿನಲ್ಲಿ ಶರಣಾಗತಿ ವೇಳೆ ಅವರನ್ನು ಭೇಟಿ ಮಾಡಿದ್ದ ಅವರ ತಮ್ಮ ಉಮೇಶ್ ಹೇಳಿದರು.

‘ನಕ್ಸಲ್ ಚಳವಳಿಯಲ್ಲಿ ಇದ್ದಾಗಲೇ ಮೂಡಿಗೆರೆ ಸಮೀಪದ ಅಂಗಡಿ ಗ್ರಾಮದ ಸುರೇಶ್ ಅವರನ್ನು ವನಜಾಕ್ಷಿ ವಿವಾಹ ಆಗಿದ್ದಾರೆ. ಕಳೆದ ವರ್ಷ ಕೇರಳದಲ್ಲಿ ಆನೆ ದಾಳಿಯಿಂದ ಗಾಯಗೊಂಡಿದ್ದ ನಕ್ಸಲ್ ಸುರೇಶ್ ಅವರನ್ನು ಕೇರಳ ಪೊಲೀಸರು ಬಂಧಿಸಿದ್ದು, ಅವರು ಅಲ್ಲಿಯ ಜೈಲಿನಲ್ಲಿದ್ದಾರೆ. ತನ್ನ ಮತ್ತು ಪತಿಯ ಮೇಲಿನ ಮೊಕದ್ದಮೆಗಳು ಮುಗಿದ ಬಳಿಕ, ಇಬ್ಬರೂ ಜೊತೆಯಲ್ಲಿ ಇರಬೇಕು ಎಂಬುದು ಅವರ ಆಸೆ’ ಎಂದು ಮೂಲಗಳು ತಿಳಿಸಿವೆ.

ಆರು ನಕ್ಸಲರು ಪರಪ್ಪನ ಅಗ್ರಹಾರಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಸ್ತ್ರಾಸ್ತ್ರ ತೊರೆದು ಶರಣಾದ ಆರು ಮಂದಿ ನಕ್ಸಲರನ್ನು ಬಿಗಿ ಭದ್ರತೆ ನಡುವೆ ಗುರುವಾರ ರಾತ್ರಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಪೊಲೀಸರು ಸ್ಥಳಾಂತರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರ ಎದುರು ಬುಧವಾರ ರಾತ್ರಿ ಶರಣಾದ ನಕ್ಸಲರಾದ ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಟಿ.ಎನ್. ಜಿಶಾ, ಕೆ.ವಸಂತ್, ಮಾರೆಪ್ಪ ಅರೋಲಿ ಅವರನ್ನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಡಿವೈಎಸ್‌ಪಿ ಬಾಲಾಜಿ ಸಿಂಗ್ ಅವರ ನೇತೃತ್ವದಲ್ಲಿ ನಗರದ ರಾಷ್ಟ್ರೀಯ ತನಿಖಾ ದಳದ(ಎನ್‌ಐಎ) ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು.

ನ್ಯಾಯಾಲಯವು ಆರು ಮಂದಿಯನ್ನು ಜನವರಿ 30ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಎಲ್ಲರನ್ನೂ ಜೈಲಿಗೆ ಕಳುಹಿಸಲಾಯಿತು. ಇದಕ್ಕೂ ಮೊದಲು ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಆರು ಮಂದಿಯ ಆರೋಗ್ಯ ತಪಾಸಣೆ ನಡೆಸಲಾಯಿತು.

ಮುಖ್ಯಮಂತ್ರಿಯವರ ಗೃಹ ಕಚೇರಿಯಲ್ಲಿ ಶರಣಾದ ನಂತರ ನಕ್ಸಲರನ್ನು ಪೊಲೀಸರು ಬಂಧಿಸಿದ್ದರು. ನಾಲ್ವರು ಮಹಿಳೆಯರನ್ನು ಸಾಂತ್ವನ ಕೇಂದ್ರ ಹಾಗೂ ಇಬ್ಬರು ಪುರುಷರನ್ನು ಆಡುಗೋಡಿಯ ಎಫ್‌ಎಸ್‌ಎಲ್ ತಾಂತ್ರಿಕ ಕಚೇರಿಯಲ್ಲಿ ಬುಧವಾರ ರಾತ್ರಿ ಇರಿಸಿದ್ದರು.

ಪ್ರಾಥಮಿಕ ವಿಚಾರಣೆ: ಗುರುವಾರ ಬೆಳಿಗ್ಗೆ ಆರು ಮಂದಿಯನ್ನೂ ತಾಂತ್ರಿಕ ಕೇಂದ್ರಕ್ಕೆ ಕರೆತಂದ ಪೊಲೀಸರು ಪ್ರಾಥಮಿಕ ವಿಚಾರಣೆ ನಡೆಸಿದರು ಎಂದು ಗೊತ್ತಾಗಿದೆ.

‘ಶರಣಾದವರಿಂದ ನಕ್ಸಲ್ ಚಟುವಟಿಕೆ ನಡೆಸಿದ್ದ ಸ್ಥಳದ ಮಾಹಿತಿ ಪಡೆದುಕೊಳ್ಳಲಾಗಿದೆ. ಅಪರಾಧ ಪ್ರಕರಣಗಳ ಮಾಹಿತಿ ಹಾಗೂ ಶಸ್ತ್ರಾಸ್ತ್ರ ತೊರೆದು ಮುಖ್ಯವಾಹಿನಿಗೆ ಬಂದಿರುವ ಬಗ್ಗೆ ಅಧಿಕೃತವಾಗಿ ಸ್ವಯಂ ಹೇಳಿಕೆಗಳನ್ನು ಪಡೆಯಲಾಗಿದೆ. ಆರೋಪಿಗಳ ವಿರುದ್ಧ ಬಹುತೇಕ ಪ್ರಕರಣಗಳು ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಯಲ್ಲೇ ಇರುವುದರಿಂದ ಅಲ್ಲಿನ ಡಿವೈಎಸ್‌ಪಿ ನೇತೃತ್ವದ ತಂಡ ಹಾಗೂ ನಗರದ ಭಯೋತ್ಪಾದನಾ ನಿಗ್ರಹ ಘಟಕ (ಎಟಿಎಸ್) ವಿಚಾರಣೆ ನಡೆಸಿತು’ ಎಂದು ಮೂಲಗಳು ತಿಳಿಸಿವೆ.

ಆರು ಮಂದಿ ನಕ್ಸಲರ ವಿರುದ್ಧವೂ ‘ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ’(ಯುಎಪಿಎ) ಅಡಿ ಪ್ರಕರಣ ದಾಖಲಾಗಿದೆ. ಹೀಗಾಗಿ, ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಶಸ್ತ್ರಾಸ್ತ್ರ ಬಚ್ಚಿಟ್ಟ ಸ್ಥಳದ ಮಾಹಿತಿ?

‘ಅರಣ್ಯದಲ್ಲಿದ್ದ ವೇಳೆ ಆರು ಮಂದಿ ನಕ್ಸಲರು ಶಸ್ತ್ರಾಸ್ತ್ರ ಹೊಂದಿದ್ದರು ಎಂಬ ಮಾಹಿತಿ ನಕ್ಸಲ್ ನಿಗ್ರಹ ಪಡೆಗೆ ಸಿಕ್ಕಿತ್ತು. ಶರಣಾದ ಬಳಿಕ ಅವರು ಶಸ್ತ್ರಾಸ್ತ್ರವನ್ನು ಒಪ್ಪಿಸಿಲ್ಲ. ಬುಧವಾರ ತಡರಾತ್ರಿ ಹಾಗೂ ಗುರುವಾರ ಬೆಳಿಗ್ಗೆ ಶರಣಾದ ನಕ್ಸಲರಿಂದ ಶಸ್ತ್ರಾಸ್ತ್ರ ಇಟ್ಟಿರುವ ಸ್ಥಳದ ಮಾಹಿತಿ ಪಡೆಯಲಾಗಿದೆ. ಅವರು ಬೇರೆ ಬೇರೆ ಸ್ಥಳಗಳ ಹೆಸರು ಹೇಳಿದ್ದಾರೆ. ಬಾಡಿ ವಾರಂಟ್ ಮೇಲೆ ಮತ್ತೆ ಅವರನ್ನು ವಶಕ್ಕೆ ಪಡೆದುಕೊಂಡು ಆ ಸ್ಥಳಕ್ಕೆ ಕರೆದೊಯ್ದು ಶಸ್ತ್ರಾಸ್ತ್ರ ವಶಕ್ಕೆ ಪಡೆಯಲಾಗುವುದು’ ಎಂದು ಮೂಲಗಳು ತಿಳಿಸಿವೆ.

ಜ.30ರ ಬಳಿಕ ಚಿಕ್ಕಮಗಳೂರು ಹಾಗೂ ಇತರೆ ಪೊಲೀಸ್ ಠಾಣೆಯ ಪೊಲೀಸರು ಬಾಡಿ ವಾರೆಂಟ್ ಮೇಲೆ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಸಾಧ್ಯತೆಯಿದೆ.

‘ತನಿಖೆ ಪೂರ್ಣಗೊಂಡ ಬಳಿಕ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು’ ಎಂದು ಮೂಲಗಳು ತಿಳಿಸಿವೆ.

‘ನಕ್ಸಲರ ಶಸ್ತ್ರಾಸ್ತ್ರ: ಪೊಲೀಸರಿಂದ ತನಿಖೆ’

ಒಂದನೇ ಪುಟದಿಂದ...

‘ಆರು ನಕ್ಸಲರ ಶರಣಾಗತಿಯಿಂದ ರಾಜ್ಯದಲ್ಲಿ ನಕ್ಸಲ್ ಚಟುವಟಿಕೆ ಶೇ 99ರಷ್ಟು ಕೊನೆಯಾಗಿದೆ. ಶರಣಾಗತರಾದ ನಕ್ಸಲರಲ್ಲಿ ತಮಿಳುನಾಡು, ಕೇರಳ ರಾಜ್ಯದವರಿದ್ದು, ಪ್ರಕರಣಗಳಿವೆ. ಆ ರಾಜ್ಯಗಳ ಮುಖ್ಯಮಂತ್ರಿ ಗಳ ಜೊತೆ ನಮ್ಮ ಮುಖ್ಯಮಂತ್ರಿ ಮಾತನಾಡುವುದಾಗಿ ಹೇಳಿದ್ದಾರೆ’ ಎಂದರು.

‘ಒಳ್ಳೆಯ ಸಂದೇಶ ರವಾನೆ’

‘ಆರು ಮಂದಿ ನಕ್ಸಲರು ಶರಣಾಗಿ, ಸಮಾಜದ ಮುಖ್ಯವಾಹಿನಿಗೆ ಹಿಂದಿರುಗಿ ಬಂದಿರುವುದರಿಂದ ಒಳ್ಳೆಯ ಸಂದೇಶ ರವಾನೆ ಆಗಿದೆ’ ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಹೇಳಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಶರಣಾದವರಿಗೆ ಪರಿಹಾರ ಪ್ಯಾಕೇಜ್ ಕೊಡುವುದರಲ್ಲಿ ತಪ್ಪೇನೂ ಇಲ್ಲ. ಬಿಜೆಪಿ ಸರ್ಕಾರ ಇದ್ದರೂ ಇದನ್ನೇ ಮಾಡುತ್ತಿತ್ತು. ಇದು ಕೇಂದ್ರ ಸರ್ಕಾರದ ನೀತಿ ಕೂಡ ಆಗಿದೆ’ ಎಂದರು.

‘ಸಿ.ಎಂ ಕಚೇರಿ ‘ನಗರ ನಕ್ಸಲ’ರ ಪಾಲಿಟ್ ಬ್ಯೂರೋ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಗಾಂಧಿವಾದದಿಂದ ಮಾವೋವಾದಕ್ಕೆ ಹೊರಳಿದೆ ಎಂದು ಬಿಜೆಪಿ ರಾಜ್ಯಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ದೂರಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಫೇಸ್‌ಬುಕ್‌ನಲ್ಲಿ ಸರ್ಕಾರ ನಡೆಯನ್ನು ಟೀಕಿಸಿದರೆ ಪ್ರಕರಣ ದಾಖಲಿಸಿ ಜೈಲಿಗೆ ಕಳಿಸುತ್ತಾರೆ. ಬಂದೂಕು ಹಿಡಿದು ಗುಂಡಿಟ್ಟು ಭಯ ಸೃಷ್ಟಿಸುವವರಿಗೆ ಹೂಗುಚ್ಛ ಕೊಟ್ಟು ಸ್ವಾಗತಿಸಿ ಸಮೋಸಾ ನೀಡುತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ನಗರ ನಕ್ಸಲರ ಪಾಲಿಟ್ ಬ್ಯೂರೊ ಆಗಿ ಬದಲಾಗಿದೆ. ಖುದ್ದು ಸಿದ್ದರಾಮಯ್ಯ ಅವರೇ ನಗರ ನಕ್ಸಲರ ಕೋರ್ ಕಮಿಟಿ ಸದಸ್ಯರಾಗಿ-ದ್ದಾರೆ. ಕಾಂಗ್ರೆಸ್ ತತ್ವ– ಸಿದ್ಧಾಂತವನ್ನು ನಗರ ನಕ್ಸಲರು ಹೈಜಾಕ್ ಮಾಡಿದ್ದಾರೆ’ ಎಂದು ಟೀಕಿಸಿದ್ದಾರೆ.

‘ಅಮಾಯಕರಿಗೆ ಕ್ಷಮಾದಾನ ನೀಡಲೇಬಾರದು ಎಂಬುದು ನಮ್ಮ ವಾದವಲ್ಲ. ಆದರೆ, ಶರಣಾದ ರೀತಿ, ಪ್ಯಾಕೇಜ್ ಘೋಷಣೆ ವಿಧಾನ, ಪ್ರಕರಣ ರದ್ದತಿ ವಿಚಾರದಲ್ಲಿ ಸರ್ಕಾರ ನಡೆದುಕೊಂಡ ರೀತಿಯ ಬಗ್ಗೆ ಆಕ್ಷೇಪವಿದೆ’ ಎಂದಿದ್ದಾರೆ.

‘ಸಿದ್ದರಾಮಯ್ಯ ಅವರ ಕೋರ್ ಕಮಿಟಿ ಸದಸ್ಯರು ಸಾಮಾಜಿಕ ಜಾಲತಾಣದಲ್ಲಿ ಎಷ್ಟೇ ಅರಚಿದರೂ ನಾವು ಹೆದರುವುದಿಲ್ಲ. ಅಷ್ಟಕ್ಕೂ ಬೇಕಾಬಿಟ್ಟಿ ಪ್ಯಾಕೇಜ್ ಘೋಷಿಸುವುದಕ್ಕೆ ರಾಜ್ಯ ಬೊಕ್ಕಸದ ಹಣ ಯಾರದ್ದೋ ಜಮೀನು ನುಂಗಿ– ನೀರು ಕುಡಿದು ಸಂಪಾದಿಸಿದ ಸ್ವಯಾರ್ಜಿತ ಸೈಟಲ್ಲ’ ಎಂದು ಸುನಿಲ್ ಕುಟುಕಿದ್ದಾರೆ.

‘ಈ ಶರಣಾಗತಿ ಪ್ರಕ್ರಿಯೆ ಬಗ್ಗೆ ಸಾಕಷ್ಟು ಅನುಮಾನಗಳಿವೆ. ವಿಕ್ರಮ್‌ಗೌಡ ಎನ್‌ಕೌಂಟರ್ ಬಳಿಕ ನಗರ ನಕ್ಸಲರು ಶರಣಾಗತಿ ಪ್ರಕ್ರಿಯೆ ಬಗ್ಗೆ ನಡೆಸಿದ ಪ್ರಹಸನದಲ್ಲಿ ಮುಖ್ಯಮಂತ್ರಿಯವರ ನಿರ್ದೇಶನದ ಭಾಗವೆಷ್ಟು ಎಂಬುದು ಬಹಿರಂಗ ಆಗಬೇಕು’ ಎಂದೂ ಆಗ್ರಹಿಸಿದ್ದಾರೆ.

‘ಕೋವಿ ಕೊಟ್ಟು ಕಾಡಿಗೆ ಕಳಿಸಿದವರನ್ನು ಪತ್ತೆ ಮಾಡಿ’

ಬೆಂಗಳೂರು: ‘ಆರು ಜನ ನಕ್ಸಲರು ಶರಣಾಗಿರುವುದು ಸ್ವಾಗತಾರ್ಹ. ಆದರೆ, ಅವರನ್ನು ಹೀರೋಗಳಂತೆ ಬಿಂಬಿಸಲಾಗುತ್ತಿದೆ. ಇದರಿಂದ ನಕ್ಸಲರಿಂದ ತೊಂದರೆ ಮತ್ತು ಸಾವು– ನೋವುಗಳಿಗೆ ಒಳಗಾದ ನಾಗರಿಕ ಕುಟುಂಬಗಳಿಗೆ ಸರ್ಕಾರವೇ ಗಾಯದ ಮೇಲೆ ಬರೆ ಎಳೆದಂತಾಗಿದೆ’ ಎಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದ್ದಾರೆ.

‘ಕಾಡಿನ ನಕ್ಸಲರು ಬೆಳೆದಿರುವುದೇ ನಾಡಿನ ನಕ್ಸಲರಿಂದ. ಆದ್ದರಿಂದ ನಕ್ಸಲ್ ಮುಕ್ತ ಕರ್ನಾಟಕ ಮಾಡಬೇಕೆಂದರೆ ನಗರ ನಕ್ಸಲರೂ ಆ ಮಾರ್ಗದಿಂದ ಹೊರ ಬರುವಂತೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ‘ಈ ದೀನ ದಲಿತ, ಬಡ ಯುವಕ– ಯುವತಿಯರನ್ನು ನಕ್ಸಲರನ್ನಾಗಿ ಮಾಡಿ ಕೋವಿ ಕೊಟ್ಟು ಕಾಡಿಗೆ ಕಳಿಸಿದವರು ಯಾರು? ಕಾಡಿನಲ್ಲಿ ಇರುವ ನಕ್ಸಲರಿಗೆ ಹಣ, ಆಯುಧ, ಔಷಧ ಮೊದಲಾದವುಗಳನ್ನು ಒದಗಿಸಿದವರು ಯಾರು? ಇವರಿಗೆ ಯೋಜನೆಗಳನ್ನು ರೂಪಿಸಿಕೊಡುವ ಮಿದುಳುಗಳು ಯಾವುವು ಮತ್ತು ಎಲ್ಲಿವೆ? ಈ ಪ್ರಶ್ನೆಗಳಿಗೆ ಶರಣಾದವರಿಂದ ಸರ್ಕಾರ ಮತ್ತು ಪೊಲೀಸ್ ಇಲಾಖೆ ಮಾಹಿತಿಯನ್ನು ಪಡೆದು ನಾಡಿನಲ್ಲಿ ನಕ್ಸಲ್ ಚಟುವಟಿಕೆ ಬೆಳೆಯಲು ಕಾರಣರಾದವರ ಮೇಲೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

‘ಕಾಂಗ್ರೆಸ್ ಸರ್ಕಾರ ನಕ್ಸಲರಿಗೆ ಶರಣಾಗಿಲ್ಲ ಎನ್ನುವುದು ಸತ್ಯ ಎನ್ನುವುದಾದರೆ ಏಳು–ಎಂಟನೇ ತರಗತಿ ಓದಿದವರನ್ನು ಬ್ರೈನ್ ವಾಶ್ ಮಾಡಿ ಕೈಗೆ ಕೋವಿ ಕೊಟ್ಟು ಕಾಡಿಗೆ ಕಳಿಸಿದವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಕರ್ನಾಟಕ ನಕ್ಸಲ್ ಮುಕ್ತ ಕರ್ನಾಟಕ ಆಗುತ್ತದೆ. ಆ ಧೈರ್ಯವನ್ನು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ತೋರಿಸುತ್ತಾರೆ’ ಎಂದು ಪ್ರಶ್ನಿಸಿದ್ದಾರೆ.



ಸಚಿವ ಸುನಿಲ್ ಕುಮಾರ್

ತಮಿಳುನಾಡಿನ ಪ್ರತ್ಯಂಗಿರಾ ದೇವಿಯ ಸನ್ನಿಧಿಗೆ ಶಿವಕುಮಾರ್

‘ಸರ್ವಶತ್ರು ಸಂಹಾರಿಣಿ’ಗೆ ಡಿಕೆಶಿ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಧಿಕಾರ ಹಂಚಿಕೆಯ ವಿಚಾರ ಮುನ್ನಲೆಗೆ ಬಂದು, ಔತಣಕೂಟ ‘ರಾಜಕೀಯ’ ಸದ್ದು ಮಾಡುತ್ತಿರುವಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ‘ಸರ್ವಶತ್ರು ಸಂಹಾರಿಣಿ’ ಎಂದೇ ಪ್ರಸಿದ್ಧಿ ಪಡೆದಿರುವ ಕುಂಭಕೋಣಂನ ಅಯ್ಯವಾಡಿ ಪ್ರತ್ಯಂಗಿರಾ ದೇವಿಯ ಮೊರೆ ಹೋಗಿರುವುದು ಗಮನಸೆಳೆದಿದೆ.

ರಾಜಕೀಯ ಮಹತ್ವಾಕಾಂಕ್ಷೆ ಉಳ್ಳವರು ಪ್ರತ್ಯಂಗಿರಾ ದೇವಿಯ ಪೂಜೆ ಮಾಡಿಸುವುದು ನಂಬಿಕೆ. ದಕ್ಷಿಣ ಭಾರತದಲ್ಲಿ ಈ ದೇವಿಯ ಆರಾಧನೆಗೆ ಮಹತ್ವ ಇದೆ. ರಾಜಕೀಯ ಮಹತ್ವಾಕಾಂಕ್ಷಿ ಆಗಿರುವ ಶಿವಕುಮಾರ್ ಅವರು ತಮ್ಮ ಪತ್ನಿ ಜೊತೆ ಗುರುವಾರ (ಜ. 9) ಈ ದೇಗುಲಕ್ಕೆ ಭೇಟಿ ನೀಡಿದ್ದಾರೆ.

ಪ್ರತ್ಯಂಗಿರಾ ದೇವಿಗೆ ಸಂಕಲ್ಪ ಸಹಿತವಾಗಿ ವಿಶೇಷ ಪೂಜೆ ಸಲ್ಲಿಸಿದ ಶಿವಕುಮಾರ್ ಅವರಿಗೆ ದೇಗುಲದ ಅರ್ಚಕರು ತಿಲಕವಿಟ್ಟು, ಪ್ರಸಾದ ನೀಡಿದರು.ಮುಖ್ಯಮಂತ್ರಿ ಸ್ಥಾನದ ಮೇಲೆ ಶಿವಕುಮಾರ್ ಕಣ್ಣು ನೆಟ್ಟಿದೆ. ‘ಅಧಿಕಾರ ಹಂಚಿಕೆ’ ಒಪ್ಪಂದಂತೆ ತಮ್ಮ ಹಕ್ಕು ಅನ್ನು ಅವರು ಈಗಾಗಲೇ ಪ್ರತಿ-



ಪ್ರತ್ಯಂಗಿರಾ ದೇವಿಗೆ ಸಂಕಲ್ಪ ಸಹಿತವಾಗಿ ವಿಶೇಷ ಪೂಜೆ ಸಲ್ಲಿಸಿದ ಡಿ.ಕೆ. ಶಿವಕುಮಾರ್ ದಂಪತಿಗೆ ದೇಗುಲದ ಅರ್ಚಕರು ಪ್ರಸಾದ ನೀಡಿದರು

ಪಾದಿಸಿದ್ದಾರೆ. ಈ ಮಧ್ಯೆ, ಸಿದ್ದರಾಮಯ್ಯ ಸಂಪುಟದ ದಲಿತ ಸಚಿವರ ಔತಣಕೂಟ ರಾಜಕೀಯವು ‘ದಲಿತ ಮುಖ್ಯಮಂತ್ರಿ’ ವಿಚಾರವನ್ನು ಮುಂಚೂಣಿಗೆ ತಂದಿದೆ.

ಕುಂಭಕೋಣಂಗೆ ಗುರುವಾರ ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಡಿ.ಕೆ. ಶಿವಕುಮಾರ್ ಅವರನ್ನು ಸ್ಥಳೀಯ ಮೇಯರ್ ಶರವಣನ್, ತಂಜಾವೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಲೋಕನಾಥನ್, ಕಾಂಗ್ರೆಸ್ ಮುಖಂಡರಾದ ಕೃಷ್ಣಸ್ವಾಮಿ, ವೆಂಕಟೇಶ್ ಮತ್ತಿತರರು ಬರಮಾಡಿಕೊಂಡರು.

ತಮಿಳುನಾಡಿನ ಕಾಂಚಿಪುರಂ ವರದಾರಾಜು ಪೆರುಮಾಳ್ ದೇಗುಲಕ್ಕೂ ಡಿ.ಕೆ. ಶಿವಕುಮಾರ್ ಅವರು ಪತ್ನಿ ಜೊತೆ ತೆರಳಿ ಪೂಜೆ ಸಲ್ಲಿಸಿದರು.

‘ಬಿಜೆಪಿಯೇತರ ಸರ್ಕಾರಗಳಿರುವ ರಾಜ್ಯಗಳಿಗೆ ಅನ್ಯಾಯ’

ಕುಂಭಕೋಣಂ: ‘ಬಿಜೆಪಿಯೇತರ ಸರ್ಕಾರಗಳಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರ ಅನುದಾನ ನೀಡದೆ ಅನ್ಯಾಯ ಮಾಡುತ್ತಿದೆ’ ಎಂದು ಆರೋಪಿಸಿದ ಡಿ.ಕೆ. ಶಿವಕುಮಾರ್, ಈ ಕಾರಣಕ್ಕೆ ರಾಜ್ಯಗಳು ‘ನಮ್ಮ ತೆರಿಗೆ ನಮ್ಮ ಹಕ್ಕು’ ಹೋರಾಟ ಮಾಡುತ್ತಿವೆ’ ಎಂದರು.

ಪ್ರತ್ಯಂಗಿರಾ ದೇವಿ ದೇಗುಲಕ್ಕೆ ಭೇಟಿ ನೀಡಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿ ಸರ್ಕಾರ ಇಲ್ಲದ ರಾಜ್ಯಗಳ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿದೆ. ಕೇಂದ್ರ ಸರ್ಕಾರಕ್ಕೆ ನಾವು ನೀಡುವ ತೆರಿಗೆಗೆ ತಕ್ಕನಾಗಿ ನಮಗೆ ಅನುದಾನ ಬರುತ್ತಿಲ್ಲ. ಈ ವಿಚಾರದಲ್ಲಿ ಬಿಜೆಪಿಯೇತರ ಸರ್ಕಾರಗಳಿರುವ ರಾಜ್ಯಗಳು ಒಟ್ಟಿಗೆ ಹೋರಾಟ ಮಾಡಬೇಕಿದೆ’ ಎಂದರು.

ಹಲ್ಲೆ, ನಿಂದನೆ ಪ್ರಕರಣ: ಸಿ.ಟಿ.ರವಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಮಂಡಲದ ಚಳಿಗಾಲದ ಅಧಿವೇಶನದ ವೇಳೆ ಅವಾಚ್ಯ ಶಬ್ದಗಳಿಂದ ನಿಂದನೆ ಹಾಗೂ ಹಲ್ಲೆಗೆ ಯತ್ನ ಪ್ರಕರಣದ ಸಂಬಂಧ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಗುರುವಾರ ಮಧ್ಯಾಹ್ನ ಸಿಐಡಿ ತನಿಖಾಧಿಕಾರಿಗಳ ಎದುರು ವಿಚಾರಣೆಗೆ ಹಾಜರಾದರು.

ತನಿಖಾಧಿಕಾರಿಗಳಾದ ಅಂಜುಮಾಲಾ ನಾಯಕ್ ಹಾಗೂ ಕೇಶವಮೂರ್ತಿ ಅವರ ನೇತೃತ್ವದಲ್ಲಿ ಪ್ರಕರಣದ ತನಿಖೆ ನಡೆಯುತ್ತಿದೆ. ಸಿ.ಟಿ.ರವಿ ಅವರ ಹೇಳಿಕೆಯನ್ನು ತನಿಖಾ ಸಿಬ್ಬಂದಿ ದಾಖಲಿಸಿಕೊಂಡರು.

‘ವಿಧಾನ ಪರಿಷತ್‌ನಲ್ಲಿ ನಡೆದ ಪ್ರತಿಭಟನೆ ವೇಳೆ ಸಿ.ಟಿ.ರವಿ ಅವರು ಅಶ್ಲೀಲ ಪದ ಬಳಸಿ ನಿಂದಿಸಿದ್ದಾರೆ’ ಎಂದು ಆರೋಪಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ದೂರು ನೀಡಿದ್ದರು. ಆ ದೂರು ಆಧರಿಸಿ ಬೆಳಗಾವಿ ಪೊಲೀಸರು ರವಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದರು. ಹೈಕೋರ್ಟ್ ಜಾಮೀನು ಮಂಜೂರು ಮಾಡಿದ ಬಳಿಕ ರವಿ ಬಿಡುಗಡೆ ಆಗಿದ್ದರು.



ಸಿ.ಟಿ.ರವಿ

‘ವಿಧಾನಸಭೆಯ ಮೊಗಸಾಲೆಯಲ್ಲಿ ಸಿ.ಟಿ.ರವಿ ಅವರ ಮೇಲೆ ಹಲ್ಲೆಗೆ ಯತ್ನ ನಡೆದಿತ್ತು’ ಎಂದು ಆರೋಪಿಸಿ ವಿಧಾನ ಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರ ಹಾಗೂ ಡಿ.ಎಸ್.ಅರುಣ್ ಅವರು ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಸಭಾಪತಿ-ಪೊಲೀಸರಿಗೆ ಸೂಚಿಸಿದ್ದರು. ಘಟನೆ ಸಂಬಂಧ ಪ್ರಕರಣ ದಾಖಲಾಗಿತ್ತು. ಎರಡೂ ಪ್ರಕರಣಗಳ ತನಿಖೆಯನ್ನು ಸರ್ಕಾರ ಸಿಐಡಿಗೆ ಹಸ್ತಾಂತರಿಸಿತ್ತು. ಜನವರಿ 3ರಿಂದ ಸಿಐಡಿ ತನಿಖೆ ಆರಂಭಿಸಿದ್ದು, ಕಳೆದ ವಾರ ಸಚಿವೆ ಲಕ್ಷ್ಮೀ ಅವರ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಗಿತ್ತು.

‘ವಿಚಾರಣೆಗೆ ಬರುವಂತೆ ರವಿ ಅವರಿಗೆ ಎರಡು ಬಾರಿ ನೋಟಿಸ್ ಜಾರಿ ಮಾಡಲಾಗಿತ್ತು. ವಿಚಾರಣೆಗೆ ಬರಲು ಸಮಯ ಕೇಳಿದ್ದರು. ಗುರುವಾರ ಒಂದು ತಾಸು ವಿಚಾರಣೆ ನಡೆಸಲಾಯಿತು. ಘಟನೆ ಸಂಬಂಧ ಮಾಹಿತಿ ಪಡೆದುಕೊಂಡು ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಹುಬ್ಬಳ್ಳಿ, ಹೊಸಪೇಟೆ ಪೂರ್ಣ ಬಂದ್

ಅಂಬೇಡ್ಕರ್ ಅವರಿಗೆ ಅವಮಾನ ಆರೋಪ ● ಅಮಿತ್ ಶಾ ವಿರುದ್ಧ ಆಕ್ರೋಶ; ಪ್ರತಿಕೃತಿ ದಹನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಹೊಸಪೇಟೆ: ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಸಚಿವ ಅಮಿತ್ ಶಾ ಅವಹೇಳನಕಾರಿ ಮಾತನಾಡಿದ್ದಾರೆ ಎಂದು ಆರೋಪಿಸಿ ವಿವಿಧ ದಲಿತ ಸಂಘಟನೆಗಳ ಒಕ್ಕೂಟ ಗುರುವಾರ ಕರೆ ನೀಡಿದ್ದ ಬಂದ್‌ಗೆ ಹುಬ್ಬಳ್ಳಿ–ಧಾರವಾಡದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ, ವಿಜಯನಗರ ಜಿಲ್ಲೆ ಹೊಸಪೇಟೆಯಲ್ಲಿ ಸಂವಿಧಾನ ಸಂರಕ್ಷಣಾ ಸಮಿತಿ ಕರೆ ನೀಡಿದ್ದ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಹುಬ್ಬಳ್ಳಿಯ ರಾಣಿ ಚನ್ನಮ್ಮ ವೃತ್ತ ಸೇರಿ ವಿವಿಧೆಡೆ ಪ್ರತಿಭಟನಾಕಾರರು ಪ್ರತಿಭಟನೆ ನಡೆಸಿ, ಅಮಿತ್ ಶಾ ಪ್ರತಿಕೃತಿಯ ಅಣಕು ಅಂತ್ಯಕ್ರಿಯೆ ನಡೆಸಿದರು. ಬಿಆರ್‌ಟಿಎಸ್ ಚಿಗರಿ, ನಗರ ಸಾರಿಗೆ ಮತ್ತು ಖಾಸಗಿ ಬಸ್‌ಗಳ ಸಂಚಾರ ಸ್ಥಗಿತವಾಗಿತ್ತು. ಆಟೋಗಳು ರಸ್ತೆಗೆ ಇಳಿಯಲಿಲ್ಲ. ವ್ಯಾಪಾರಿಗಳು ಸ್ವಯಂ ಪ್ರೇರಿತರಾಗಿ ಅಂಗಡಿ ಮುಂಗಟ್ಟು ಮುಚ್ಚಿ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದರು. ಪ್ರತಿಭಟನಾ ಸಭೆಯಲ್ಲಿ ಶಾಸಕ ಪ್ರಸಾದ ಅಬ್ಬಯ್ಯ, ಸಮತಾ ಸೇನಾ ಕರ್ನಾಟಕ ಸಂಘಟನೆಯ ಅಧ್ಯಕ್ಷ ಗುರುನಾಥ ಉಳ್ಳಿಕಾಶಿ ಮತ್ತು ವಿವಿಧ ಸಂಘಟನೆಗಳ ಪ್ರಮುಖರು ಪಾಲ್ಗೊಂಡಿದ್ದರು.

ಹೊಸಪೇಟೆಯಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡ ಸಾಹಿತಿ ರಹಮತ್ ತರೀಕೆರೆ ಮಾತನಾಡಿ, 'ನಾವೆಲ್ಲ ಘನತೆಯಿಂದ ಬದುಕಲು ದಾರಿ ತೋರಿಸಿದ ಅಂಬೇಡ್ಕರ್ ಅವರಿಗೆ ಅವಮಾನ ಆದಾಗ ನಾವೆಲ್ಲ ಒಟ್ಟಾಗಬೇಕಿದೆ. ತಳವರ್ಗದಲ್ಲಿ ಮಾತ್ರವಲ್ಲ, ಮೇಲ್ವರ್ಗದಲ್ಲಿ ಸಹ ಅಂಬೇಡ್ಕರ್ ಅಭಿಮಾನಿಗಳಿದ್ದಾರೆ, ಅವರನ್ನು ತಲಪುವ ಕೆಲಸ ಮಾಡಬೇಕಿದೆ. ಸಂವಿಧಾನ ಬದಲಿಸುತ್ತೇವೆ ಎನ್ನುವವರನ್ನೇ ನಾವು ಬದಲಿಸಬೇಕಿದೆ' ಎಂದರು.

ಹೊಸಪೇಟೆಯಲ್ಲಿ ಸಂಪೂರ್ಣ ಬಂದ್ ಆಗಿತ್ತು. ಬಹುತೇಕ ಅಂಗಡಿ ಮುಂಗಟ್ಟುಗಳು, ವಾಣಿಜ್ಯ ಮಳಿಗೆಗಳು, ಹೋಟೆಲ್ ಮುಚ್ಚಿದ್ದವು. ಬಸ್, ಆಟೊ, ಟ್ಯಾಕ್ಸಿ ಸಂಚರಿಸಲಿಲ್ಲ. ಮಾರುಕಟ್ಟೆಗಳು, ಪ್ರಮುಖ ಬೀದಿಗಳು ಬಿಕೋ ಎಂದವು. ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿಯಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾದರೆ, ಹರಪನಹಳ್ಳಿ, ಹೂವಿನಹಡಗಲಿ ಮತ್ತು ಕೊಟ್ಟೂರು ತಾಲ್ಲೂಕುಗಳಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

> **ಸಂವಿಧಾನ ವಿರೋಧಿಗಳಿಗೆ ಎಚ್ಚರಿಕೆ ನೀಡಲು ಬಂದ್ ನಡೆಸಲಾಗಿದೆ. ಸಂಸತ್, ವಿಧಾನಸಭೆ ವ್ಯವಸ್ಥೆಯನ್ನು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ನೀಡಿದ್ದಾರೆ**
> **ಗುರುನಾಥ,** ಉಳ್ಳಿಕಾಶಿ ಅಧ್ಯಕ್ಷ, ಸಮತಾ ಸೇನೆ ಕರ್ನಾಟಕ ಸಂಘಟನೆ

> **ಬಿಜೆಪಿಯವರಿಗೆ ಮೋದಿ, ಮೋದಿ ಎನ್ನುವುದು ಫ್ಯಾಷನ್ ಇರಬಹುದು. ನಮಗೆ ಅಂಬೇಡ್ಕರ್ ಎಂದರೆ ಉಸಿರು. ಅವರ ಬಗ್ಗೆ ಯಾರೂ ನಾಲಿಗೆ ಹರಿಬಿಡಬಾರದು**
> **ಪ್ರಸಾದ ಅಬ್ಬಯ್ಯ,** ಶಾಸಕ



ಬೀದರ್ ಬಂದ್ ಅಂಗವಾಗಿ ನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡಿದ್ದ ಜನ ಸಮೂಹ

ಬೀದರ್ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಬೀದರ್: ಕೇಂದ್ರ ಗೃಹಸಚಿವ ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಿ ಬಂಧಿಸಬೇಕು ಎಂದು ಆಗ್ರಹಿಸಿ ಸ್ವಾಭಿಮಾನಿ ಡಾ.ಬಿ.ಆರ್. ಅಂಬೇಡ್ಕರ್ ವಾದಿಗಳ ಹೋರಾಟ ಸಮಿತಿ ಕರೆ ಕೊಟ್ಟಿದ್ದ ಬೀದರ್ ಬಂದ್‌ಗೆ ಗುರುವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಆಸ್ಪತ್ರೆ, ಔಷಧ ಮಳಿಗೆ, ಬ್ಯಾಂಕುಗಳು ಹೊರತುಪಡಿಸಿ ಇತರ ವ್ಯಾಪಾರ ವಹಿವಾಟು ಸ್ಥಗಿತಗೊಂಡಿತ್ತು. ಸಾರಿಗೆ ಸಂಸ್ಥೆಯ ಬಸ್‌ಗಳು, ಖಾಸಗಿ ವಾಹನಗಳು ರಸ್ತೆಗೆ ಇಳಿಯದ ಕಾರಣ ಜನ ಪರದಾಡಿದರು. ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಸಮಿತಿಯ ಕಾರ್ಯಕರ್ತರು ನಗರದ ನೌಬಾದ್ ಸಮೀಪದ ಬಸವೇಶ್ವರ ವೃತ್ತದಲ್ಲಿ ಅಮಿತ್ ಶಾ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಬರೆದ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರಿಗೆ ಸಲ್ಲಿಸಿದರು.

'ಅಮಿತ್ ಶಾ ಅವರು ದೇಶದ ಜನರ ಕ್ಷಮೆಯಾಚಿಸಿ, ರಾಜೀನಾಮೆ ಕೊಡುವವರೆಗೂ ಹೋರಾಟ ನಿಲ್ಲುವುದಿಲ್ಲ. ಬರುವ ದಿನಗಳಲ್ಲಿ ಪಾರ್ಲಿಮೆಂಟ್ ಚಲೋ ಹಮ್ಮಿಕೊಳ್ಳಲಾಗುವುದು' ಎಂದು ಸಮಿತಿಯ ಮುಖಂಡರು ಎಚ್ಚರಿಕೆ ನೀಡಿದರು. ಬಂದ್ ಶಾಂತಿಯುತವಾಗಿತ್ತು.

ಮತಗಟ್ಟೆ ಮಟ್ಟದಲ್ಲಿ ಮನೆ ಮನೆ ಭೇಟಿ ಅಭಿಯಾನ

ಬಿಜೆಪಿಯಿಂದ ಭೀಮ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ– ಮನೆಗಳಿಗೆ ಅಂಬೇಡ್ಕರ್‌ರವರ ವಿಚಾರಧಾರೆ ಮುಟ್ಟಿಸುವುದು, ಪರಿಶಿಷ್ಟ–ಜಾತಿ ಸಮುದಾಯಗಳ ಕುಟುಂಬಗಳನ್ನು ಸೇರಿಸಿ 'ಭೀಮ ಸಂಗಮ' ನಡೆಸುವುದು ಮತ್ತು ಜ.25 ರಂದು ಎಲ್ಲ ಮತಗಟ್ಟೆಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಮತ್ತು ಸಂವಿಧಾನದ ಪ್ರತಿಗೆ ಪುಷ್ಪ ಸಮರ್ಪಿಸಿ ಸಂವಿಧಾನದ ಪೀಠಿಕೆ ಓದುವ ಭೀಮ ಸಮ್ಮೇಳನ ಹಮ್ಮಿಕೊಳ್ಳಲು ಬಿಜೆಪಿ ತೀರ್ಮಾನಿಸಿದೆ.

ಬಿಜೆಪಿ ಕಾರ್ಯಾಲಯದಲ್ಲಿ ಗುರುವಾರ ನಡೆದ 'ಸಂವಿಧಾನ ಸನ್ಮಾನ ದಿನ, ನಮ್ಮ ಸಂವಿಧಾನ–ನಮ್ಮ ಹೆಮ್ಮೆ' ಅಭಿಯಾನ ಕುರಿತ ಪಕ್ಷದ ಶಾಸಕರು, ಸಂಸದರ ಸಮಾಲೋಚನಾ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

'ಜನವರಿ 25 ರವರೆಗೆ ರಾಜ್ಯ ಮಟ್ಟದಿಂದ ಬೂತ್ ಮಟ್ಟದವರೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಭೀಮ ಸಂಗಮ ನಡೆಸಲು ಹೆಚ್ಚಿನ ಒತ್ತು ನೀಡಬೇಕು. ನಾವು ಯಾವಾಗ ಮತ್ತು ಯಾವ ಕಾರಣಕ್ಕೆ ಸಂವಿಧಾನ ತಿದ್ದುಪಡಿ ಮಾಡಿದ್ದೆವು. ಕಾಂಗ್ರೆಸ್ ಯಾವಾಗ ಮತ್ತು ಯಾವ ಕಾರಣಕ್ಕೆ ತಿದ್ದುಪಡಿ ಮಾಡಿತ್ತು ಎಂಬುದನ್ನು ದಾಖಲೆ ಸಮೇತ ವಿವರಿಸಬೇಕು. ಜನವರಿ 25 ರಂದು ಪ್ರತಿ ಮತಗಟ್ಟೆಯಲ್ಲಿ 30 ರಿಂದ 40 ಜನರನ್ನು ಸೇರಿಸಿ ಅಂಬೇಡ್ಕರ್ ಭಾವಚಿತ್ರ ಮತ್ತು ಸಂವಿಧಾನದ ಪ್ರತಿಗೆ ಪುಷ್ಪ ಅರ್ಪಿಸಿ ಸಂವಿಧಾನದ ಪೀಠಿಕೆ ಓದಬೇಕು' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸಲಹೆ ನೀಡಿದರು.

ಪ್ರತಿಯೊಬ್ಬ ಶಾಸಕ, ಮಾಜಿ ಶಾಸಕ, ಸಂಸದ, ಮಾಜಿ ಸಂಸದರು ಸೇರಿ ತಮ್ಮ ಮನೆಗೆ ಕನಿಷ್ಠ 50 ದಲಿತ ಕುಟುಂಬಗಳನ್ನು ಕರೆಸಿ, ಅವರನ್ನು ಗೌರವಿಸಿ, ಸಂವಿಧಾನ ಮತ್ತು ಅಂಬೇಡ್ಕರ್ ಅವರಿಗೆ ಬಿಜೆಪಿ ಸರ್ಕಾರ ಮಾಡಿರುವ ಉತ್ತಮ ಕೆಲಸವನ್ನು ತಿಳಿಸಬೇಕು. ಕಾಂಗ್ರೆಸ್‌ನ ನಯವಂಚಕತನವನ್ನೂ ವಿವರಿಸಬೇಕು ಎಂದು ಅವರು ಹೇಳಿದರು.

ಸಭೆಯ ಕುರಿತು ಮಾಹಿತಿ ನೀಡಿದ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಎನ್. ಮಹೇಶ್, 'ನಮ್ಮ ಅಭಿಯಾನದ ವೇಳೆ ಸಂವಿಧಾನ ಬದಲಿಸಿದ್ದು ಯಾರು? ಸಂವಿಧಾನಕ್ಕೆ ಶಕ್ತಿ ತುಂಬಿದ್ದು ಯಾರು ಎಂಬ ವಿಷಯವನ್ನು ಜನರಿಗೆ ಮನವರಿಕೆ ಮಾಡುತ್ತೇವೆ' ಎಂದು ಹೇಳಿದರು. ಈ ವೇಳೆ, ಕೇಂದ್ರ ಸಚಿವ ವಿ.ಸೋಮಣ್ಣ ಉಪಸ್ಥಿತರಿದ್ದರು.

ಸಭೆಗೆ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ ಹಾಜರಾಗಿರಲಿಲ್ಲ. ಅವರ ಗುಂಪಿನ ಪ್ರತಾಪ್ ಸಿಂಹ, ಬಿ.ಪಿ.ಹರೀಶ್ ಹಾಜರಿದ್ದರು. ಬಸನಗೌಡ ಪಾಟೀಲ ಯತ್ನಾಳ ಬೆಂಗಳೂರಿನಲ್ಲೇ ಇದ್ದರೂ ಪಕ್ಷದ ಕಚೇರಿಯತ್ತ ಸುಳಿಯಲಿಲ್ಲ.



'ಸಂವಿಧಾನ ಸನ್ಮಾನ ದಿನ, ನಮ್ಮ ಸಂವಿಧಾನ– ನಮ್ಮ ಹೆಮ್ಮೆ' ಅಭಿಯಾನ ಕುರಿತ ಸಮಾಲೋಚನಾ ಸಭೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಕ್ಷದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್.ಅಶೋಕ, ಪಕ್ಷದ ಉಪಾಧ್ಯಕ್ಷ ಎನ್. ಮಹೇಶ್, ಸಂಸದ ಬಸವರಾಜ ಬೊಮ್ಮಾಯಿ ಪಾಲ್ಗೊಂಡಿದ್ದರು

ಮಾತುಕತೆ ವಿಫಲ: 'ಆಶಾ' ಮುಷ್ಕರ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಇಲಾಖೆ ಆಯುಕ್ತ ಶಿವಕುಮಾರ್ ಅವರೊಂದಿಗೆ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ (ಎಐಯುಟಿಯುಸಿ) ನಡೆಸಿದ ಮಾತುಕತೆ ವಿಫಲವಾಗಿದ್ದು, ಆಶಾ ಕಾರ್ಯಕರ್ತೆಯರು ನಡೆಸುತ್ತಿರುವ ಮುಷ್ಕರ ಶುಕ್ರವಾರವೂ ಮುಂದುವರಿಯಲಿದೆ.

ಮೂರು ದಿನಗಳಿಂದ ಕೊರೆಯುವ ಚಳಿಯಲ್ಲಿ ರಸ್ತೆಯಲ್ಲೇ ಮಲಗುತ್ತಿರುವುದರಿಂದ ಹಲವರಿಗೆ ಶೀತ, ಜ್ವರ, ಕೆಮ್ಮು ಕಾಣಿಸಿಕೊಂಡಿದೆ.

ಆರೋಗ್ಯ ಸೌಧದಲ್ಲಿ ಗುರುವಾರ ಮಧ್ಯಾಹ್ನ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಸಭೆ ನಡೆಯಿತು. 'ಏಕಕಾಲಕ್ಕೆ ಬೇಡಿಕೆಗಳನ್ನು ಈಡೇರಿಸಲು ಆಗುವುದಿಲ್ಲ. ಸಚಿವರ ಗಮನಕ್ಕೆ ತರಲಾಗುವುದು ಎಂದು ಅಧಿಕಾರಿ ತಿಳಿಸಿದರು. ಸಂಜೆವರೆಗೂ ಪ್ರತಿಕ್ರಿಯೆ ಬಂದಿಲ್ಲ. ಶುಕ್ರವಾರವೂ ಮುಷ್ಕರ ಮುಂದುವರಿಯಲಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಸೋಮಶೇಖರ್ ಯಾದಗಿರಿ ತಿಳಿಸಿದರು.

ಸಭೆಯಲ್ಲಿ ಸಂಘದ ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮಿ, ಉಪಾಧ್ಯಕ್ಷರಾದ ಎಂ.ಉಮಾದೇವಿ ಹಾಗೂ ವಿವಿಧ ಜಿಲ್ಲೆಗಳ ಆಶಾ ಕಾರ್ಯಕರ್ತೆಯರಾದ ಕೌಸಲ್ಯಾ, ಗೀತಾ, ಕವಿತಾ ಮತ್ತು ನಾಗಲಕ್ಷ್ಮಿ ಪಾಲ್ಗೊಂಡಿದ್ದರು.

ಮುಷ್ಕರನಿರತ ಸ್ಥಳದಲ್ಲಿ ಅಸ್ವಸ್ಥಗೊಂಡ ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಆಶಾ ಕಾರ್ಯಕರ್ತೆ ಪ್ರಭಾವತಿ ಅವರನ್ನು ಆಂಬುಲೆನ್ಸ್‌ನಲ್ಲಿ ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. 'ರಕ್ತದೊತ್ತಡ ಕಡಿಮೆಯಾದ ಕಾರಣ ಕುಸಿದು ಬಿದ್ದಿದ್ದಾರೆ. ಚಿಕಿತ್ಸೆ ನೀಡಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ವೈದ್ಯರು ತಿಳಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು ಕೊರೆಯುವ ಚಳಿ, ಸುರಿಯುವ ಮಂಜು ಲೆಕ್ಕಿಸದೇ ಹೋರಾಟ ಮುಂದುವರೆಸಿದ್ದು, ರಸ್ತೆಯಲ್ಲೇ ಮಲಗುತ್ತಿದ್ದಾರೆ.

ಪ್ರತಿಭಟನೆ ಸ್ಥಳದಲ್ಲಿಯೇ ತಾತ್ಕಾಲಿಕ ಟೆಂಟ್ ನಿರ್ಮಿಸಿದ್ದು, ಮೆಡಿಕಲ್ ಸರ್ವೀಸ್ ಸೆಂಟರ್ ಸಂಘಟನೆಯ ವೈದ್ಯರಾದ ಟಿ.ಎಸ್.ಸತೀಶ್ ಕುಮಾರ್, ಅಪೂರ್ವಾ, ಸೀಮಾ, ರಾಜಶೇಖರ್, ಗಂಗಾಧರ್ ಚಿಕಿತ್ಸೆ ನೀಡುತ್ತಿದ್ದಾರೆ.

ಮುಷ್ಕರದಲ್ಲಿ ಪಾಲ್ಗೊಂಡಿರುವ ಮಹಿಳೆಯರಿಗೆ ಉಪಾಹಾರ, ಊಟದ ವ್ಯವಸ್ಥೆ ಮಾಡಲಾಗಿದೆ.



ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮುಷ್ಕರ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಲಗಿದರು ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸಿ.ಎಂ ಮಧ್ಯ ಪ್ರವೇಶಿಸಲಿ: ನಾಗಲಕ್ಷ್ಮೀ

ಆಶಾ ಕಾರ್ಯಕರ್ತರ ಪ್ರತಿಭಟನೆ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಧ್ಯ ಪ್ರವೇಶಿಸಬೇಕು ಎಂದು ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಕಾರ್ಯದರ್ಶಿ ಡಿ.ನಾಗಲಕ್ಷ್ಮೀ ಆಗ್ರಹಿಸಿದರು.

ತಿಂಗಳಿಗೆ ₹15 ಸಾವಿರ ಗೌರವಧನ ನೀಡುವುದು ಸೇರಿ ಹಲವು ಬೇಡಿಕೆ ಈಡೇರಿಸಲು ಒತ್ತಾಯಿಸಲಾಗಿದೆ. ಹಾಲಿ ನೀಡುತ್ತಿರುವ ಗೌರವಧನ ಮತ್ತು ಪ್ರೋತ್ಸಾಹ ಧನ ಸೇರಿಸಿ ತಿಂಗಳಿಗೆ ₹9,500 ಮುಂಗಡ ನೀಡಲಾಗುವುದು ಎಂಬ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಪ್ರಸ್ತಾವವನ್ನು ತಿರಸ್ಕರಿಸಲಾಗಿದೆ. ಸರ್ಕಾರ ಕೂಡಲೇ ₹12 ಸಾವಿರ ಗೌರವಧನ ನಿಗದಿಪಡಿಸಿ, ಹಂತ ಹಂತವಾಗಿ ₹3,000 ಹೆಚ್ಚಿಸಲಿ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮುಷ್ಕರದಿಂದ ಗರ್ಭಿಣಿಯರು, ಬಾಣಂತಿಯರಿಗೆ ತೊಂದರೆ ಆಗುತ್ತಿದೆ. ಇದಕ್ಕೆ ಇಲಾಖೆಯೇ ಹೊಣೆ. ಕೆಲಸಕ್ಕೆ ತಕ್ಕಂತೆ ವೇತನ ಸಿಗುತ್ತಿಲ್ಲ. ತಾಂತ್ರಿಕ ಸಮಸ್ಯೆಯಿಂದ ಆಶಾ ಪೋರ್ಟಲ್ ಕಾರ್ಯನಿರ್ವಹಿಸುತ್ತಿಲ್ಲ. ವೈದ್ಯಕೀಯ ಪ್ರಮಾಣಪತ್ರ ಹಾಜರುಪಡಿಸಿದರೂ ಅನಾರೋಗ್ಯ ಪೀಡಿತರಿಗೆ ರಜೆ ದೊರೆಯುತ್ತಿಲ್ಲ. ಇಎಸ್‌ಐ ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಔಷಧ ಗುಣಮಟ್ಟ ಸಚಿವ ನಡ್ಡಾಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರೀಯ ಮತ್ತು ರಾಜ್ಯ ಔಷಧ ಪ್ರಯೋಗಾಲಯಗಳ ಪರೀಕ್ಷಾ ವರದಿಗಳನ್ನು ಕೇಂದ್ರೀಕೃತ ದತ್ತಾಂಶ ವ್ಯವಸ್ಥೆಯಡಿ ತರುವುದು ಸೇರಿ ವಿವಿಧ ಮುನ್ನೆಚ್ಚರಿಕಾ ಕ್ರಮಗಳ ಮೂಲಕ ಔಷಧ ಗುಣಮಟ್ಟ ಪರಿಶೀಲನೆ ವ್ಯವಸ್ಥೆಯನ್ನು ಸುಧಾರಿಸಬೇಕು' ಎಂದು ಕೇಂದ್ರ ಸರ್ಕಾರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರಿಗೆ ಪತ್ರ ಬರೆದಿದ್ದಾರೆ. 'ಕಳೆದ ಕೆಲ ವರ್ಷಗಳಿಂದ ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳನ್ನು ಬಳಸಿದ ಪ್ರಕರಣಗಳು ದೇಶದಾದ್ಯಂತ ಹೆಚ್ಚುತ್ತಿವೆ. ಇತ್ತೀಚೆಗೆ ಬಳ್ಳಾರಿಯಲ್ಲಿ ಮೃತಪಟ್ಟ ಐವರು ಬಾಣಂತಿಯರಿಗೆ ನೀಡಿದ್ದ ಐವಿ ದ್ರಾವಣವು ಪ್ರಮಾಣಿತ ಗುಣಮಟ್ಟ ಹೊಂದಿರಲಿಲ್ಲ ಎಂಬುದು ದೃಢಪಟ್ಟಿದೆ. ಈ ದ್ರಾವಣವನ್ನು ಪಶ್ಚಿಮ ಬಂಗಾಳದ ಕಂಪನಿ ತಯಾಸಿದೆ. ಔಷಧಗಳು ಮತ್ತು ಕಾಂತಿವರ್ಧಕ ಕಾಯ್ದೆ 1940ರ ಪ್ರಕಾರ, ಕಂಪನಿಗಳು ಔಷಧಗಳನ್ನು ದೇಶದಾದ್ಯಂತ ಮಾರಾಟ ಮಾಡಬಹುದಾಗಿದೆ. ಆದರೆ, ಔಷಧಕ್ಕೆ ಸಂಬಂಧಿಸಿದಂತೆ ಪರವಾನಗಿ ಮತ್ತು ಪರಿಶೀಲನೆ ನಡೆಸುವ ಅಧಿಕಾರವನ್ನು ಉತ್ಪಾದನಾ ಘಟಕ ಹೊಂದಿರುವ ರಾಜ್ಯದ ಔಷಧ ನಿಯಂತ್ರಕರು ಮಾತ್ರ ಹೊಂದಿರುತ್ತಾರೆ. ಇದರಿಂದ ಸಮಸ್ಯೆಯಾಗುತ್ತಿದೆ' ಎಂದು ಹೇಳಿದ್ದಾರೆ.

'ರಾಜ್ಯದಲ್ಲಿ ಪ್ರಮಾಣಿತ ಗುಣಮಟ್ಟ ಔಷಧಗಳು ಅನ್ಯ ರಾಜ್ಯದ ತಯಾರಕರು ಉತ್ಪಾದಿಸಿದ್ದಾಗಿವೆ. ಕಾನೂನಿನ ಪ್ರಕಾರ, ಈ ಔಷಧ ಕಂಪನಿಗಳ ತವರು ರಾಜ್ಯಗಳಲ್ಲಿನ ಔಷಧ ನಿಯಂತ್ರಕರು ಮಾತ್ರ ಅವರ ಉತ್ಪಾದನಾ ಪರವಾನಗಿಯನ್ನು ರದ್ದುಗೊಳಿಸಲು ಅಥವಾ ಅಮಾನತುಗೊಳಿಸುವ ಅಧಿಕಾರ ಹೊಂದಿರುತ್ತಾರೆ. ಇದರಿಂದಾಗಿ ಕರ್ನಾಟಕದಂತಹ ರಾಜ್ಯಗಳಿಗೆ ಅವುಗಳ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗುತ್ತಿಲ್ಲ' ಎಂದು ಹೇಳಿದ್ದಾರೆ.



> **ಎರಡು ವರ್ಷಗಳಲ್ಲಿ 894 ಔಷಧಗಳ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅವುಗಳಲ್ಲಿ 601 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿಲ್ಲ ಎನ್ನುವುದು ದೃಢಪಟ್ಟಿದೆ**
> **ದಿನೇಶ್ ಗುಂಡೂರಾವ್,** ಸಚಿವ

ಕೊಡಚಾದ್ರಿ: ₹375 ಕೋಟಿ ನಿರ್ಮಾಣ ವೆಚ್ಚ

ಒಂದನೇ ಪುಟದಿಂದ...

ಜೀವ ವೈವಿಧ್ಯದ ತಾಣದಲ್ಲಿ ಕೈಗೆತ್ತಿಕೊಳ್ಳುವ ಈ ಯೋಜನೆಗೆ ಪರಿಸರವಾದಿಗಳಿಂದ ವಿರೋಧ ವ್ಯಕ್ತವಾಗಿದೆ.

ಈ ಯೋಜನೆಗೆ ನಾಗಪುರದ ಕೆ ಆ್ಯಂಡ್ ಜೆ ಪ್ರಾಜೆಕ್ಟ್ ಲಿಮಿಟೆಡ್ ಅನ್ನು ಕನ್ಸಲ್ಟೆಂಟ್ ಆಗಿ ನೇಮಿಸಿದ್ದು, ಯೋಜನೆಯ ಪೂರ್ವ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಿ ರಾಷ್ಟ್ರೀಯ ಹೆದ್ದಾರಿ ಸರಕು ನಿರ್ವಹಣೆ ಸಂಸ್ಥೆಗೆ (ಎನ್‌ಎಚ್‌ಎಲ್‌ಎಂ) ಸಲ್ಲಿಸಿದೆ. ಅಭಿವೃದ್ಧಿ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾದರಿಯಲ್ಲಿ ಕೈಗೆತ್ತಿಕೊಳ್ಳುವ ಯೋಜನೆಯ ವೆಚ್ಚ ₹309 ಕೋಟಿ ಆಗಲಿದೆ. ವಿನ್ಯಾಸ, ಅಳವಡಿಕೆ ಹಾಗೂ ಗುತ್ತಿಗೆದಾರರ ಲಾಭ ₹42 ಕೋಟಿ ಎಂದು ಅಂದಾಜಿಸಲಾಗಿದೆ. ಸರಕು ಮತ್ತು ಸೇವಾ ತೆರಿಗೆಯು (ಶೇ 18) ₹23.62 ಕೋಟಿ ಆಗಲಿದೆ.28 ಎಕರೆ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಸಂಸ್ಥೆ ಡಿಸೆಂಬರ್ 12ರಂದು ಪ್ರಸ್ತಾವನೆ ಸಲ್ಲಿಸಿದೆ.

ರೋಪ್‌ವೇಯಲ್ಲಿ ಎರಡು ನಿಲ್ದಾಣ ಹಾಗೂ ಒಂಬತ್ತು ಟವರ್‌ಗಳು ಇರಲಿವೆ. ಈಗ ಪ್ರವಾಸಿಗರು ಬೆಟ್ಟ ಹತ್ತಲು ಮೂರು ಗಂಟೆ ಬೇಕಾಗುತ್ತದೆ. ರೋಪ್‌ವೇ ನಿರ್ಮಾಣದ ಬಳಿಕ ಈ ಅವಧಿ 30 ನಿಮಿಷಕ್ಕೆ ಇಳಿಯಲಿದೆ. ಯೋಜನೆಯು ಪರಿಸರ ಸ್ನೇಹಿ. ಕಾಡುಪ್ರಾಣಿಗಳಿಗೂ ತೊಂದರೆ ಆಗುವುದಿಲ್ಲ. ಸ್ಥಳೀಯ ಪ್ರವಾಸೋದ್ಯಮಕ್ಕೆ ಉತ್ತೇಜನ ಸಿಗಲಿದೆ ಎಂದು ಎನ್‌ಎಚ್‌ಎಲ್‌ಎಂ ಯೋಜನೆಯನ್ನು ಸಮರ್ಥಿಸಿಕೊಂಡಿದೆ.

ಮತ್ತೆ ಬಲಪ್ರಯೋಗ ಬೇಡ: 'ದೇಶದ ಒಟ್ಟು ಭೂಪ್ರದೇಶದಲ್ಲಿ ವನ್ಯಜೀವಿ ಪ್ರದೇಶ ಇರುವುದು ಶೇ 4ರಷ್ಟು ಮಾತ್ರ. ಇಲ್ಲಿ ವನ್ಯಜೀವಿ ಸಂರಕ್ಷಣೆಗೆ ಆದ್ಯತೆ ನೀಡಬೇಕೆ ವಿನಃ ಪ್ರವಾಸೋದ್ಯಮಕ್ಕಲ್ಲ. ಪ್ರವಾಸೋದ್ಯಮ ಬೆಳೆಯಬೇಕು ಹಾಗೂ ಉದ್ಯೋಗಾವಕಾಶ ಸಿಗಬೇಕು ಎಂಬುದು ನಿಜ. ಆದರೆ, ಪರಿಸರ ಅಸಮತೋಲನ ಸೃಷ್ಟಿಸುವುದು ಸರಿಯಲ್ಲ. ಈಗಾಗಲೇ ಒತ್ತಡದಲ್ಲಿರುವ ಪಶ್ಚಿಮ ಘಟ್ಟಗಳ ಮೇಲೆ ಪುನಃ ಬಲ ಪ್ರಯೋಗ ಬೇಡ. ಬದಲಿಗೆ ಮಾನವ- ವನ್ಯಜೀವಿ ಸಂಘರ್ಷ ತಡೆಗೆ ದೀರ್ಘಾವಧಿ ಕ್ರಮಗಳಿಗೆ ಸರ್ಕಾರಗಳು ಅನುದಾನ ಒದಗಿಸುವುದು ಒಳಿತು' ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಅಭಿಪ್ರಾಯಪಡುತ್ತಾರೆ.

ಕೊಡಚಾದ್ರಿ	ಪ್ರವಾಸಿಗರ ಸಂಖ್ಯೆ
2015-16	1.05 ಲಕ್ಷ
2019-20	1.82 ಲಕ್ಷ
2023-24	2.8 ಲಕ್ಷ

> **ರೋಪ್‌ವೇ ಯೋಜನೆಯು ಕೊಡಚಾದ್ರಿಗೆ ಪೂರಕವಲ್ಲ. ಪರಿಸರಕ್ಕೆ ಹಾನಿ ಉಂಟು ಮಾಡುವ ಈ ಯೋಜನೆಯನ್ನು ಕೈಬಿಡಬೇಕು**
> **ಈಶವಿಠಲದಾಸ ಸ್ವಾಮೀಜಿ ಕೇಮಾರು**
> ಗೌರವಾಧ್ಯಕ್ಷ, ಕೊಡಚಾದ್ರಿ ಪರಿಸರ ಸಂರಕ್ಷಣಾ ಟ್ರಸ್ಟ್

ರಸ್ತೆ ಅಭಿವೃದ್ಧಿಗೆ ಅನುಮತಿ ನಿರಾಕರಿಸಿದ್ದ ವನ್ಯಜೀವಿ ಮಂಡಳಿ

ಕೊಡಚಾದ್ರಿ ಬೆಟ್ಟಕ್ಕೆ ಸಂಪರ್ಕ ಕಲ್ಪಿಸುವ ಕಡಿದಾದ ರಸ್ತೆ ಅಭಿವೃದ್ಧಿ ಮಾಡುವ ಪ್ರಸ್ತಾವನೆಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಅನುಮತಿ ನಿರಾಕರಿಸಿತ್ತು.

ಮೂಕಾಂಬಿಕಾ ವನ್ಯಜೀವಿಧಾಮದೊಳಗೆ ರಸ್ತೆ ಅಭಿವೃದ್ಧಿ ಮಾಡಲು ರಾಜ್ಯ ಸರ್ಕಾರವು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. 2022ರ ಮೇ ತಿಂಗಳಲ್ಲಿ ಸಭೆ ಸೇರಿದ್ದ ಸ್ಥಾಯಿ ಸಮಿತಿಯು ಈ ಪ್ರಸ್ತಾವನೆಯನ್ನು ತಿರಸ್ಕರಿಸಿತ್ತು. ಈಗಿರುವ ಮಣ್ಣಿನ ರಸ್ತೆಯಲ್ಲಿ ಗುಂಡಿ ಬಿದ್ದಾಗ ಮುಚ್ಚುವ ಕೆಲಸವನ್ನು ಮಾಡಬೇಕು ಎಂದು ಹೇಳಿತ್ತು. ಬೆಟ್ಟಕ್ಕೆ ಸಂಪರ್ಕ ಕಲ್ಪಿಸಲು ರೋಪ್‌ವೇ ನಿರ್ಮಾಣಕ್ಕೆ ಕಾರ್ಯಸಾಧ್ಯತಾ ಅಧ್ಯಯನ ನಡೆಸುವ ಬಗ್ಗೆ ರಾಜ್ಯ ಸರ್ಕಾರ ಪರಿಶೀಲನೆ ನಡೆಸಬೇಕು ಎಂದು ಸ್ಥಾಯಿ ಸಮಿತಿ ಸಲಹೆ ನೀಡಿತ್ತು.

ಲಂಚ: ಕೆಎಟಿ ಅಧಿಕಾರಿ ಬಂಧನ

ಬೆಂಗಳೂರು: ಲೋಕಾಯುಕ್ತ ಪೊಲೀಸರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ (ಕೆಎಟಿ) ಅಧಿಕಾರಿಯನ್ನು ಲಂಚ ಸಮೇತ ಬಂಧಿಸಿದ್ದಾರೆ.

ಹುಬ್ಬಳ್ಳಿಯ ಸಹಕಾರ ಸಂಘಗಳ ಹೆಚ್ಚುವರಿ ರೆಜಿಸ್ಟ್ರಾರ್ ನ್ಯಾಯಾಲಯವು ನೀಡಿದ್ದ ಆದೇಶಕ್ಕೆ ತಡೆಯಾಜ್ಞೆ ತೆಗೆದುಕೊಳ್ಳುವ ಸಂಬಂಧ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಬಸವರಾಜು ನಾಡಿಕೇಶ್ವರ ಮಠ ಅವರು ಕೆಎಟಿ ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಕಚೇರಿ ಅಧೀಕ್ಷಕ ಸುರೇಶ್ ಅವರನ್ನು ಭೇಟಿ ಮಾಡಿದ್ದರು.

ತಡೆಯಾಜ್ಞೆ ನೀಡಲು ಸುರೇಶ್ ಅವರು ₹60,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಬಸವರಾಜು ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ನಗರಸಭೆ ಬಿಲ್ ಕಲೆಕ್ಟರ್ ಆತ್ಮಹತ್ಯೆ

ಹೊಸಪೇಟೆ (ವಿಜಯನಗರ): ನಗರಸಭೆಯ ಬಿಲ್ ಕಲೆಕ್ಟರ್ ಎಚ್. ಮಂಜುನಾಥ್ ಹಂಪಿ ಸಮೀಪದ ಕಡ್ಡಿರಾಂಪುರದ ಲಾಡ್ಜ್‌ನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಗುರುವಾರ ಬೆಳಿಗ್ಗೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿದೆ. ಅವರು ಕೆಲಸದ ಒತ್ತಡವಿದೆ ಎಂದು ಜನವರಿ 1ರಂದು ಪ್ಲಂಬಿಂಗ್‌ಗೆ ಬಳಸುವ ಗಮ್ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಅವರಿಗೆ ಯಾರೂ ಕಿರುಕುಳ ಕೊಟ್ಟಿಲ್ಲ. ಅವರು ಕಳೆದ ಒಂದು ತಿಂಗಳಿಂದ ಅವರು ಕೆಲಸಕ್ಕೂ ಬಂದಿರಲಿಲ್ಲ. ಅವರ ತಂದೆಯೂ ಬಿಲ್ ಕಲೆಕ್ಟರ್ ಆಗಿದ್ದರು. ಅವರೂ ಪ್ಲಂಬಿಂಗ್ ಗಮ್ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದರು. ಅನುಕಂಪದ ಆಧಾರದಲ್ಲಿ ಮೂರು ವರ್ಷದ ಹಿಂದೆ ಮಂಜುನಾಥ್‌ಗೆ ಕೆಲಸ ಸಿಕ್ಕಿತ್ತು' ಎಂದು ನಗರಸಭೆ ಆಯುಕ್ತ ಚಂದ್ರಪ್ಪ ತಿಳಿಸಿದರು.



ಎಚ್. ಮಂಜುನಾಥ್

ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಅಸ್ತು

ಒಂದನೇ ಪುಟದಿಂದ...

ಎಸ್ಕೇಪ್ ರ್‍ಯಾಂಪ್‌ಗಳ ನಿರ್ಮಾಣ ಮಾಡಬೇಕು ಎಂದು ಇನ್‌ಸ್ಟಿಟ್ಯೂಟ್‌ನ ತಜ್ಞರು ಶಿಫಾರಸು ಮಾಡಿದ್ದರು. ತಜ್ಞರ ಶಿಫಾರಸುಗಳನ್ನು ರಾಜ್ಯ ಒಪ್ಪಿಕೊಂಡಿದೆ ಎಂದು ಪಿಸಿಸಿಎಫ್ (ವನ್ಯಜೀವಿ) ಸಭೆಯ ಗಮನಕ್ಕೆ ತಂದರು. ವನ್ಯಜೀವಿ ಹಾಗೂ ಕಾಡುಗಳಿಗೆ ಹಾನಿ ಉಂಟು ಮಾಡಬಾರದು, ಪ್ರಾಣಿಗಳ ಸಂಚಾರಕ್ಕೆ ಹಾದಿ ನಿರ್ಮಿಸಬೇಕು ಎಂಬುದು ಸೇರಿ 10 ಷರತ್ತುಗಳನ್ನು ವಿಧಿಸಿ ಸ್ಥಾಯಿ ಸಮಿತಿಯು ಕಾಡು ಬಳಕೆಗೆ ಒಪ್ಪಿಗೆ ನೀಡಿತು. ಇದರಿಂದಾಗಿ, ಭದ್ರಾ ಮೇಲ್ದಂಡೆ ಯೋಜನೆಗೆ ಎದುರಾಗಿದ್ದ ದೊಡ್ಡ ಅಡ್ಡಿ ನಿವಾರಣೆಯಾದಂತಾಗಿದೆ.

- ಈ ಅರಣ್ಯ ಪ್ರದೇಶವು ವಿನಾಶದ ಅಂಚಿನಲ್ಲಿರುವ ಚಿಂಕಾರ (ಹುಲ್ಲೇಕರ) ಜತೆಗೆ ವಿವಿಧ ವನ್ಯಜೀವಿಗಳು, ವಿಶಿಷ್ಟ ಜಾತಿಯ ಸಸ್ಯ ಸಂಪತ್ತನ್ನು ಒಳಗೊಂಡಿದೆ.
- ತುಮಕೂರು ಜಿಲ್ಲೆಯ ಶಿರಾ, ಚಿಕ್ಕನಾಯಕನಹಳ್ಳಿ, ಗುಬ್ಬಿ ತಾಲ್ಲೂಕುಗಳು ಹಾಗೂ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬುಕ್ಕಾಪಟ್ಟಣ ವನ್ಯಜೀವಿ ಧಾಮ ವಿಸ್ತರಿಸಿಕೊಂಡಿದೆ.

ಚರ್ಚೆಗೆ ಬಾರದ ಮಹದಾಯಿ

ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಗೆ ವನ್ಯಜೀವಿ ಅನುಮೋದನೆ ನೀಡುವ ಪ್ರಸ್ತಾವನೆಯು ಸ್ಥಾಯಿ ಸಮಿತಿಯ ಸಭೆಯಲ್ಲಿ ಚರ್ಚೆಗೇ ಬರಲಿಲ್ಲ.

ಈ ಕಾರ್ಯಸೂಚಿಯನ್ನು 80ನೇ ಸಭೆಯಲ್ಲಿ ಮುಂದೂಡಲಾಗಿತ್ತು. ಈ ಯೋಜನೆ ಬಗ್ಗೆ ಲಿಖಿತ ರೂಪದಲ್ಲಿ ಪ್ರತಿಕ್ರಿಯೆ ನೀಡುವಂತೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲಾಗಿತ್ತು. ಕಾನೂನಾತ್ಮಕ ಹಾಗೂ ಯೋಜನೆಯ ವಾಸ್ತವಾಂಶದ ವಿಷಯಗಳನ್ನು ಒಳಗೊಂಡ ಲಿಖಿತ ಅಭಿಪ್ರಾಯವನ್ನು ಸಲ್ಲಿಸುವಂತೆ ಕರ್ನಾಟಕ ಸರ್ಕಾರಕ್ಕೆ ಸೂಚಿಸಲಾಗಿತ್ತು. ರಾಜ್ಯ ಸರ್ಕಾರವು ಅಕ್ಟೋಬರ್ ತಿಂಗಳಲ್ಲಿ ಎರಡು ಪತ್ರಗಳನ್ನು ಬರೆದು ಅಭಿಪ್ರಾಯ ತಿಳಿಸಿತ್ತು. ಈ ಯೋಜನೆಗೆ ಸುಪ್ರೀಂ ಕೋರ್ಟ್ ತಡೆ ನೀಡಿಲ್ಲ ಎಂದೂ ಸ್ಪಷ್ಟಪಡಿಸಿತ್ತು. ಮುಂದಿನ ಸಭೆಯಲ್ಲಿ ಈ ಯೋಜನೆಗೆ ಒಪ್ಪಿಗೆ ಸಿಗಲಿದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹಾಗೂ ಬಿಜೆಪಿ ನಾಯಕರು ಹೇಳಿಕೆ ನೀಡಿದ್ದರು.

ಈ ಯೋಜನೆಗೆ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಏಳು ಗ್ರಾಮಗಳ ಅರಣ್ಯ ಬಳಕೆಗೆ (ಜಾಕ್‌ವೆಲ್ ನಿರ್ಮಾಣ, ಪಂಪ್ ಹೌಸ್, ಎಲೆಕ್ಟ್ರಿಕಲ್ ಸಬ್ ಸ್ಟೇಷನ್, ಪೈಪ್‌ಲೈನ್) ಒಪ್ಪಿಗೆ ನೀಡುವಂತೆ ರಾಜ್ಯ ಸರ್ಕಾರವು ಮಂಡಳಿಗೆ ಪ್ರಸ್ತಾವನೆ ಸಲ್ಲಿಸಿತ್ತು. ಈ ಯೋಜನೆಗೆ ಕಾಳಿ ಹಾಗೂ ಸಹ್ಯಾದ್ರಿ ಹುಲಿ ಸಂರಕ್ಷಿತ ಪ್ರದೇಶದ 10.68 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತದೆ

ವಾರಾಹಿ: 260 ಹೆಕ್ಟೇರ್‌ನಲ್ಲಿ ಸರ್ವೆ

ಒಂದನೇ ಪುಟದಿಂದ...

ಯೋಜನಾ ಸ್ಥಳ ಪರಿಶೀಲನೆಗೆ ಉನ್ನತ ಮಟ್ಟದ ಸಮಿತಿ ರಚಿಸಬೇಕು ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಶಿಫಾರಸು ಮಾಡಿತ್ತು.

'ಇದೀಗ ಯೋಜನೆಯ ಸಾಧಕ ಬಾಧಕಗಳ ಪರಾಮರ್ಶೆಗೆ ಸರ್ವೆ ನಡೆಸಲು ಪ್ರಸ್ತಾವನೆ ಬಂದಿದೆ. ಈಗ ಕೆಲವೊಂದು ಕಡೆ ಡ್ರಿಲ್ಲಿಂಗ್ ಮಾಡಬೇಕಾಗುತ್ತದೆ ಅಷ್ಟೇ. ಯೋಜನೆಯ ಅನುಷ್ಠಾನಕ್ಕೆ ಮುನ್ನ ರಾಜ್ಯ ಸರ್ಕಾರ ಮತ್ತೊಂದು ಸುತ್ತಿನ ಒಪ್ಪಿಗೆ ಪಡೆಯಬೇಕಾಗುತ್ತದೆ. ಆ ಪ್ರಸ್ತಾವನೆ ಸಲ್ಲಿಕೆಯಾದ ಬಳಿಕ ಸ್ಥಳ ಪರಿಶೀಲನೆಗೆ ಉನ್ನತ ಮಟ್ಟದ ಸಮಿತಿ ರಚಿಸಬಹುದು' ಎಂದು ಭೂಪೇಂದರ್ ಯಾದವ್ ಅಭಿಪ್ರಾಯಪಟ್ಟರು. ಬಳಿಕ, ಪ್ರಸ್ತಾವನೆಗೆ ಷರತ್ತುಬದ್ಧ ಒಪ್ಪಿಗೆ ನೀಡಲಾಯಿತು.

ಜಲವಿದ್ಯುತ್ ಯೋಜನೆಯ ಅಂದಾಜು ವೆಚ್ಚ ₹4,268 ಕೋಟಿ. ಯಾವುದೇ 'ವಿಘ್ನ'ಗಳು ಎದುರಾಗದಿದ್ದರೆ, 2029ರಲ್ಲಿ ಕಾಮಗಾರಿ ಆರಂಭಗೊಳಿಸಿ, 2030ರ ವೇಳೆಗೆ ಕಾಮಗಾರಿ ಮುಗಿಸಲಿದೆ. 2033ರಿಂದ ವಿದ್ಯುತ್ ಉತ್ಪಾದನೆ ಆರಂಭಗೊಳ್ಳಲಿದೆ.

ಹಣ ವರ್ಗಾವಣೆಗೆ ಸಮ್ಮತಿಸದ ಕುಲಪತಿ ವಿರುದ್ಧ ಹರಿಹಾಯ್ದ ಮುಖ್ಯಮಂತ್ರಿ

ವೈದ್ಯ ಕಾಲೇಜುಗಳಿಗೆ ಆರೋಗ್ಯ ವಿವಿ 'ನಿಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಉಳಿಕೆಯಾಗಿರುವ ಹೆಚ್ಚುವರಿ ₹600 ಕೋಟಿಯನ್ನು ಸರ್ಕಾರಿ ವೈದ್ಯಕೀಯ ಕಾಲೇಜುಗಳ ಮೂಲಸೌಕರ್ಯಕ್ಕೆ ಬಳಸಲು ಸರ್ಕಾರ ಮುಂದಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಕುರಿತು ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿ.ವಿ ನೌಕರರ ವೇತನ ಮತ್ತು ಇತರೆ ವೆಚ್ಚಗಳಿಗೆ ಖರ್ಚು ಮಾಡಿದ ನಂತರ ಸಾಕಷ್ಟು ಹಣ ಉಳಿದಿದೆ. ಈ ಹಣವನ್ನು ವೈದ್ಯಕೀಯ ಕಾಲೇಜುಗಳ ಅಭಿವೃದ್ಧಿಗೆ ನೀಡಬೇಕು ಎಂದು ಸೂಚಿಸಿದರು.

'ವಿಶ್ವವಿದ್ಯಾಲಯದ ಭವಿಷ್ಯದ ಯೋಜನೆಗಳಿಗೆ ಈ ಹಣದ ಅಗತ್ಯವಿದೆ ಎಂದು ಕುಲಪತಿ ಎಂ.ಕೆ. ರಮೇಶ್ ಸಮಜಾಯಿಷಿ ನೀಡಲು ಮುಂದಾದರು. ಮಾತನ್ನು ಅರ್ಧಕ್ಕೆ ತಡೆದ ಮುಖ್ಯಮಂತ್ರಿ, 'ಸರ್ಕಾರ ದೊಡ್ಡದ್ದೋ, ವಿಶ್ವವಿದ್ಯಾಲಯ ದೊಡ್ಡದ್ದೊ? ಹಣ ವರ್ಗಾವಣೆ ಮಾಡಲು ಏಕೆ ಮೀನಮೇಷ, ಹೇಳಿದಷ್ಟು ಮಾಡಿ' ಎಂದು ತರಾಟೆಗೆ ತೆಗೆದುಕೊಂಡರು' ಎಂದು ಮೂಲಗಳು ತಿಳಿಸಿವೆ.

'₹1,000 ಕೋಟಿ ಉಳಿತಾಯ ನಿಧಿಯಲ್ಲಿ ₹400 ಕೋಟಿಯನ್ನು ರಾಮನಗರದಲ್ಲಿ ವಿಶ್ವವಿದ್ಯಾಲಯ ಕ್ಯಾಂಪಸ್ ನಿರ್ಮಾಣಕ್ಕೆ ವರ್ಗಾಯಿಸಿದ್ದು, ಈಗ, ₹600 ಕೋಟಿ ಉಳಿದಿದೆ. ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳೂ ಈ ನಿಧಿಯನ್ನು ಬೇರೆ ಉದ್ದೇಶಗಳಿಗೆ ವರ್ಗಾಯಿಸುವ ಪ್ರಯತ್ನ ನಡೆಸಿವೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲೂ ಬೇಡಿಕೆ ಬಂದಿತ್ತು' ಎಂದು ವಿಶ್ವವಿದ್ಯಾಲಯದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

₹3,005 ಕೋಟಿ ವೆಚ್ಚ: ವೈದ್ಯಕೀಯ ಶಿಕ್ಷಣ ಇಲಾಖೆಗೆ ಬಜೆಟ್‌ನಲ್ಲಿ ₹4,331 ಕೋಟಿ ಅನುದಾನ ಹಂಚಿಕೆ ಆಗಿತ್ತು. ಈವರೆಗೆ ₹3,099 ಕೋಟಿ ಬಿಡುಗಡೆಯಾಗಿದೆ. ₹3,005 ಕೋಟಿ ವೆಚ್ಚವಾಗಿದೆ. ವೈದ್ಯಕೀಯ ಕಾಲೇಜುಗಳ ನಿರ್ಮಾಣ ಮತ್ತು ಉಪಕರಣಗಳ ಖರೀದಿಗೆ ಈಗಾಗಲೇ ₹400 ಕೋಟಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣಕ್ಕೆ ₹130 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

'ಗದಗ, ಕೊಪ್ಪಳ, ಕಾರವಾರ, ಕೊಡಗು ಜಿಲ್ಲೆಗಳಲ್ಲಿ 450 ಹಾಸಿಗೆ ಆಸ್ಪತ್ರೆಗಳ ನಿರ್ಮಾಣವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಕ್ಯಾನ್ಸರ್ ಪ್ರಮಾಣ ಹೆಚ್ಚಳವಾಗಲು ಕಾರಣ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸಬೇಕು' ಎಂದು ಸೂಚಿಸಿದರು.



> **ನಿಮ್ಹಾನ್ಸ್‌ಗೆ ಕರ್ನಾಟಕ ಆಡಳಿತ ಸೇವೆಯ ಅಧಿಕಾರಿ ನೇಮಕ ಮಾಡಲು ವೈದ್ಯಕೀಯ ಶಿಕ್ಷಣ ಸಚಿವರಿಗೆ ಸೂಚಿಸಿದ್ದೇನೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಅರ್ಹರ ಬಿಪಿಎಲ್ ಕಾರ್ಡ್ ರದ್ದು ಮಾಡಬೇಡಿ'

ಬೆಂಗಳೂರು: ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳನ್ನು ಪೂರೈಸದ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಅನರ್ಹರನ್ನು ಗುರುತಿಸಿ ಹಂತ ಹಂತವಾಗಿ ತೆಗೆದು ಹಾಕಬೇಕು. ಆದರೆ, ಒಬ್ಬನೇ ಒಬ್ಬ ಅರ್ಹ ಬಿಪಿಎಲ್ ಕಾರ್ಡುದಾರನ ಪಡಿತರ ಚೀಟಿ ರದ್ದು ಮಾಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದರು.

ಮುಖ್ಯಮಂತ್ರಿ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಗುರುವಾರ ನಡೆದ ಆಹಾರ ಇಲಾಖೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದರು.

ಅನರ್ಹ ಬಿಪಿಎಲ್ ಪಡಿತರ ಚೀಟಿದಾರರು ಸ್ವಯಂ ತಮ್ಮ ಬಿಪಿಎಲ್ ಕಾರ್ಡ್‌ಗಳನ್ನು ಹಿಂತಿರುಗಿಸಲು ಕಾಲಾವಕಾಶ ನೀಡಬೇಕು. ಆ ಬಳಿಕ, ಅಂತಹವರಿಗೆ ನೋಟಿಸ್ ನೀಡಿ ಕಾರ್ಡ್‌ಗಳನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಈಗಾಗಲೇ ಬಿಪಿಎಲ್ ಪಟ್ಟಿಯಿಂದ ನಾಲ್ಕು ಸಾವಿರ ಸರ್ಕಾರಿ ನೌಕರರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ ಎಂದೂ ವಿವರಿಸಿದರು.

ಅನ್ನಭಾಗ್ಯ ಯೋಜನೆಯ ನೇರ ನಗದು ವರ್ಗಾವಣೆಯಡಿ ₹4,692 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಅಕ್ಟೋಬರ್ ಅಂತ್ಯದವರೆಗೆ ₹3,253 ಕೋಟಿ ವೆಚ್ಚ ಮಾಡಲಾಗಿದೆ. 4.45 ಕೋಟಿ ಫಲಾನುಭವಿಗಳು ಇದರ ಲಾಭ ಪಡೆಯುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಒಟ್ಟು 4,518 ಪೆಟ್ರೋಲ್ ಬಂಕ್‌ಗಳಿದ್ದು, ಡಿಸೆಂಬರ್ ಅಂತ್ಯದವರೆಗೆ 503 ಪೆಟ್ರೋಲ್ ಬಂಕ್ ತಪಾಸಣೆ ಮಾಡಲಾಗಿದೆ. ಪೆಟ್ರೋಲ್ ಬಂಕ್ ತಪಾಸಣೆಯನ್ನು ಹೆಚ್ಚಿಸಿ ಅಳತೆ ಮತ್ತು ಗುಣಮಟ್ಟದಲ್ಲಿ ಮೋಸದಂತಹ ಅಕ್ರಮಗಳಿಗೆ ಕಡಿವಾಣ ಹಾಕಬೇಕು ಎಂದು ಅವರು ಸೂಚಿಸಿದರು.

ಕುಟುಂಬದಲ್ಲಿ ಒಬ್ಬರೇ ಇರುವ, 80 ವರ್ಷ ದಾಟಿದವರಿಗೆ ಮನೆ ಬಾಗಿಲಿಗೆ ಆಹಾರ ಧಾನ್ಯ ಒದಗಿಸುವ ಅನ್ನ-ಸುವಿಧಾ ಯೋಜನೆಯನ್ನು ಜಾರಿಗೊಳಿಸಲಾಗಿದೆ. 8,500 ಪಡಿತರ ಚೀಟಿದಾರರು ಯೋಜನೆಯಡಿ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಅವರು ಹೇಳಿದರು.



❦ ಸುಭಾಷಿತ ❦
ವಾರದಲ್ಲಿ ಮೂರು ದಿನಗಳಾದರೂ ನಗುತ್ತಾ ಇರಬೇಕು.
ನಿನ್ನೆ, ಇವತ್ತು, ನಾಳೆ.
–ಬೀಚಿ

ದತ್ತಾಂಶ ರಕ್ಷಣೆಗೆ ಕರಡು ನಿಯಮ ಕೆಲವು ಕಳವಳಗಳಿಗೆ ಸ್ಪಂದನ ಬೇಕಿದೆ

‘ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ ನಿಯಮ- 2025’ರ ಬಗ್ಗೆ ಸಾರ್ವಜನಿಕ ಸಮಾಲೋಚನೆ, ಚರ್ಚೆಗೆ ಕೇಂದ್ರ ಸರ್ಕಾರ ಮುಂದಾಗಿರುವುದರಿಂದ ದೇಶದಲ್ಲಿ ದತ್ತಾಂಶ ರಕ್ಷಣೆ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಒಂದು ಹೆಜ್ಜೆ ಮುಂದಕ್ಕೆ ಇರಿಸಿದಂತಾಗಿದೆ. ವೈಯಕ್ತಿಕ ದತ್ತಾಂಶಗಳನ್ನು ರಕ್ಷಿಸಬೇಕು ಎಂಬ ಆಲೋಚನೆಗೆ ದೇಶದಲ್ಲಿ ದೀರ್ಘ ಇತಿಹಾಸ ಇದೆ. 2017ರಲ್ಲಿ ಸುಪ್ರೀಂ ಕೋರ್ಟ್, ಖಾಸಗಿತನದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಘೋಷಿಸಿತು. ಇದಾದ ನಂತರದಲ್ಲಿ ದತ್ತಾಂಶ ರಕ್ಷಣೆ ಕುರಿತ ಆಲೋಚನೆಗಳು ಹಲವು ಹಂತಗಳನ್ನು ದಾಟಿ ಬಂದಿವೆ. ನ್ಯಾಯಮೂರ್ತಿ ಶ್ರೀಕೃಷ್ಣ ಸಮಿತಿಯು ಸಿದ್ಧಪಡಿಸಿದ ಕರಡು ಮಸೂದೆಯು ತಜ್ಞರ ಗಮನವನ್ನು ಸೆಳೆಯಿತು. ಆದರೆ ಹಲವು ವರ್ಷಗಳ ಕಾಲ ಮೌನ ತಳೆದ ಸರ್ಕಾರವು ಕಳೆದ ವರ್ಷ ಕಾಯ್ದೆಯನ್ನು ರೂಪಿಸಿದೆ. ಈಗ ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಿರುವ ಕರಡು ನಿಯಮಗಳು ಅಂತಿಮಗೊಂಡ ನಂತರದಲ್ಲಿ ಕಾಯ್ದೆಯ ಅನುಷ್ಠಾನಕ್ಕೆ ಭೂಮಿಕೆ ಸಜ್ಜಾದಂತೆ ಆಗುತ್ತದೆ. ದತ್ತಾಂಶ ರಕ್ಷಣಾ ಮಂಡಳಿಗೆ ಸಂಬಂಧಿಸಿದಂತೆ ನಿಯಮಗಳಲ್ಲಿ ಇರುವ ಕೆಲವು ಅಂಶಗಳು, ಅವುಗಳು ಅಧಿಸೂಚನೆಯಲ್ಲಿ ಪ್ರಕಟವಾದ ನಂತರ ಜಾರಿಗೆ ಬರಲಿವೆ. ನಿಯಮಗಳಲ್ಲಿನ ಇನ್ನುಳಿದ ಅಂಶಗಳು ನಂತರದಲ್ಲಿ ಜಾರಿಗೆ ಬರಲಿವೆ. ಅವು ಯಾವಾಗಿನಿಂದ ಅನುಷ್ಠಾನಕ್ಕೆ ಬರುತ್ತವೆ ಎಂಬುದನ್ನು ನಿಯಮಗಳು ಅಂತಿಮವಾದಾಗ ಅದರಲ್ಲಿ ಉಲ್ಲೇಖಿಸಲಾಗುತ್ತದೆ.



ದತ್ತಾಂಶ ರಕ್ಷಣಾ ಮಂಡಳಿಯನ್ನು ಸ್ವತಂತ್ರ ಸಂಸ್ಥೆಯನ್ನಾಗಿ ರಚಿಸುವ ಪ್ರಸ್ತಾವ ನಿಯಮಗಳಲ್ಲಿ ಇದೆ. ಆದರೆ, ಈ ಮಂಡಳಿಯ ಸ್ವರೂಪ ಹಾಗೂ ಅದಕ್ಕೆ ಇರುವ ಅಧಿಕಾರ ಕಳವಳಕ್ಕೆ ಕಾರಣವಾಗಿವೆ


ವೈಯಕ್ತಿಕ ಡಿಜಿಟಲ್ ಬಳಕೆದಾರರಿಗೆ, ಅಂದರೆ ದತ್ತಾಂಶದ ಮೇಲೆ ಒಡೆತನ ಹೊಂದಿರುವವರಿಗೆ, ತಮ್ಮ ವೈಯಕ್ತಿಕ ದತ್ತಾಂಶಗಳ ಮೇಲೆ ಈಗ ಚಾಲ್ತಿಯಲ್ಲಿ ಇರುವುದಕ್ಕಿಂತ ಹೆಚ್ಚಿನ ನಿಯಂತ್ರಣವನ್ನು ಕಲ್ಪಿಸುವುದು ನಿಯಮಗಳ ಉದ್ದೇಶ. ಡಿಜಿಟಲ್ ಯುಗವು ಭಾರಿ ಪ್ರಮಾಣದ ಖಾಸಗಿ ದತ್ತಾಂಶವನ್ನು ಸಾರ್ವಜನಿಕಗೊಳಿಸುವ ಕೆಲಸ ಮಾಡಿದೆ. ಇದರ ಪರಿಣಾಮವಾಗಿ ವ್ಯಕ್ತಿಗಳು ಶೋಷಣೆಗೆ ತುತ್ತಾಗುವ ಸಾಧ್ಯತೆ ಇದೆ. ದತ್ತಾಂಶದ ಬಳಕೆ ವಿಚಾರವಾಗಿ ಕೆಲವು ಮೂಲಭೂತ ನಿಯಮಗಳನ್ನು ಈಗ ಜಾರಿಗೆ ತರಲಾಗಿದೆ. ದತ್ತಾಂಶ ಬಳಕೆಗೂ ಮೊದಲು ಸಂಬಂಧಪಟ್ಟ ವ್ಯಕ್ತಿಯ ಅನುಮತಿ ಪಡೆಯುವುದು ಆ ನಿಯಮಗಳಲ್ಲಿ ಒಂದು. ವೈಯಕ್ತಿಕವಾದ ದತ್ತಾಂಶಗಳ ಸಂಗ್ರಹ ಮತ್ತು ಅವುಗಳ ಬಳಕೆಗೆ ಮೊದಲು ಆ ದತ್ತಾಂಶಗಳ ಮಾಲೀಕರಿಂದ ಸ್ಪಷ್ಟವಾದ ಅನುಮತಿ ಪಡೆದುಕೊಳ್ಳಬೇಕು, ದತ್ತಾಂಶವನ್ನು ಯಾವ ಉದ್ದೇಶಕ್ಕಾಗಿ ಸಂಗ್ರಹಿಸಲಾಗುತ್ತಿದೆ ಎಂಬುದನ್ನು ಅವರಿಗೆ ಹೇಳಬೇಕು. ತಮ್ಮಿಂದ ಸಂಗ್ರಹಿಸುವ ದತ್ತಾಂಶವನ್ನು ಅಳಿಸಿಹಾಕುವಂತೆ ಕೇಳುವ ಅಧಿಕಾರವು ಅವರಿಗೆ ಇರಬೇಕು, ದತ್ತಾಂಶವನ್ನು ಅನಿರ್ದಿಷ್ಟ ಅವಧಿಗೆ ಇರಿಸಿಕೊಳ್ಳುವಂತಿಲ್ಲ. ಮಕ್ಕಳು ಹಾಗೂ ಅಂಗವಿಕಲರಿಗೆ ಸಂಬಂಧಿಸಿದ ದತ್ತಾಂಶಗಳ ವಿಚಾರವಾಗಿ ನಿಯಮಗಳು ಇನ್ನಷ್ಟು ಬಿಗಿಯಾಗಿವೆ.

ಇವೆಲ್ಲವೂ ಚೆನ್ನಾಗಿಯೇ ಇವೆಯಾದರೂ ಕಾಯ್ದೆಯು ಕೆಲವು ಲೋಪದೋಷಗಳನ್ನು ಹೊಂದಿದೆ. ಭಾರತದಲ್ಲಿ ದತ್ತಾಂಶ ರಕ್ಷಣಾ ಮಂಡಳಿಯನ್ನು ಸ್ವತಂತ್ರ ಸಂಸ್ಥೆಯನ್ನಾಗಿ ರಚಿಸುವ ಪ್ರಸ್ತಾವ ನಿಯಮಗಳಲ್ಲಿ ಇದೆ. ಆದರೆ, ಈ ಮಂಡಳಿಯ ಸ್ವರೂಪ ಹಾಗೂ ಅದಕ್ಕೆ ಇರುವ ಅಧಿಕಾರಗಳು ಕಳವಳಕ್ಕೆ ಕಾರಣವಾಗಿವೆ. ಸಂಪುಟ ಕಾರ್ಯದರ್ಶಿ ನೇತೃತ್ವದ ಸಮಿತಿಯು ಈ ಮಂಡಳಿಗೆ ಸದಸ್ಯರನ್ನು ನೇಮಕ ಮಾಡುತ್ತದೆ, ಅವರ ಸೇವಾ ಷರತ್ತುಗಳನ್ನು ಸರ್ಕಾರ ತೀರ್ಮಾನಿಸುತ್ತದೆ. ಈ ಮಂಡಳಿಯು ಯಾವುದೇ ನಿಯಂತ್ರಣ ಅಧಿಕಾರ ಹೊಂದಿರುವುದಿಲ್ಲ. ಇದರಿಂದಾಗಿ ಮಂಡಳಿಯ ಅಧಿಕಾರವು ಬಹಳ ಸೀಮಿತವಾಗುತ್ತದೆ.

ಕಾನೂನಿನ ಅಡಿಯಲ್ಲಿ ಸರ್ಕಾರ ಹಾಗೂ ಸರ್ಕಾರದ ಕೆಲವು ಏಜೆನ್ಸಿಗಳಿಗೆ ಬಹಳ ವ್ಯಾಪಕವಾದ ವಿನಾಯಿತಿಗಳನ್ನು ನೀಡಲಾಗಿದೆ. ಇದರ ಪರಿಣಾಮವಾಗಿ, ನಾಗರಿಕರ ಮೇಲೆ ಕಣ್ಗಾವಲು ಇರಿಸುವ ವ್ಯವಸ್ಥೆಯೊಂದು ರೂಪುಗೊಳ್ಳಬಹುದು, ಖಾಸಗಿತನದ ಹರಣ ಆಗಬಹುದು. ಈ ಏಜೆನ್ಸಿಗಳು ಯಾವ ಉದ್ದೇಶಗಳಿಗೆ ವೈಯಕ್ತಿಕ ದತ್ತಾಂಶವನ್ನು ಸಂಗ್ರಹಿಸಬಹುದು, ಅವುಗಳನ್ನು ಬಳಸಬಹುದು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿಲ್ಲ. ಸರ್ಕಾರವು ದತ್ತಾಂಶ ನಿರ್ವಾಹಕರಿಂದ ಲಿಖಿತ ಸಮರ್ಥನೆಗಳು ಇಲ್ಲದೆಯೂ ದತ್ತಾಂಶವನ್ನು ಪಡೆಯಬಹುದು. ಇದು ಜನರ ಖಾಸಗಿತನದ ಹಕ್ಕನ್ನು ಉಲ್ಲಂಘಿಸಬಹುದು. ದತ್ತಾಂಶದ ಬಳಕೆಯಲ್ಲಿ ನಿಯಮಗಳ ಉಲ್ಲಂಘನೆ ಆದಲ್ಲಿ ಅದರ ಬಗ್ಗೆ ಸಂಬಂಧಪಟ್ಟ ವ್ಯಕ್ತಿಗೆ ಮಾಹಿತಿ ನೀಡುವ ವಿಚಾರದಲ್ಲಿ ಕಾಲಮಿತಿ ಇಲ್ಲ, ಜನರ ದೂರುಗಳನ್ನು ಪರಿಹರಿಸಲು ಕೂಡ ಕಾಲಮಿತಿ ಇಲ್ಲ. ನಿಯಮಗಳನ್ನು ಅಂತಿಮಗೊಳಿಸುವಾಗ ಈ ವಿಷಯಗಳ ಬಗ್ಗೆ ಗಮನ ನೀಡಬೇಕಿದೆ.

‘ನಮ್ಮ ಸಮಾಜ’ ಎಂಬುದು ನಮ್ಮ ಜಾತಿಯ ಜನ ಎಂಬ ಅರ್ಥ ಪಡೆದಿದೆ!

ಜಾತಿಪ್ರಜ್ಞೆ ಮತ್ತು ನೈತಿಕ ಹಕ್ಕು



ವಿಶ್ಲೇಷಣೆ

ಪ್ರೊ. ಎಸ್.ಜಿ.ಸಿದ್ಧರಾಮಯ್ಯ

ಋಗ್ವೇದದಲ್ಲಿ ಬರುವ ಪುರುಷ ಸೂಕ್ತವೇ ಚಾತುರ್ವರ್ಣದ ಮೂಲ ಪಠ್ಯ. ಪುರುಷ ಸೂಕ್ತವು ಒಂದು ಕಲ್ಪಿತ ಭಾಗವಾಗಿದ್ದು, ಆ ನಂತರದಲ್ಲಿ ಋಗ್ವೇದಕ್ಕೆ ಸೇರ್ಪಡೆಗೊಂಡದ್ದು. ಇಲ್ಲಿಂದ ಮೊದಲ್ಗೊಂಡ ಚಾತುರ್ವರ್ಣದ ವರ್ಣವಿನ್ಯಾಸವು ಮುಂದಿನ ಕಾಲಘಟ್ಟಗಳಲ್ಲಿ ಜಾತಿಗಳ ಹುಟ್ಟಿಗೆ ವಿಸ್ತರಣೆಯಾಯಿತು. ಈ ಬೆಳವಣಿಗೆ ಒಂದು ದಿನದಲ್ಲಿ, ಒಂದು ಕಾಲಘಟ್ಟದಲ್ಲಿ ಆದದ್ದಲ್ಲ. ಆಗುತ್ತಾ ಸಾಗಿದಂತೆ ತನ್ನ ಬೇರು- ಬಿಳಲುಗಳನ್ನು ಚಾಚುತ್ತಾ ಹೋದ ವೃಕ್ಷ ಮಾದರಿಯ ಬೆಳವಣಿಗೆ ಅದು.

ಈ ಬೆಳವಣಿಗೆಯು ಹುಟ್ಟಿನ ಮೂಲಕ್ಕೇ ವ್ಯಕ್ತಿಗೆ ಜಾತಿಯ ನಂಟನ್ನು ಗಂಟು ಹಾಕುವುದರಿಂದ ಮೊದಲ್ಗೊಂಡು ವಿಧಿ- ನಿಷೇಧಗಳ ಆಚರಣೆಗಳಲ್ಲಿ ಅದನ್ನು ಸ್ಥಿರೀಕರಿಸಿ, ಬೇರೂರಿ ಬೆಳೆದ ವಿಷವೃಕ್ಷವಾಯಿತು. ವರ್ತಮಾನದ ಸಂದರ್ಭದಲ್ಲಿ ಅಧಿಕಾರ, ಅಂತಸ್ತು, ಸಂಪತ್ತಿನ ಕ್ರೋಡೀಕರಣ, ಶಿಕ್ಷಣದಂತಹ ಸವಲತ್ತುಗಳ ಭದ್ರತೆಯಲ್ಲಿ ರಾಜಕಾರಣ, ಧರ್ಮಕಾರಣಗಳ ಹಿಡಿತವನ್ನು ತೆಕ್ಕೆಗೆ ತೆಗೆದುಕೊಳ್ಳುವ ಬಲಾಢ್ಯ ಶಕ್ತಿಯಾಯಿತು. ಈ ಎಲ್ಲ ಬಗೆಯ ಒಡೆತನಗಳ ಯಜಮಾನಿಕೆಯ ಪರಿವ್ಯಾಪ್ತಿಯಲ್ಲಿ ನೋಡಿದಾಗ, ಜಾತಿಯ ವ್ಯಾಖ್ಯಾನದ ಕುರಿತು ಹಿಂದಿನ ಸಂಶೋಧಕರು ಹೇಳಿರುವ ಅರ್ಥಮಿತಿಗೆ ಸೀಮಿತಗೊಳಿಸಲಾಗದು.

ಬದುಕಿನ ಸಂಕೀರ್ಣತೆಗೆ ಪ್ರತಿಸ್ಪರ್ಧಿಯಾಗಿ ಜಾತಿಯ ಗುಣದೋಷಗಳ ಸ್ವರೂಪವೂ ಸಂಕೀರ್ಣಗೊಂಡಿದೆ. ಇಂದು ವರ್ಣಗಳಿಲ್ಲ, ಅವುಗಳೆಲ್ಲ ಜಾತಿಗಳಾಗಿವೆ. ಧರ್ಮಗಳಿಲ್ಲ, ಅವುಗಳೆಲ್ಲ ಮತಗಳಾಗಿವೆ. ಮತ ಮತ್ತು ಜಾತಿ ಎರಡೂ ಪದಗಳು ಒಂದೇ ಅರ್ಥದವುಗಳಾಗಿವೆ. ಜಾತಿಪ್ರಜ್ಞೆಯು ಹಿಂದಿಗಿಂತ ಹೆಚ್ಚು ಅಪಾಯಕಾರಿಯೂ ಅಮೂರ್ತ ಗತಿಯದೂ ಆಗಿ ಬೆಳೆದಿದೆ. ಹಿಂದೆಲ್ಲ ಜಾತಿಪ್ರಜ್ಞೆ ಕಣ್ಣಿಗೆ ಕಾಣುತ್ತಿತ್ತು. ನಡೆನುಡಿಗಳಲ್ಲಿ, ಆಚಾರ ವಿಚಾರಗಳಲ್ಲಿ ಅರಿವಿಗೆ, ಅನುಭವಕ್ಕೆ ಬರುತ್ತಿತ್ತು. ಇಂದು ನಡೆ-ನುಡಿಯ ಗಡಿಗೆರೆ ದಾಟದ ಪ್ರಜ್ಞೆಯಾಗಿ, ಕಣ್ಣಿಗೆ ಕಾಣದ, ಅರಿವಿಗೆ ದಕ್ಕದ ವಿಷಾನಿಲವಾಗಿ ಬೆಳೆದಿದೆ. ಅಷ್ಟೇ ಅಲ್ಲ ಅದರ ಕ್ರೌರ್ಯವು ಅನುಭವಕ್ಕೆ, ಅರಿವಿಗೆ ಬರುವ ಹೊತ್ತಿಗೆ ಅದು ಮಾಡಬಹುದಾದ ಎಲ್ಲ ಅನಾಹುತಗಳನ್ನೂ ಮಾಡಿಬಿಟ್ಟಿರುತ್ತದೆ. ಹೀಗಾಗಿ, ಹಿಂದಿನ ಜಾತಿಬುದ್ಧಿಗೂ ಇಂದಿನ ಜಾತಿಮತಿಗೂ ಹೋಲಿಸಲಾಗದಷ್ಟು ಅಪಾಯಕಾರಿ ಬೆಳವಣಿಗೆಯು ವ್ಯವಸ್ಥೆಯೊಳಗಿನ ಭಾಗವಾಗಿದೆ. ಬಿಟ್ಟೆನೆಂದರೂ ಬಿಡದ ಮಾಯೆಯಾಗಿ ಮನುಷ್ಯತ್ವವನ್ನೇ ನುಂಗಿ ನೊಣೆಯುತ್ತಿದೆ.

ಜಾತಿಪ್ರಜ್ಞೆಯ ಜನ ಸಿಗುತ್ತಾರೆ, ಆದರೆ ಮಾನವೀಯ ನೆಲೆಯ ಮನುಷ್ಯರು ಕಾಣಸಿಗುವುದಿಲ್ಲ ಎಂಬಷ್ಟು ಅದರ ಕ್ರೂರ ಹಿಡಿತಕ್ಕೆ ಮನುಷ್ಯನ ಮನಸ್ಸು ಮಾರುಹೋಗಿದೆ. ಯಾವುದೇ ಬಗೆಯ ತತ್ವ, ಸಿದ್ಧಾಂತಗಳ ಪ್ರಭಾವಕ್ಕೆ ವ್ಯಕ್ತಿ ಒಳಗಾದರೂ ಜಾತಿಪ್ರಜ್ಞೆ ಎಂಬುದು ವ್ಯಕ್ತಿ ತಾನು ಬಿಟ್ಟರೂ ಅದು ಅವನನ್ನು ಬಿಡದ ಬಂಧವಾಗಿ, ಗುಣವಾಗಿ, ಅಂಟಿನ ನಂಟಾಗಿ ಕಾಡುತ್ತಿದೆ. ಈ ಪ್ರಜ್ಞೆಯನ್ನು ಅಮೂರ್ತ ರೂಪದಲ್ಲಿ ಹೆಚ್ಚು ಬಲಿಷ್ಠಗೊಳಿಸುವ ಪೂರಕ ಶಕ್ತಿಗಳಾಗಿ ರಾಜಕಾರಣ ಮತ್ತು ಧರ್ಮಕಾರಣಗಳು ಕ್ರಿಯಾಶೀಲವಾಗಿವೆ. ಜಾತಿಪ್ರಜ್ಞೆಗೆ ರಾಜಕಾರಣ ನೀರೆರೆದರೆ ಧರ್ಮಕಾರಣಗಳು ಗೊಬ್ಬರ ಹಾಕುವ ಕೆಲಸ ಮಾಡುತ್ತಿವೆ. ಹೀಗಾಗಿ, ವ್ಯಕ್ತಿ ಮತ್ತು ಸಮುದಾಯ ಎರಡೂ ಜಾತಿಪ್ರಜ್ಞೆಯ ಹಳವಂಡದಲ್ಲಿ ಸಿಲುಕಿ ಬಳಲುತ್ತಿವೆ. ಮೇಲರಿಮೆ ಮತ್ತು ಕೀಳರಿಮೆಯ ಭಾವಕೂಪಗಳಲ್ಲಿ ವಿಹರಿಸುವ ಮಂಡೂಕಗಳಾಗಿ ಜನ ವ್ಯವಹರಿಸುತ್ತಿದ್ದಾರೆ. ಎಲ್ಲವನ್ನೂ ಮೀರಿ ನಿಂತ ಮನುಷ್ಯರಂತೆ ಕಾಣಿಸಿಕೊಳ್ಳುತ್ತಾರೆ. ಆದರೆ ಪರೀಕ್ಷೆಯ ಕೊನೆಯ ಹಂತಕ್ಕೆ ಬಂದರೆ ಅದೇ ಆಗಿ ಬೆತ್ತಲಾಗುತ್ತಾರೆ. ‘ಜಾತಿ ಎಂಬುದು ಸೃಜನಶೀಲತೆ’ ಎಂದು ಹೇಳಿದ ಬುದ್ಧಿಜೀವಿಯ ಉದಾಹರಣೆಯೇ ಇದಕ್ಕೆ ನಿದರ್ಶನ.

ಈ ದೇಶದ ಯಾವ ಬರಹಗಾರರೂ ಈ ಜಾತಿಪ್ರಜ್ಞೆಯ ಕೂಪಮಂಡೂಕತ್ವದಿಂದ ಬಿಡುಗಡೆಗೊಂಡಿಲ್ಲ ಎಂಬಷ್ಟರ ಕಠೋರ ಸತ್ಯದಲ್ಲಿ ಜಾತಿಪ್ರಜ್ಞೆಯ ಬುದ್ಧಿಭಾವಗಳ ನಖಮಾಂಸದ ಅಂಟಿನ ನಂಟು ಇದೆ– ಎಲ್ಲ ಜಾತಿಗಳ ಸ್ವಾಮೀಜಿಗಳನ್ನೂ ಜಗದ್ಗುರುಗಳೆಂದು ಕರೆದಂತೆ. ಇಷ್ಟಿದ್ದರೂ ಸಾಹಿತಿಗಳು ಎಷ್ಟು ಪ್ರಮಾಣದಲ್ಲಿ ಮನುಷ್ಯತ್ವದ ವಿಶ್ವಮಾನವತೆಯ ಕಡೆಗೆ ಹೆಜ್ಜೆ ಹಾಕಿದ್ದಾರೆ ಎಂಬುದರ ಮೇಲೆ ಅವರವರ ಸಾಹಿತ್ಯದ ಲೋಕದರ್ಶನ ಅನುಭವಕ್ಕೆ ಸಿದ್ಧಿಸಿದೆ. ಈ ಪರಿಯಲ್ಲಿ ಪ್ರಜ್ಞಾಪೂರ್ವಕವಾಗಿ ಸೃಜನಶೀಲತೆಯನ್ನು ಮಾನವೀಕರಣದ ಲೋಕದರ್ಶನವಾಗಿ ಕಂಡವರು ಮಾತ್ರ ಪೂರ್ಣತೆಯ ಕಡೆಗೆ ಸಾಗಿದ ಸಾಧಕರಾಗಿ ಸಿಗುತ್ತಾರೆ, ಸಿದ್ಧಪುರುಷರಾಗಿ ಅಲ್ಲ.

ಸಮಾಜ ಎಂಬ ಪದವನ್ನು ಜಾತಿಯ ಆವರಣದಲ್ಲಿಯೇ ನಿರ್ದೇಶಿಸಿ ಬಳಸುವುದು ರೂಢಿಗಂಟಿದ ಜಾತಿಪ್ರಜ್ಞೆಯಾಗಿದೆ. ‘ನಮ್ಮ ಸಮಾಜ’ ಎಂದರೆ ನಮ್ಮ ಜಾತಿಯ ಜನ ಎಂಬ ಅರ್ಥದಲ್ಲಿ ಭಾವಿಸಲಾಗುತ್ತದೆ. ಇದು ಆಧುನಿಕ ಬೆಳವಣಿಗೆ. ಇದು ವ್ಯಕ್ತಿಗತ ಮತ್ತು ಸಮೂಹಗತ ನೆಲೆಯ ವಸ್ತುಸ್ಥಿತಿಯಾಗಿದ್ದು, ಇದರ ಕಬಂಧಬಾಹುಗಳ ಹಿಡಿತಕ್ಕೆ ಸಿಲುಕಿ ದೇಶದ ಪ್ರಗತಿ ಕುಂಠಿತವಾಗಿದೆ. ಪ್ರಜಾಪ್ರಭುತ್ವದ ಮೂಲಭೂತ ಗುಣಗಳು ಈ ದೇಶದ ನೆಲದಲ್ಲಿ ಬೇರೂರಲು ಸಾಧ್ಯವಾಗದಂತೆ ಮಾಡಿದೆ. ಜಾತಿ ರಾಜಕಾರಣವೇ ಶಕ್ತಿರಾಜಕಾರಣವಾಗಿ ಪ್ರಜಾಪ್ರಭುತ್ವದ ಮೌಲ್ಯಗಳ ಕುಸಿತಕ್ಕೆ ಕಾರಣವಾಗಿದೆ.

ಸೂಕ್ಷ್ಮವಾಗಿ ಗಮನಿಸಿದಾಗ, ವರ್ಣದ ನೆಲೆಯ ತಾರತಮ್ಯ ನೀತಿ ಈಗಲೂ ಜಾತಿಗಳ ಅರಿಮೆಗಳನ್ನು ಆಳುವ ಶಕ್ತಿಯಾಗಿದೆ. ಇದು ಮನೋಸ್ಥಿತಿಯಾದಂತೆ ದಾಟಲಾರದ ರೋಗಪ್ರಜ್ಞೆಯಾಗಿ ಬೇರೂರಿದೆ. ಆದ್ದರಿಂದಲೇ ನಮಗೆ ಸ್ವಾತಂತ್ರ್ಯ ಸಿಕ್ಕಿದೆ, ಅದು ರಾಜಕೀಯ ಸ್ವಾತಂತ್ರ್ಯ, ಒಂದು ಚುನಾವಣೆಯಲ್ಲಿ ಒಬ್ಬ ವ್ಯಕ್ತಿಗೆ ಒಂದು ಮತ ನೀಡುವ ಸ್ವಾತಂತ್ರ್ಯ. ಆದರೆ ಅದರಾಚೆಗೆ ನಾವಿನ್ನೂ ಜಾತಿಪ್ರಜ್ಞೆಯ ಸಾಂಸ್ಕೃತಿಕ ದಾಸ್ಯದಿಂದ ಬಿಡುಗಡೆ ಪಡೆದಿಲ್ಲ. ನಮ್ಮ ಶಿಕ್ಷಣವೂ ನಮ್ಮನ್ನು ಈ ದಾಸ್ಯದಿಂದ ಬಿಡುಗಡೆಗೊಳಿಸುವಲ್ಲಿ ವಿಫಲವಾಗಿದೆ. ದುರಂತವೆಂದರೆ, ಶಿಕ್ಷಣ ಪಡೆದವರಲ್ಲಿ ಇರುವ ಜಾತಿಪ್ರಜ್ಞೆಯೇ ದೇಶಕ್ಕೆ, ಪ್ರಜಾಪ್ರಭುತ್ವಕ್ಕೆ ಹೆಚ್ಚು ಅಪಾಯಕಾರಿಯಾಗಿದೆ. ಹೀಗಾಗಿ, ಈ ಜಾತಿಪ್ರಜ್ಞೆಯ ಸ್ವರೂಪವನ್ನು ಅರಿಯಲು ಮನುಷ್ಯನ ಸೂಕ್ಷ್ಮಮತಿಗೂ ಸಾಧ್ಯವಾಗದ ಸೂಕ್ಷ್ಮಾತಿಸೂಕ್ಷ್ಮ ವಿವಂಚನೆಯ ಮೂಲಕಣ ಇದಾಗಿದೆ. ಆದ್ದರಿಂದಲೇ ಜಾತಿವ್ಯವಸ್ಥೆ ಭಾರತಕ್ಕಂಟಿದ ಶಾಪವಾಗಿದೆ.




ಜಾತಿ ವ್ಯವಸ್ಥೆಯ ಹಳವಂಡದಲ್ಲಿ ಪ್ರಭಾವಿ ಜಾತಿಗಳು ಔದಾರ್ಯ ಮರೆದಂತೆ ಆಚಾರ ವಿಚಾರಗಳಲ್ಲಿ ಪ್ರಗತಿಯ ಹೆಜ್ಜೆ ಹಾಕತೊಡಗಿವೆ. ಉದಾಹರಣೆಗೆ, ಅಂತರ್ಜಾತಿ ವಿವಾಹ, ಅಂತರ್ಧರ್ಮೀಯ ವಿವಾಹದಂತಹ ವಿಚಾರಗಳಲ್ಲಿ ಅವುಗಳ ಧಾರಾಳತನವನ್ನು ಕಾಣಬಹುದು. ಆದರೆ ಅದೇ ದುರ್ಬಲ ಜಾತಿಗಳು ಶಿಕ್ಷಣಕ್ಕೆ ತೆರೆದುಕೊಂಡಿದ್ದರೂ ಇನ್ನೂ ಹಳೆಯ ಕಂದಾಚಾರಗಳ ವಿಧಿ ನಿಷೇಧಗಳನ್ನು ಉಗ್ರವಾಗಿ ಅನುಸರಿಸುತ್ತಿರುವುದು ಹೆಚ್ಚಾಗಿದೆ. ಇದಕ್ಕೆ ಇತ್ತೀಚೆಗೆ ಕೆಲವು ಜಾತಿಗಳು ಅಂತರ್ಜಾತಿ ವಿವಾಹಗಳ ಕುಟುಂಬಗಳಿಗೆ ಊರಿನಲ್ಲಿ ಬಹಿಷ್ಕಾರ ಹಾಕಿರುವುದು, ಮಹಿಳೆಯ ಸೂತಕಾಚರಣೆಯ ವಿಷಯದಲ್ಲಿ ಕಂದಾಚಾರವನ್ನು ಜಾರಿಗೊಳಿಸಿರುವುದು ಸುದ್ದಿಯಾಗಿರುವುದನ್ನು ನೆನಪಿಸಿಕೊಳ್ಳಬಹುದು.

ಜಾತಿಯ ಜಗದ್ಗುರುಗಳು ಇತ್ತೀಚಿನ ದಿನಗಳಲ್ಲಿ ತಮ್ಮ ಸ್ಥಾನಗೌರವವನ್ನು ಲೆಕ್ಕಿಸದೆ, ಹೆಚ್ಚು ಮಕ್ಕಳನ್ನು ಹೆರುವುದಕ್ಕೆ ಮಹಿಳೆಯರಿಗೆ ಮತ್ತು ಜಾತಿಪ್ರಜ್ಞೆಯನ್ನು ಬೆಳೆಸಿಕೊಳ್ಳುವುದಕ್ಕೆ ಸ್ವಜಾತಿಯ ರಾಜಕಾರಣಿಗಳಿಗೆ ಆದೇಶಿಸುತ್ತಿರುವುದು ಹೆಚ್ಚಾಗಿದೆ. ಇದು ಮೇಲ್ನೋಟಕ್ಕೆ ಹುಚ್ಚಾಟದಂತೆ ಕಂಡುಬಂದರೂ ಇದರ ಹಿಂದಿನ ಜಾತಿಪ್ರಜ್ಞೆಯ ಅಪಾಯವು ಪ್ರಜಾಪ್ರಭುತ್ವಕ್ಕೆ ಮತ್ತು ಸಂವಿಧಾನದ ಮೂಲ ಆಶಯಕ್ಕೆ ಧಕ್ಕೆ ತರುವ ನಡೆಯೇ ಆಗಿದೆ. ಇವು ಸೌಹಾರ್ದಕ್ಕೆ ಭಂಗ ತರುವ ಮಾತುಗಳೇ ಆಗಿವೆ. ಇನ್ನು ರಾಜಕಾರಣದಲ್ಲಿನ ಇತ್ತೀಚಿನ ಬೆಳವಣಿಗೆಯು ಜಾತಿಕೂಟಗಳ ಮೇಲಾಟದ ಬೆಳವಣಿಗೆಯೇ ಆಗಿ, ಪಕ್ಷಭೇದ ಮರೆತಂತೆ ಸ್ವಜಾತಿಯ ರಾಜಕಾರಣಿಗಳು ಜಾತಿ ಸಂಘಟನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅಲ್ಲಿನ ಪ್ರಜಾಪ್ರಭುತ್ವವಾದಿ ವಿರೋಧಿ ನೆಲೆಯ ಹೇಳಿಕೆಗಳಿಗೆ ಭಾಜನರಾಗುತ್ತಿದ್ದಾರೆ. ಇದು ತುಂಬಾ ಅಪಾಯಕಾರಿ ಬೆಳವಣಿಗೆ.

ಅರಿವಿನ ಮಾತು: ಅಂಬೇಡ್ಕರ್ ಅವರು ಹೇಳಿದ ಶಿಕ್ಷಣ, ಸಂಘಟನೆ, ಹೋರಾಟದ ಸೂತ್ರಗಳು ಹಸಿವಿನ ಲೋಕದ ಅವಮಾನಿತ ಜಗತ್ತಿನ ವಂಚನೆ, ಶೋಷಣೆಗೆ ಒಳಗಾದ ಎಲ್ಲ ಸಮುದಾಯಗಳಿಗೂ ಅನ್ವಯಿಸುತ್ತವೆ. ಈ ಹಿನ್ನೆಲೆಯಲ್ಲಿ ಸಂಘಟನೆಯ ಅಗತ್ಯ ಇರುವುದು ಬಲಿಷ್ಠ ಜಾತಿಗಳಿಗಲ್ಲ ದುರ್ಬಲ ವರ್ಗದ ಜಾತಿಗಳಿಗೆ ಮಾತ್ರ ಎಂಬುದು ನೈತಿಕ ಹಕ್ಕಿನ ವಿಚಾರ. ಇದು ಜಾತಿಪ್ರಜ್ಞೆಯನ್ನು ಬೆಳೆಸುವುದಕ್ಕಲ್ಲ ಸಮಾನತೆಯನ್ನು ಜಾರಿಗೆ ತರುವುದಕ್ಕೆ ಮತ್ತು ಜಾತಿ ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕೆ ಇರುವ ಅನಿವಾರ್ಯ ಅಗತ್ಯ.

ಚುರುಮುರಿ



ರಾಜಕೀಯ ಡಿಕ್ಷನರಿ!

• ಬಿ.ಎನ್.ಮಲ್ಲೇಶ್

‘ಲೇ ತೆಪರ, ಏನಲೆ ಅದು ಡಿನ್ನರ್ ಮೀಟಿಂಗ್ ಗದ್ಲ? ಒಟ್ಟಿಗೆ ಕುಂತು ಊಟಾನೂ ಮಾಡಬಾರ್ದಾ?’ ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

‘ಲೇಯ್, ಸಿದ್ರಾಮಣ್ಣ ಟೀವಿಯೋರ್‍ನ ಕೇಳಿದಂಗೆ ನನ್ನ ಕೇಳ್ತೀಯಲ್ಲೋ. ನನ್ನ ರಾಜಕೀಯ ಡಿಕ್ಷನರಿ ಪ್ರಕಾರ ಸಿದ್ರಾಮಣ್ಣ ‘ಒಟ್ಟಿಗೆ ಕುಂತು ಊಟ ಮಾಡೋದು ತಪ್ಪಾ?’ ಅಂತ ಕೇಳಿದ್ರೆ ‘ಯಾಕ್ರೀ, ನನ್ ಕುರ್ಚಿ ನಾನು ಭದ್ರ ಮಾಡ್ಕೊಳ್ಳೋದು ತಪ್ಪಾ’ ಅಂತ ಕೇಳಿದಂಗೆ ಅರ್ಥ’ ತೆಪರೇಸಿ ನಕ್ಕ.

‘ಹೌದಾ? ಅದ್ಯಾವುದಪ್ಪ ನಿನ್ನ ರಾಜಕೀಯ ಡಿಕ್ಷನರಿ? ಈಗ ಅದೇ ಪ್ರಶ್ನೇನ ಬೇರೇರು ಕೇಳಿದ್ರೆ?’ ಕೊಟ್ರೇಶಿ ಕೊಕ್ಕೆ.

‘ಹಾಗೆ ಕೇಳಿದ್ರೆ, ‘ಯಾಕ್ರೀ, ನಾವು ಮುಖ್ಯಮಂತ್ರಿ ಗದ್ದುಗೆ ಏರೋದು ತಪ್ಪಾ?’ ಅಂತ ಕೇಳಿದಂಗೆ ಅರ್ಥ...’

‘ಅಲೆ ಇವ್ನ, ಹಂಗಂತೀಯ?’

‘ಹ್ಞುಂ ಮತ್ತೆ, ಡಿನ್ನರ್ ಮೀಟಿಂಗ್ ಅಂದ್ರೆ ಊಟ ಅಲ್ಲ, ರಾಜಕೀಯ. ಯಾರಿಗೆ ಹೆಂಗೆ ಫಿಟಿಂಗ್ ಇಡಬೇಕು, ಯಾರ ಬುಡಕ್ಕೆ ಹೆಂಗೆ ಬಿಸಿನೀರು ಕಾಯಿಸ್ಬೇಕು, ಯಾರ ತಲೆ ಮೇಲೆ ಎಂಥ ಮಸಾಲೆ ಅರೀಬೇಕು... ಬರೀ ಇವೇ ಚರ್ಚೆ’ ತೆಪರೇಸಿ ವಿವರಿಸಿದ.

‘ಸರಿ, ‘ಈಗ ನಮ್ಮಲ್ಲಿ ಯಾವುದೇ ಬಿಕ್ಕಟ್ಟಿಲ್ಲ’ ಅಂದ್ರೆ?’

‘ಒಳಗೆ ದೊಡ್ಡ ಬಿರುಕಿದೆ, ತ್ಯಾಪೆ ಹಚ್ತಾ ಅದೀವಿ ಅಂತ ಅರ್ಥ’.

‘ಸೂಕ್ತ ಸಮಯದಲ್ಲಿ ಉತ್ತರ ಕೊಡ್ತೀನಿ ಅಂದ್ರೆ?’

‘ಸದ್ಯ ಹೇಳಾಕೆ ಬದ್ನೆಕಾಯಿ ಏನೂ ಇಲ್ಲ ಅಂತ ಅರ್ಥ’.

‘ರಾಜಕೀಯ ನಿಂತ ನೀರಲ್ಲ ಅಂದ್ರೆ?’

‘ನಿಮ್ ಪಕ್ಷ ಬಿಟ್ಟು ಬೇರೆ ಪಕ್ಷ ಸೇರ್ಕಂತಿದೀನಿ ಅಂತ ಅರ್ಥ’.

‘ನೀನೂ ಬಾಳ ತಿಳ್ಕಂಡಿದಿ ಬಿಡಲೆ’ ಎಂದ ಗುಡ್ಡೆ, ‘ಈಗ ಬಿಜೆಪಿಯೋರೂ ಮೀಟಿಂಗ್ ಮಾಡ್ತಾರಂತೆ ಗೊತ್ತಾ?’ ಎಂದ.

‘ಬಿಜೆಪಿಯೋರು ಬೆಳಿಗ್ಗೆ ಮೀಟಿಂಗ್ ಮಾಡಿದ್ರೆ ‘ಕೇಸರಿ’ಬಾತು...’

‘ರಾತ್ರಿ ಮೀಟಿಂಗ್ ಮಾಡಿದ್ರೆ?’

‘ಯತ್ನಾಳ್ ಬಾತು...!’

ತೆಪರೇಸಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ದಿನದ ಟ್ವೀಟ್

ರಾಜ್ಯಪಾಲರಿಗೆ ಸರ್ವಾಧಿಕಾರ?



ಕುಲಪತಿಗಳ ನೇಮಕಾತಿಗೆ ಯುಜಿಸಿ ತರಲು ಉದ್ದೇಶಿಸಿರುವ ಹೊಸ ನಿಯಮಗಳು ಕುಸಿಯುತ್ತಿರುವ ಉನ್ನತ ಶಿಕ್ಷಣವನ್ನು ಮೇಲೆತ್ತಲಾರವು. ಚುನಾಯಿತ ಸರ್ಕಾರಗಳಿಗಿಂತ ಕೇಂದ್ರದ ಕೈಗೊಂಬೆಯಂತಿರುವ ಗವರ್ನರ್‌ಗಳೇ ಹೆಚ್ಚು ಶಕ್ತಿಶಾಲಿಗಳಾಗುವುದು ಪ್ರಜಾಪ್ರಭುತ್ವವನ್ನು ಇನ್ನಷ್ಟು ದುರ್ಬಲಗೊಳಿಸುತ್ತದೆ. ಮೇಲಾಗಿ ನಮ್ಮಲ್ಲಿ ಶಿಕ್ಷಣ ತಜ್ಞರು ರಾಜ್ಯಪಾಲರಾಗುವುದುಂಟೇ?

ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ಕಿಡಿನುಡಿ



ಎಲ್ ಆ್ಯಂಡ್ ಟಿ ಮುಖ್ಯಸ್ಥರು ಬಹುಶಃ ಎನ್.ಆರ್.ನಾರಾಯಣ ಮೂರ್ತಿ ಅವರಿಂದ ತರಬೇತಿ ಪಡೆದುಕೊಂಡಿರಬಹುದು. ವೃತ್ತಿ ಮತ್ತು ಖಾಸಗಿ ಬದುಕಿನ ನಡುವೆ ಉತ್ತಮ ಸಮತೋಲನ ಕಾಯ್ದುಕೊಂಡು ಕುಟುಂಬದೊಟ್ಟಿಗೆ ಒಳ್ಳೆಯ ಸಮಯ ಕಳೆಯಲು ಪಶ್ಚಿಮದ ದೇಶಗಳು ಪ್ರಾಮುಖ್ಯ ಕೊಡುತ್ತಿವೆ. ಆದರೆ, ಕುಟುಂಬಕ್ಕೆ ಸಮಯ ಕೊಡದೆ ಸಿಬ್ಬಂದಿಯನ್ನು ಕಾರ್ಪೊರೇಟ್ ಕಂಪನಿಗಳ ಗುಲಾಮರನ್ನಾಗಿಸಲು, ವಾರಕ್ಕೆ 70 ಗಂಟೆ ಕೆಲಸ ಮಾಡಬೇಕೆಂದು ನಾರಾಯಣಮೂರ್ತಿ ಬಯಸಿದರೆ, ಭಾನುವಾರವೂ ದುಡಿಯಬೇಕು, ವಾರಕ್ಕೆ 90 ಗಂಟೆ ಕೆಲಸ ಮಾಡಬೇಕೆಂದು ಎಲ್ ಆ್ಯಂಡ್ ಟಿ ಮುಖ್ಯಸ್ಥರು ಸಲಹೆ ನೀಡುತ್ತಾರೆ. ‘ಟಾಕ್ಸಿಕ್’ ಕೆಲಸದ ಸಂಸ್ಕೃತಿ ಭಾರತದಲ್ಲಿ ಸಾಮಾನ್ಯ ಎಂಬಂತೆ ಆಗುತ್ತಿರುವುದು ಏಕೆ ಎಂಬುದೇ ನನಗೆ ತಿಳಿಯುತ್ತಿಲ್ಲ.

ವರುಣ್ ರಾವ್, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 10-1-2000

• **ಕೃಷ್ಣಾ: ಅಂತರರಾಜ್ಯ ಪ್ರಾಧಿಕಾರ ರಚನೆಗೆ ಆಗ್ರಹ**

ನವದೆಹಲಿ, ಜ. 9– ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು ಎರಡು ಸಾವಿರದ ಇಸವಿ ಹೊತ್ತಿಗೆ ಸಂಪೂರ್ಣವಾಗಿ ಬಳಸಿಕೊಳ್ಳುವ ಆಂಧ್ರ ಪ್ರದೇಶದ ಯೋಜನೆಗೆ ಕರ್ನಾಟಕವು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಸ್ಕೀಂ ‘ಬಿ’ಯಲ್ಲಿನ ನೀರಿನ ಹಂಚಿಕೆಗಾಗಿ ಅಂತರರಾಜ್ಯ ಪ್ರಾಧಿಕಾರವೊಂದನ್ನು ರಚಿಸಬೇಕೆಂದು ಪ್ರಧಾನಿ ಅವರನ್ನು ಒತ್ತಾಯಿಸಿದೆ.

ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ಪ್ರಧಾನಿ ವಾಜಪೇಯಿ ಅವರಿಗೆ ಪತ್ರವೊಂದನ್ನು ಕಳುಹಿಸಿದ್ದು, ಆಂಧ್ರಪ್ರದೇಶ ಸರ್ಕಾರವು ತನ್ನ ವೆಬ್‌ಸೈಟ್‌ನಲ್ಲಿ, ಎರಡು ಸಾವಿರದ ಇಸವಿಯಲ್ಲಿ ಕೃಷ್ಣಾ ನದಿಯ ಹೆಚ್ಚುವರಿ ನೀರನ್ನು ಬಳಸಿಯೇ ತೀರುವುದಾಗಿ ಹೇಳಿರುವ ಕಾರ್ಯಯೋಜನೆಯ ಬಗೆಗೆ ಗಮನ ಸೆಳೆದಿದ್ದಾರೆ.

• **ವಿಮಾನ ಅಪಹರಣ: ತನಿಖೆಗೆ ವಿಶೇಷ ಸಿಬಿಐ ತಂಡ ರಚನೆ**

ನವದೆಹಲಿ, ಜ. 9 (ಯುಎನ್‌ಐ, ಪಿಟಿಐ)– ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣ ಪ್ರಕರಣ ಕುರಿತ ಸಮಗ್ರ ತನಿಖೆಗೆ ಕೇಂದ್ರ ತನಿಖಾ ದಳವು (ಸಿಬಿಐ) ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ.

ಸಿಬಿಐ ಜಂಟಿ ನಿರ್ದೇಶಕ ಎಂ.ಎಲ್. ಶರ್ಮಾ ನೇತೃತ್ವದ ವಿಶೇಷ ತಂಡವು ವಿಮಾನ ಅಪಹರಣ ಪ್ರಕರಣದಲ್ಲಿ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ‘ಇಂಟರ್ ಸರ್ವಿಸಸ್ ಇಂಟಲಿಜೆನ್ಸ್’ (ಐಎಸ್‌ಐ) ಕೈವಾಡದ ಸಾಧ್ಯತೆ ಕುರಿತು ನಿರ್ದಿಷ್ಟವಾಗಿ ತನಿಖೆ ಮಾಡಲಿದೆ ಎಂದು ಸಿಬಿಐ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಶುಕ್ರವಾರ, 10-1-1975

• **ಕಾಂಗ್ರೆಸ್‌ನಿಂದ ಹಾವನೂರ ಸಸ್ಪೆಂಡ್**

ಬೆಂಗಳೂರು, ಜ. 9– ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಎಲ್.ಜಿ. ಹಾವನೂರ ಅವರನ್ನು ಅಶಿಸ್ತಿನ ಆಪಾದನೆ ಮೇಲೆ ಕಾಂಗ್ರೆಸ್ಸಿನ ಪ್ರಾಥಮಿಕ ಹಾಗೂ ಸಕ್ರಿಯ ಸದಸ್ಯತ್ವದಿಂದ ಸಸ್ಪೆಂಡ್ ಮಾಡಲಾಗಿದೆಯೆಂದು ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಕಟಣೆ ತಿಳಿಸಿದೆ.

ಪಕ್ಷದಿಂದ ಏಕೆ ಉಚ್ಚಾಟಿಸಬಾರದು ಎಂದು, ಒಂದು ವಾರದಲ್ಲಿ ವಿವರಣೆ ನೀಡುವಂತೆ ಷೋಕಾಸ್ ನೋಟಿಸ್ ಕೊಡಲಾಗಿದೆಯೆಂದು ಪ್ರಕಟಣೆ ತಿಳಿಸಿದೆ.

• **ಮಾರಿಷಸ್‌ಗೆ ನೆರವು: ಒಪ್ಪಂದಕ್ಕೆ ಸಹಿ**

ನವದೆಹಲಿ, ಜ. 9– ಮಾರಿಷಸ್‌ಗೆ ಭಾರತ ನೀಡುವ 15 ವರ್ಷಗಳ ಅವಧಿಯ ಐದು ಕೋಟಿ ರೂ.ಗಳ ಸಾಲ ಕುರಿತ ಒಪ್ಪಂದಕ್ಕೆ ಇಂದು ಸಹಿ ಬಿತ್ತು. ಇದೇ ಅಲ್ಲದೆ 15 ಕೋಟಿ ರೂ.ಗಳ ವಾಣಿಜ್ಯ ಸಾಲ ಮತ್ತಿತರ ಸೌಲಭ್ಯಗಳನ್ನೂ ಭಾರತ ಒದಗಿಸಲಿದೆ.

ಅರ್ಥ ಸಚಿವ ಸಿ. ಸುಬ್ರಹ್ಮಣ್ಯಂ ಹಾಗೂ ಮಾರಿಷಸ್‌ನ ಆರ್ಥಿಕ ಯೋಜನೆ ಮತ್ತು ಬೆಳವಣಿಗೆ ಸಚಿವ ಜಗಜಿತ್ ಸಿಂಗ್ ಅವರು ಇಂದು ಉಭಯ ದೇಶಗಳ ಪ್ರಧಾನಿಗಳ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಸಂಗತ

ಆಹಾರಶೈಲಿ ಬದಲಾಗಬೇಕಾದ ಹೊತ್ತು

ಅಧಿಕ ಹಸಿವು, ಸಿಹಿ ತಿನ್ನಬೇಕೆಂಬ ಕಡುಬಯಕೆಗೆ ಪರಿಹಾರ ಇರುವುದು ನಾರಿನ ಪದಾರ್ಥಗಳಲ್ಲಿ

• ಡಾ. ಮುರಳೀಧರ ಕಿರಣಕೆರೆ

ಮಾತಿಗೆ ಸಿಕ್ಕಿದ ಪರಿಚಿತ ಹಿರಿಯರೊಬ್ಬರು ಅಲವತ್ತುಕೊಂಡರು- ‘ಈ ಮದ್ವೆಮನೆಗಳಲ್ಲಿ ಮಧ್ಯಾಹ್ನ ಚೆನ್ನಾಗಿ ಊಟ ಮಾಡಿ ಬಂದ್ರೂ ಸಂಜೆ ಹೊತ್ತಿಗೆ ಮತ್ತೆ ಹೊಟ್ಟೆ ಹಸಿಯಲು ಆರಂಭವಾಗುತ್ತೆ. ರಾತ್ರಿ ಹೊತ್ತೂ ಹೀಗೆ, ಯಾವ್ದಾದ್ರು ಕಾರ್ಯಕ್ರಮದಲ್ಲಿ ಊಟ ಮಾಡಿ ಬಂದ್ರೆ ಮಧ್ಯರಾತ್ರಿ ಹಸಿವಾಗಿ ಎಚ್ಚರ ಆಗ್ಬಿಡುತ್ತೆ. ಆದ್ರೆ ಮನೇಲೆ ಇದ್ದಾಗ ಹೀಗಾಗಲ್ಲ, ಫಂಕ್ಷನ್‌ಗಳಲ್ಲಿ ತಿಂದು ಬಂದಾಗ ಮಾತ್ರ ಈ ಸಮಸ್ಯೆ. ಅದ್ಕೆ ಈಗೆಲ್ಲಾ ಫಂಕ್ಷನ್‌ಗಳಿಗೆ ಜಾಸ್ತಿ ಹೋಗಲ್ಲ. ಹೋದ್ರೆ ಇದೇ ಫಜೀತಿ. ಹಂಗಂತ ತುಂಬಾ ಹತ್ರದವರು, ನೆಂಟರಿಷ್ಟರು ಮನೆಗೇ ಬಂದು ಒತ್ತಾಯದಿಂದ ಕರೆದುಹೋದಾಗ ಹೋಗ್ದೇ ಇರಕ್ಕೂ ಆಗಲ್ಲ. ಡಯಾಬಿಟಿಸ್ ಕಂಟ್ರೋಲ್ ಮಾಡೋದೇ ತುಂಬಾ ಕಷ್ಟ ಆಗ್ಬಿಟ್ಟಿದೆ’. ಆ ಹಿರಿಯರ ಮುಖದಲ್ಲಿ ಬೇಸರ ಎದ್ದು ಕಾಣುತ್ತಿತ್ತು.

‘ಅಲ್ಲೆಲ್ಲಾ ತುಂಬಾ ಸ್ವೀಟ್ಸ್ ತಿಂತೀರೇನೊ, ಅದಕ್ಕೇ ಈ ಥರದ ಸಮಸ್ಯೆ. ಅದರ ಬದ್ಲು ಪಲ್ಯ, ಕೋಸಂಬರಿ, ಸಲಾಡು ಜಾಸ್ತಿ ತಿನ್ನಿ. ಅನ್ನನೂ ಹೆಚ್ಗೆ ಬೇಡ. ಆಗ ನಿಮ್ ತೊಂದ್ರೆ ಕಡಿಮೆ ಆಗುತ್ತೆ ನೋಡಿ’ ಎನ್ನುತ್ತಾ ಅವರನ್ನು ಸಮಾಧಾನಪಡಿಸಿದೆ.

‘ಅಯ್ಯೋ ಬಿಡಿ ಡಾಕ್ಟ್ರೇ, ಈಗ ಫಂಕ್ಷನ್‌ಗಳಲ್ಲಿ ಪಲ್ಯ, ಕೋಸಂಬರಿಗೆಲ್ಲಾ ಜಾಗ ಎಲ್ಲಿದೆ? ಮಾಡಿದ್ರೂ ಚಮಚದ ಲೆಕ್ಕದಲ್ಲಿ ಬಡಿಸ್ತಾರೆ. ಬೇಕಾ ಅಂತ ಮತ್ತೊಮ್ಮೆ ಕೇಳೋದೇ ಇಲ್ಲ. ಹಂಗಾಗಿ, ಹೊಟ್ಟೆ ತುಂಬಬೇಕು ಅಂದ್ರೆ ಅನ್ನ ಜಾಸ್ತಿ ಉಣ್ಣಲೇಬೇಕು’ ಎನ್ನುತ್ತಾ ನಿಟ್ಟುಸಿರುಬಿಟ್ಟರು!

ಹೌದು, ಆ ಹಿರಿಯರು ಹೇಳಿದ್ದು ತುಂಬಾ ಗಂಭೀರವಾದ ವಿಚಾರವೆ. ಹಿಂದಿನ ಸಾಂಪ್ರದಾಯಿಕ ಊಟದ ಮನೆಗಳಿಗಿಂತ ಸಂಪೂರ್ಣ ಭಿನ್ನವಾಗಿರುವ ಇಂದಿನ ಭೋಜನಕೂಟಗಳು, ಪಾರ್ಟಿಗಳು ಆರೋಗ್ಯ ಕೆಡಿಸುತ್ತಿರುವುದು ವಾಸ್ತವ ಸಂಗತಿ. ಈಗಿನ ಕಾರ್ಯಕ್ರಮಗಳಲ್ಲಿ ಆರೋಗ್ಯಕಾರಿ ಊಟೋಪಚಾರದ ಮೂಲಕ ಅತಿಥಿಗಳನ್ನು ತೃಪ್ತಿಪಡಿಸುವುದು ಆದ್ಯತೆಯಾಗಿ ಉಳಿದಿಲ್ಲ. ಏನಿದ್ದರೂ ಬಗೆ ಬಗೆಯ, ಚಿತ್ರವಿಚಿತ್ರ ತಿನಿಸು, ಭಕ್ಷ್ಯಗಳನ್ನು ಉಣಬಡಿಸಿ ತಮ್ಮ ಪ್ರತಿಷ್ಠೆ ಪ್ರದರ್ಶಿಸುವುದಕ್ಕಷ್ಟೇ ಪೂರ್ಣ ಗಮನ. ಎಷ್ಟು ತರಹದ ಸಿಹಿ ತಿನಿಸುಗಳಿದ್ದವು, ಏನೇನು ಉಡುಗೊರೆ ಕೊಟ್ಟರು ಎಂಬುದಕ್ಕೇ ಹೆಚ್ಚು ಪ್ರಾಮುಖ್ಯ!

ಹಿಂದಿನ ಆ ಪಾರಂಪರಿಕ ಆಹಾರ, ಬಡಿಸುವ ಪದ್ಧತಿ ಆರೋಗ್ಯಕ್ಕೆ ಪೂರಕವಾಗಿದ್ದವು. ಊಟದ ಮನೆ ಯಾವುದೇ ಆಗಿರಲಿ, ಮೂರ್ನಾಲ್ಕು ವಿಧದ ಪಲ್ಯಗಳು, ಕೋಸಂಬರಿ, ಗೊಜ್ಜು ಕಡ್ಡಾಯವಾಗಿ ಇರುತ್ತಿದ್ದವು. ಇವುಗಳನ್ನು ಒಮ್ಮೆ ಬಡಿಸಿದ ನಂತರ ಪುನಃ ವಿಚಾರಿಸಲು ಬರುತ್ತಿದ್ದರು. ಹೊಟ್ಟೆ ಬಹುತೇಕ ತುಂಬಿದ ಮೇಲೆ ಕೊನೆಯಲ್ಲಷ್ಟೇ ಸಿಹಿಭಕ್ಷ್ಯಗಳ ಸರದಿ. ಅವೂ ಒಂದೋ ಎರಡೋ ಅಷ್ಟೆ. ಹಾಗಾಗಿ, ಊಟ ಮಾಡಿದ ನಂತರ ನಿಜಕ್ಕೂ ಹೊಟ್ಟೆ ತುಂಬಿದ ಸಂತೃಪ್ತಿ ಸಿಗುತ್ತಿತ್ತು.

ಆರೋಗ್ಯಕ್ಕೂ ಈ ಪರಿಯ ಊಟ ಹಿತಕರವಾಗಿ ಇರುತ್ತಿತ್ತು. ಆದರೆ ಈಗಿನ ಊಟ, ತಿಂಡಿಯಲ್ಲಿ ಹಿತಕ್ಕಿಂತ ಬಾಯಿರುಚಿಗೆ ಪ್ರಾಧಾನ್ಯ. ಸಿಹಿಯು ನಾರಿನಾಂಶವನ್ನು ನುಂಗುವುದರ ಜೊತೆಗೆ ಆರೋಗ್ಯವನ್ನೂ ನುಂಗುತ್ತಿದೆ!

ನಾರು (ಫೈಬರ್) ಎಂಬುದು ಆಹಾರದಲ್ಲಿ ಅತ್ಯಗತ್ಯವಾಗಿ ಇರಬೇಕಾದ ಅಂಶ. ಇದು ಸೊಪ್ಪು, ತರಕಾರಿ, ಹಣ್ಣು ಹಂಪಲು, ಇಡೀ ಧಾನ್ಯ, ಬೇಳೆ, ಕಾಳುಗಳು, ಸಿರಿಧಾನ್ಯಗಳಲ್ಲಿ ಹೆಚ್ಚಾಗಿ ಇರುತ್ತದೆ. ತಿನ್ನುವ ಆಹಾರದಲ್ಲಿ ಈ ನಾರಿನಾಂಶ ಅಧಿಕವಾಗಿದ್ದಾಗ ಮಾತ್ರ ಬೇಗನೆ ಹೊಟ್ಟೆ ತುಂಬಿದ ಅನುಭವವಾಗಿ ತೃಪ್ತಿಯ ಭಾವನೆ ಮೂಡುತ್ತದೆ. ಆಗ ಅನ್ನ ಇಲ್ಲವೇ ಸಿಹಿ ಪದಾರ್ಥಗಳನ್ನು ಹೆಚ್ಚಾಗಿ ತಿನ್ನಬೇಕೆನಿಸುವುದಿಲ್ಲ. ನಮ್ಮ ಆರೋಗ್ಯದ ಗುಟ್ಟು ಇರುವುದು ಇಲ್ಲೇ.

ಶರ್ಕರಪಿಷ್ಟ ಹೆಚ್ಚಿರುವ, ನಾರಿನಾಂಶ ತೀರಾ ಕಡಿಮೆಯಿರುವ ಸಿಹಿತಿನಿಸುಗಳು, ಅನ್ನದಂತಹ ಆಹಾರ ತ್ವರಿತವಾಗಿ ಜೀರ್ಣವಾಗುವುದರ ಜೊತೆಗೆ ಇವುಗಳಲ್ಲಿರುವ ಸಕ್ಕರೆ ಅಂಶವು ಹಸಿವನ್ನು ನಿಯಂತ್ರಿಸುವ ರಸದೂತಗಳ ಸಮತೋಲನ ತಪ್ಪಿಸಿ, ಮೆದುಳಿನಲ್ಲಿನ ಸಂಬಂಧಿಸಿದ ಕೇಂದ್ರಗಳನ್ನು ಪ್ರಚೋದಿಸುವುದರಿಂದ ಬೇಗ ಹಸಿವು ಕಾಡಲಾರಂಭಿಸುತ್ತದೆ.

ಮಧುಮೇಹಿಗಳಲ್ಲಂತೂ ಈ ಸಮಸ್ಯೆ ಮತ್ತಷ್ಟು ಹೆಚ್ಚು. ಹಾಗಾಗಿ, ಅವರಿಗೆ ಹಸಿವೂ ಜಾಸ್ತಿ, ಅದನ್ನು ತಣಿಸಲು ಸಿಹಿ ತಿನ್ನಬೇಕೆಂಬ ಕಡುಬಯಕೆಯೂ ತೀವ್ರ. ಇದಕ್ಕೆಲ್ಲಾ ಪರಿಹಾರ ಇರುವುದು ನಾರಿನ ಪದಾರ್ಥಗಳಲ್ಲಿ ಮಾತ್ರ.



ಆಹಾರದಲ್ಲಿ ನಾರು ಹೆಚ್ಚಿದ್ದಾಗ ಜೀರ್ಣಕ್ರಿಯೆ ನಿಧಾನವಾಗಿ ನಡೆಯುತ್ತದೆ. ಕರುಳಿನಲ್ಲಿ ಸಕ್ಕರೆಯ ಅಂಶ ನಿಧಾನವಾಗಿ ಹೀರಲ್ಪಡುತ್ತದೆ. ರಕ್ತದಲ್ಲಿನ ಸಕ್ಕರೆಯ ಮಟ್ಟ ಕಾಯ್ದುಕೊಳ್ಳುವಲ್ಲಿ ಇದು ಸಹಕಾರಿ. ಇದರಿಂದ ಬೇಗ ಹಸಿವೂ ಆಗದು, ಮತ್ತೆ ಮತ್ತೆ ತಿನ್ನಬೇಕೆಂಬ ಬಯಕೆಯೂ ಕಾಡದು. ಕರುಳಿನ ಸುಗಮ ಚಲನೆಯಿಂದ ಮಲಬದ್ಧತೆ ಉಂಟಾಗದು. ಆಗ ಕರುಳಿನ ಕ್ಯಾನ್ಸರ್‌ನಂತಹ ತೊಂದರೆಗಳು ತಪ್ಪುತ್ತವೆ. ಜೊತೆಗೆ ಜೀರ್ಣಕ್ರಿಯೆಯಲ್ಲಿ ಸಹಕರಿಸುವ ಕರುಳಿನ ಉಪಯುಕ್ತ ಬ್ಯಾಕ್ಟೀರಿಯಾ, ಯೀಸ್ಟ್‌ಗಳಿಗೆ ಈ ನಾರೇ ಆಹಾರ. ಹಾಗಾಗಿ, ನಾವು ತಿನ್ನುವ ಆಹಾರದಲ್ಲಿ ನಾರಿನಾಂಶ ಅಗತ್ಯ ಪ್ರಮಾಣದಲ್ಲಿ ಇರಲೇಬೇಕು.

ಮಧುಮೇಹ, ರಕ್ತದೊತ್ತಡ, ಪಾರ್ಶ್ವವಾಯು, ಬೊಜ್ಜು, ಸಂಧಿವಾತ, ಕೊಲೆಸ್ಟರಾಲ್ ತೊಂದರೆ, ಹೃದಯ ಸಂಬಂಧಿ ಸಮಸ್ಯೆಗಳು ಆತಂಕಕಾರಿಯಾಗಿ ಏರುತ್ತಿರುವ ಈ ಹೊತ್ತಿನಲ್ಲಿ, ಊಟದ ಮನೆಯ ಎಲೆಯಲ್ಲಿನ ಬಗೆಗಳನ್ನು ಪ್ರಜ್ಞಾಪೂರ್ವಕವಾಗಿ ಬದಲಿಸಿಕೊಳ್ಳಬೇಕಾದ ತುರ್ತಿದೆ. ಆಹಾರಶೈಲಿಯಲ್ಲಿ ಬದಲಾವಣೆ ಆಗದಿದ್ದರೆ ಆರೋಗ್ಯ ಹದಗೆಡುವುದು ನಿಶ್ಚಿತ.

ವಾಚಕರ ವಾಣಿ

ಆಡಳಿತ ವೈಫಲ್ಯದಿಂದ ಕಾಲ್ತುಳಿತ

ತಿರುಪತಿಯ ವೆಂಕಟೇಶ್ವರ ದೇವಸ್ಥಾನದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಆರು ಮಂದಿ ಭಕ್ತರು ಸಾವಿಗೀಡಾಗಿರುವುದು (ಪ್ರ.ವಾ., ಜ. 9) ದುಃಖಕರ ಸಂಗತಿ. ಸಾಮಾನ್ಯವಾಗಿ ಭಕ್ತರು ಮನಃಶಾಂತಿಗಾಗಿ, ಮನೋಭಿಲಾಷೆಯ ಸಿದ್ಧಿಗಾಗಿ, ಒಳ್ಳೆಯ ಆರೋಗ್ಯ, ದೀರ್ಘಾಯುಷ್ಯದಂತಹ ಕೋರಿಕೆಗಳೊಂದಿಗೆ ದೇವರಲ್ಲಿ ಮೊರೆ ಇಡಲು ನೂರಾರು, ಸಾವಿರಾರು ಮೈಲಿ ದೂರದಿಂದ ತಿರುಮಲ ಬೆಟ್ಟಕ್ಕೆ ಬರುವುದು ವಾಡಿಕೆ. ಆದರೆ ತಮ್ಮ ಜೀವ ಕಾಯುವಂತೆ ಮೊರೆ ಇಡಲು ಬಂದ ಪುಣ್ಯಕ್ಷೇತ್ರದಲ್ಲೇ ಪ್ರಾಣ ಕಳೆದುಕೊಂಡಿರುವುದು ವಿಪರ್ಯಾಸ.

ಸರ್ಕಾರದ ಆಡಳಿತ ವೈಫಲ್ಯ, ದೇಗುಲದ ಮಂಡಳಿಯ ಹೊಣೆಗೇಡಿತನವು ಮುಗ್ಧರ ಪ್ರಾಣಹಾನಿಗೆ ಕಾರಣವಾಗಿದೆ. ದೇಶದ ಅಲ್ಲಲ್ಲಿ ಆಗಾಗ್ಗೆ ಕಾಲ್ತುಳಿತ ಪ್ರಕರಣಗಳು ನಡೆಯುತ್ತಲೇ ಇರುವುದು ದುರದೃಷ್ಟಕರ. ಆಯಾ ಸಂದರ್ಭಗಳಲ್ಲಿ ಜನರನ್ನು ನಿಯಂತ್ರಿಸುವ ಹೊಣೆ ಹೊತ್ತವರ ಬೇಜವಾಬ್ದಾರಿ, ಕರ್ತವ್ಯಲೋಪ ಇಲ್ಲಿ ಎದ್ದು ಕಾಣುತ್ತದೆ.

ಶಾಂತಕುಮಾರ್, ಸರ್ಜಾಪುರ

ಕಾರ್ಯಾಂಗದ ಮೇಲೆ ಪರೋಕ್ಷ ಪ್ರಭಾವ?

ಮಂಡ್ಯ ಜಿಲ್ಲೆ ಮಳವಳ್ಳಿಯ ನ್ಯಾಯಾಲಯಕ್ಕೆ ಹೊಸ ಕಟ್ಟಡ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಯಲು ಸಹಕರಿಸಿರುವ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಅವರಿಗೆ ಸಚಿವ ಸ್ಥಾನ ಸಿಗಲಿ ಎಂದು ದೇವರಲ್ಲಿ ಹರಕೆ ಹೊತ್ತು, ಅವರು ಸಚಿವರಾದ ಬಳಿಕ ಖುದ್ದಾಗಿ ದೇವಸ್ಥಾನಕ್ಕೆ ತೆರಳಿ ಹರಕೆ ತೀರಿಸುವುದಾಗಿ ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಅವರು ಹೇಳಿರುವ ಸುದ್ದಿಯನ್ನು ಓದಿ ಸಖೇದಾಶ್ಚರ್ಯವಾಯಿತು. ಜನಪ್ರತಿನಿಧಿಯಾಗಿ ಆಯ್ಕೆಯಾದ ಮೇಲೆ ತನ್ನ ಕ್ಷೇತ್ರದ ಅಭಿವೃದ್ಧಿಗಾಗಿ ಮುತುವರ್ಜಿ ವಹಿಸಿ ಕೆಲಸ ಮಾಡಬೇಕಾದದ್ದು ಒಬ್ಬ ಶಾಸಕನ ಆದ್ಯ ಕರ್ತವ್ಯ. ಅದು ಆತನ ಶಾಸನಬದ್ಧ ಹೊಣೆಗಾರಿಕೆಯೂ ಹೌದು.

ಹರಕೆ ಹೊರುವುದು ವೈಯಕ್ತಿಕ ನಂಬಿಕೆ. ಆ ಬಗ್ಗೆ ಯಾರೂ ಆಕ್ಷೇಪಿಸಲಾಗದು. ಸಮಾಜಮುಖಿ ವ್ಯಕ್ತಿಯು ಒಬ್ಬರ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವುದು ತಪ್ಪಲ್ಲ. ಆದರೆ, ಹೀಗೆ ಹರಕೆ ಹೊರುತ್ತೇನೆಂದು ನ್ಯಾಯಮೂರ್ತಿಯೊಬ್ಬರು ಸಾರ್ವಜನಿಕವಾಗಿ ಹೇಳುವುದು ಎಷ್ಟು ಸಮಂಜಸ? ಸಂವಿಧಾನವೇ ಹೇಳುವಂತೆ, ಯಾರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಳ್ಳಬೇಕೆಂಬುದು ಮುಖ್ಯಮಂತ್ರಿಯವರ ವಿವೇಚನೆಗೆ ಬಿಟ್ಟ ಪರಮಾಧಿಕಾರ. ಹೀಗಿರುವಾಗ, ನ್ಯಾಯಮೂರ್ತಿಯೊಬ್ಬರು ಬಹಿರಂಗ ಸಭೆಯಲ್ಲಿ ಹೀಗೆ ಹೇಳುವುದರಿಂದ ಕಾರ್ಯಾಂಗವನ್ನು ಪರೋಕ್ಷವಾಗಿ ಪ್ರಭಾವಿಸಿದಂತೆ ಆಗುವುದಿಲ್ಲವೇ?

ಈಶ್ವರ ಹತ್ತಿ, ಕೊಪ್ಪಳ

ದಂಡದ ಹಣ ಸ್ವಯಂ ಕಡಿತಗೊಳ್ಳಲಿ

ಸಂಚಾರ ಪೊಲೀಸರು ಸಂಚಾರ ನಿಯಮ ಉಲ್ಲಂಘಿಸುವವರ ಫೋಟೊವನ್ನು ಮೊಬೈಲ್‌ನಲ್ಲಿ ಸೆರೆಹಿಡಿದು, ಅವರ ವಿರುದ್ಧ ಪ್ರಕರಣ ದಾಖಲಿಸುವ ಬಗ್ಗೆ ವಿ.ಪಾಂಡುರಂಗ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ (ವಾ.ವಾ., ಜ. 8). ದುರ್ದೈವವೆಂದರೆ, ಇಷ್ಟೆಲ್ಲಾ ಪ್ರಯತ್ನಿಸಿದರೂ ಜಾಗೃತರಾಗದ ಜನಸಾಮಾನ್ಯರು ಸಂಚಾರ ನಿಯಮಗಳನ್ನು ದಿನನಿತ್ಯ ಉಲ್ಲಂಘನೆ ಮಾಡುತ್ತಲೇ ಇರುವುದು ಕಂಡುಬರುತ್ತದೆ. ಇದು ವಿಪರ್ಯಾಸವೇ ಸರಿ.

ಇದಕ್ಕೆ ಪರಿಹಾರವೆಂದರೆ, ಯಾವುದೇ ವ್ಯಕ್ತಿಯು ವಾಹನವನ್ನು ಖರೀದಿಸುವಾಗ, ವಾಹನದ ಸಂಖ್ಯೆ ಮತ್ತು ಆ ಮಾಲೀಕರ ಬ್ಯಾಂಕ್ ಖಾತೆಗೆ ನೇರ ಸಂಪರ್ಕ ಇರುವಂತೆ ಸರ್ಕಾರ ನೋಡಿಕೊಳ್ಳಬೇಕು. ವಾಹನಗಳಿಗೆ ಟೋಲ್‌ಗೇಟ್ ಬಳಿ ಫಾಸ್ಟ್‌ಟ್ಯಾಗ್ ಮೂಲಕ ಸ್ವಯಂ ಹಣ ಕಡಿತಗೊಳಿಸುವಂತೆ ವಿಶೇಷ ಸಾಫ್ಟ್‌ವೇರ್ ಸೃಷ್ಟಿಸಿ, ಸಂಚಾರ ನಿಯಮ ಉಲ್ಲಂಘಿಸುವವರಿಂದ ದಂಡದ ಹಣವು ಸ್ವಯಂ ಕಡಿತಗೊಳ್ಳುವಂತೆ ಆದರೆ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಕಡಿಮೆಯಾಗಬಹುದು.

ಸಂಜು, ಹೆಂದೊರೆ, ಶಿರಾ

ಮೊದಲು ಹವ್ಯಕ ಮಾಣಿಗಳಿಗೆ ಮದುವೆ ಮಾಡಿಸಿ

ಬೆಂಗಳೂರಿನಲ್ಲಿ ಈಚೆಗೆ ವಿಶ್ವ ಹವ್ಯಕ ಸಮ್ಮೇಳನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಮೂರು ದಿನದ ಈ ಸಮ್ಮೇಳನದಲ್ಲಿ ಸಾವಿರಾರು ಜನ ಸೇರಿದ್ದರೂ ಗೊಂದಲ, ಅಶಿಸ್ತು ಎಲ್ಲೂ ಕಾಣಲಿಲ್ಲ. ಎಲ್ಲರಿಗೂ ಭೂರಿ ಭೋಜನದ ವ್ಯವಸ್ಥೆ ಇತ್ತು. ವಿಷಯ ಅದಲ್ಲ. ಕೊನೆಯ ದಿನ ಮಾತನಾಡಿದ ಇಬ್ಬರು ಸ್ವಾಮೀಜಿಗಳು ‘ಹವ್ಯಕರು 21ರೊಳಗೆ ಮದುವೆಯಾಗಿ, ಮೂರಕ್ಕೂ ಹೆಚ್ಚು ಮಕ್ಕಳನ್ನು ಹೊಂದಿ. ಮೂರಕ್ಕಿಂತ ಅಧಿಕ ಮಕ್ಕಳನ್ನು ಹೊಂದಿದವರು ಆ ಮಕ್ಕಳನ್ನು ಮಠಕ್ಕೆ ಒಪ್ಪಿಸಿದಲ್ಲಿ ಅವರನ್ನು ನಾವು ನೋಡಿಕೊಳ್ಳುತ್ತೇವೆ. ಹವ್ಯಕರು ಯಾವಾಗಲೂ ಬ್ರಾಹ್ಮಣರಾಗಿಯೇ ಉಳಿಯಬೇಕು’ ಎಂದು ಕರೆ ಕೊಟ್ಟರು. ಮಗನಿಗೆ 30 ವರ್ಷ ದಾಟಿದರೂ ಹೆಣ್ಣು ಸಿಗದೆ ಮದುವೆ ಮಾಡಿಸಲು ಸಾಧ್ಯವಾಗದ ತಾಯಿಯಾಗಿ ಸ್ವಾಮೀಜಿಗಳಿಗೆ ನನ್ನದೊಂದು ಪ್ರಶ್ನೆ- ನೀವೇನೋ ಮೂವರು ಮಕ್ಕಳನ್ನು ಹಡೆಯಿರಿ ಎಂದು ತಾಯಂದಿರಿಗೆ ಹೇಳುತ್ತೀರಿ. ಮೂರಲ್ಲ ಆರು ಮಕ್ಕಳನ್ನು ಹಡೆಯಲೂ ನಾವು ಸಿದ್ಧರಿದ್ದೇವೆ. ಒಂದು ವೇಳೆ ಅವು ಗಂಡುಮಕ್ಕಳಾದರೆ ನಾವು ಅವರಿಗೆ ಎಲ್ಲಿಂದ ಹೆಣ್ಣು ತರುವುದು? ಆಗ ಆ ಆರೂ ಮಕ್ಕಳನ್ನು ಮಠಕ್ಕೇ ಒಪ್ಪಿಸಬೇಕಷ್ಟೆ. ಅದರ ಬದಲು, ಹವ್ಯಕ ಮಾಣಿಗಳಿಗೆ ಮದುವೆ ಮಾಡಿಸುತ್ತೇವೆ ಎಂದು ಕರೆ ಕೊಟ್ಟಿದ್ದರೆ ನಿಮ್ಮನ್ನು ನಾವು ಮೆಚ್ಚಿಕೊಳ್ಳುತ್ತಿದ್ದೆವು.

ವೇದಿಕೆಯಲ್ಲಿದ್ದ ಒಬ್ಬರೇ ಒಬ್ಬರು ಸ್ವಾಮೀಜಿ ಈ ಬಗ್ಗೆ ಚಕಾರವೆತ್ತಲಿಲ್ಲ. ಇನ್ನಾದರೂ ಮಠದ ಸ್ವಾಮೀಜಿಗಳು ಎಚ್ಚೆತ್ತು, ಹವ್ಯಕ ಹುಡುಗರಿಗೆ ಮದುವೆ ಮಾಡಿಸಲಿ. ಆಮೇಲೆ ಆ ಯುವ ಜೋಡಿಗಳಿಗೆ ‘ಗೃಹಸ್ಥಾಶ್ರಮಕ್ಕೆ ಕಾಲಿಟ್ಟ ನೀವೆಲ್ಲಾ ಹೆಚ್ಚು ಹೆಚ್ಚು ಮಕ್ಕಳನ್ನು ಹೊಂದುವ ಮೂಲಕ ಬ್ರಾಹ್ಮಣ ಸಂತತಿ ವೃದ್ಧಿ ಮಾಡಿ’ ಎಂದು ಕರೆ ಕೊಡಲಿ.

ಸಹನಾ ಕಾಂತಬೈಲು, ಬಾಲಂಬಿ, ಮಡಿಕೇರಿ

ಡಿನ್ನರ್ ಪಾರ್ಟಿ!

ಆಡಳಿತ
ನಡೆಸುವುದೊಂದು ಪಾರ್ಟಿ
ವಿರೋಧ
ವ್ಯಕ್ತಪಡಿಸುವುದೊಂದು ಪಾರ್ಟಿ,
ಗೆಳೆತನಕ್ಕೊಂದು ಪಾರ್ಟಿ,
ಗುಸುಗುಸು ಹುಟ್ಟಿಸುವುದು
ಪಾರ್ಟಿಯೊಳಗಿನ ಪಾರ್ಟಿ
ಡಿನ್ನರ್ ಪಾರ್ಟಿ!

ಮ.ಗು.ಬಸವಣ್ಣ
ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

12ರಿಂದ ಆಸ್ಟ್ರೇಲಿಯನ್ ಓಪನ್: 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿ ಜೊಕೊವಿಚ್

ಸಿನ್ನರ್‌ಗೆ ಮೊದಲ ಸುತ್ತಿನಲ್ಲಿ ಜೆರಿ ಸವಾಲು

ಮೆಲ್ಬರ್ನ್ (ಎಎಫ್‌ಪಿ/ಎಪಿ): ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಅವರು ವರ್ಷದ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿಯಾಗಿರುವ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಬಿರುಸಿನ ಹೊಡೆತಗಳ ಆಟಗಾರ ನಿಕೋಲಸ್ ಜೆರಿ (ಚಿಲಿ) ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.

ಗುರುವಾರ ಮಾರ್ಗರೇಟ್ ಕೋರ್ಟ್ ಅರೇನಾದಲ್ಲಿ ಡ್ರಾ ಸಮಾರಂಭ ನಡೆಯಿತು. ಪುರುಷರ ಸಿಂಗಲ್ಸ್‌ನ ಅಗ್ರ ಶ್ರೇಯಾಂಕದ ಸಿನ್ನರ್ ಅವರು ಡ್ರಾದ ಒಂದು ಭಾಗದಲ್ಲಿದ್ದರೆ, ಇನ್ನೊಂದು ಭಾಗದಲ್ಲಿ ಹತ್ತು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ ಇದ್ದಾರೆ. ಅವರಿಬ್ಬರು ಫೈನಲ್ ತಲುಪಿದಷ್ಟೇ ಮುಖಾಮುಖಿಯಾಗಲಿದ್ದಾರೆ.

ಕಳೆದ ವರ್ಷ ಸೆಮಿಫೈನಲ್‌ನಲ್ಲಿ ಇಟಲಿಯ ಸಿನ್ನರ್ ಅವರು ಸರ್ಬಿಯಾದ ಜೊಕೊವಿಚ್ ಅವರನ್ನು ಸೋಲಿಸಿದ್ದರಲ್ಲದೇ, ನಂತರ ಫೈನಲ್‌ನಲ್ಲಿ ಹಿನ್ನಡೆಯಿಂದ ಚೇತರಿಸಿ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಅವರನ್ನು ಮಣಿಸಿ ಚೊಚ್ಚಲ ಗ್ರ್ಯಾನ್‌ಸ್ಲಾಮ್ ಕಿರೀಟ ಧರಿಸಿದ್ದರು.

ವಿಶ್ವದ ಅಗ್ರಮಾನ್ಯ ಆಟಗಾರ ಸಿನ್ನರ್ ಅವರಿಗೆ ಈ ಬಾರಿ ಕ್ವಾರ್ಟರ್ ಫೈನಲ್‌ನಲ್ಲಿ ಗ್ರೀಸ್‌ನ ಸ್ಟಿಫಾನೊಸ್ ಸಿಟ್ಸಿಪಾಸ್ ಅಥವಾ ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೋರ್ ಮತ್ತು ಸೆಮಿಫೈನಲ್‌ನಲ್ಲಿ ಮೆಡ್ವೆಡೇವ್ (ರಷ್ಯಾ) ಅವರ ಸವಾಲು ಎದುರಾಗುವ ಸಾಧ್ಯತೆಯಿದೆ.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ಜೊಕೊವಿಚ್ ಅವರು ಆರಂಭಿಕ ಸುತ್ತಿನಲ್ಲಿ ಅಮೆರಿಕದ ವೈಲ್ಡ್‌ಕಾರ್ಡ್ ಆಟಗಾರ ನಿಶೇಶ್ ಬಸವರೆಡ್ಡಿ ಅವರನ್ನು ಎದುರಿಸಲಿದ್ದಾರೆ. 37 ವರ್ಷ ವಯಸ್ಸಿನ ಜೊಕೊವಿಚ್, ಕ್ವಾರ್ಟರ್ ಫೈನಲ್ ತಲುಪಿದಲ್ಲಿ ಮೂರನೇ ಕ್ರಮಾಂಕದ ಕಾರ್ಲೋಸ್ ಅಲ್ಕರಾಜ್ ಸಂಭವನೀಯ ಎದುರಾಳಿಯಾಗಬಹುದು. ಅವರನ್ನು ದಾಟಿ ಸೆಮಿಫೈನಲ್‌ಗೆ ಮುನ್ನಡೆದರೆ ಎರಡನೇ ಕ್ರಮಾಂಕದ ಅಲೆಕ್ಸಾಂಡರ್ ಜ್ವೆರೇವ್ ಎದುರಾಗುವ ಸಾಧ್ಯತೆಯಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ ಸತತ ಮೂರನೇ ಪ್ರಶಸ್ತಿ ಗೆಲ್ಲುವ ಯತ್ನದಲ್ಲಿರುವ ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಅವರಿಗೆ ಮೊದಲ ಸುತ್ತಿನಲ್ಲಿ 2017ರ ಅಮೆರಿಕ ಓಪನ್ ಚಾಂಪಿಯನ್ ಸ್ಲೋವನ್ ಸ್ಟೀಫನ್ಸ್ ಎದುರಾಳಿ ಆಗಿದ್ದಾರೆ. ಭರವಸೆಯ ಆಟಗಾರ್ತಿಯರಾದ, 17 ವರ್ಷ ವಯಸ್ಸಿನ ಮಿಯೆರಾ ಆಂಡ್ರೀವಾ ಮತ್ತು ಕಳೆದ ಸಲದ ರನ್ನರ್ ಅಪ್ ಝೆಂಗ್ ಕ್ವಿನ್ವೆನ್ ಕೂಡ ಅರಿನಾ ಅವರಿರುವ ಡ್ರಾನಲ್ಲೇ ಇದ್ದಾರೆ.

ಮೆಲ್ಬರ್ನ್ ಪಾರ್ಕ್‌ಗನಲ್ಲಿ 2024ರ ಫೈನಲ್‌ನಲ್ಲಿ ಸಬಲೆಂಕಾ 6-3, 6-2 ರಿಂದ ಚೀನಾದ ಝೆಂಗ್ ಕ್ವಿನ್‌ವೆನ್ ಅವರನ್ನು ಸೋಲಿಸಿ ಸತತ ಎರಡನೇ ಬಾರಿ ಚಾಂಪಿಯನ್ ಆಗಿದ್ದರು. ಸ್ವಿಜರ್ಲೆಂಡ್‌ನ ಮಾರ್ಟಿನಾ ಹಿಂಗಿಸ್ ಕೊನೆಯ ಬಾರಿ ಇಲ್ಲಿ ಸತತ ಮೂರು ವರ್ಷ (1997-99) ಚಾಂಪಿಯನ್ ಆಗಿದ್ದರು. ನಂತರ ಆ ಗೌರವಕ್ಕೆ ಪಾತ್ರರಾಗಲು ಸಬಲೆಂಕಾ ಯತ್ನಿಸುತ್ತಿದ್ದಾರೆ. ಕಳೆದ ವಾರವಷ್ಟೇ ಬ್ರಿಸ್ಬೇನ್ ಓಪನ್ ಗೆದ್ದಿರುವ ಸಬಲೆಂಕಾ ಇಲ್ಲಿಗೆ ಪೂರ್ಣ ವಿಶ್ವಾಸದೊಡನೆ ಬಂದಿದ್ದಾರೆ.

ಮೂರನೇ ಶ್ರೇಯಾಂಕದ ಕೊಕೊ ಗಾಫ್ (ಅಮೆರಿಕ) ಅವರು ಸಬಲೆಂಕಾ ಅವರಿಗೆ ಸಂಭವನೀಯ ಸೆಮಿಫೈನಲ್ ಎದುರಾಳಿ ಆಗಬಹುದು. ಗಾಫ್ ಅವರಿಗೆ ಮೊದಲ ಸುತ್ತಿನಲ್ಲಿ ಆಸ್ಟ್ರೇಲಿಯನ್ ಓಪನ್ ಮಾಜಿ ಚಾಂಪಿಯನ್ ಸೋಫಿಯಾ ಕೆನಿನ್ ಎದುರಾಳಿಯಾಗಿದ್ದಾರೆ. ನಾಲ್ಕು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ನವೊಮಿ ಒಸಾಕಾ ಮತ್ತು ಏಳನೇ ಶ್ರೇಯಾಂಕದ ಜೆಸಿಕಾ ಪೆಗುಲಾ ಸಹ ಇದೇ ಡ್ರಾನಲ್ಲಿ ಇದ್ದಾರೆ.

ಎರಡನೇ ಶ್ರೇಯಾಂಕದ ಇಗಾ ಶ್ವಾಂಟೆಕ್ ಮತ್ತು 2022ರ ವಿಂಬಲ್ಡನ್ ಚಾಂಪಿಯನ್ ಎಲೆನಾ ರಿಬಾಕಿನಾ 'ಡ್ರಾ'ದ ಇನ್ನೊಂದು ಭಾಗದಲ್ಲಿದ್ದಾರೆ.



ಮೆಲ್ಬರ್ನ್‌ನಲ್ಲಿ ಗುರುವಾರ ನಡೆದ ಆಸ್ಟ್ರೇಲಿಯನ್ ಓಪನ್ ಮುಖ್ಯ ಸುತ್ತಿನ 'ಡ್ರಾ' (ಮುಖಾಮುಖಿ ನಿರ್ಧರಿಸುವ) ಸಮಾರಂಭದಲ್ಲಿ ಹಾಲಿ ಚಾಂಪಿಯನ್ನರಾದ ಬೆಲಾರಸ್‌ನ ಅರಿನಾ ಸಬಲೆಂಕಾ (ಎಡಗಡೆ) ಮತ್ತು ಇಟಲಿಯ ಯಾನಿಕ್ ಸಿನ್ನರ್ ಅವರು ಟ್ರೋಫಿಯೊಂದಿಗೆ ಕಾಣಿಸಿಕೊಂಡಿದ್ದು ಹೀಗೆ... ಎಎಫ್‌ಪಿ ಚಿತ್ರ

ನಗಾಲ್‌ಗೆ ಮಚಾಕ್ ಎದುರಾಳಿ



ನಗಾಲ್

ಮೆಲ್ಬರ್ನ್ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಸುಮಿತ್ ನಗಾಲ್ ಅವರು ಭಾನುವಾರ ಇಲ್ಲಿ ಆರಂಭವಾಗುವ ಆಸ್ಟ್ರೇಲಿಯನ್ ಓಪನ್ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಪಂದ್ಯದಲ್ಲಿ ಝೆಕ್ ರಿಪಬ್ಲಿಕ್‌ನ ಥಾಮಸ್ ಮಚಾಕ್ ಅವರನ್ನು ಎದುರಿಸಲಿದ್ದಾರೆ.

27 ವರ್ಷ ವಯಸ್ಸಿನ ನಗಾಲ್ ಎಟಿಪಿ ಕ್ರಮಾಂಕಪಟ್ಟಿಯಲ್ಲಿ 96ನೇ ಸ್ಥಾನದಲ್ಲಿದ್ದು, 104 ಅಗ್ರ ರ‍್ಯಾಂಕಿನ ಆಟಗಾರರಲ್ಲಿ ಒಬ್ಬರಾಗಿರುವ ಕಾರಣ ನೇರವಾಗಿ ಪ್ರಧಾನ ಸುತ್ತಿಗೆ ಅರ್ಹತೆ ಪಡೆದಿದ್ದಾರೆ.

ಕಳೆದ ಬಾರಿ ಈ ಚಾಂಪಿಯನ್‌ಷಿಪ್‌ನಲ್ಲಿ ಆಡುವಾಗ 137ನೇ ಕ್ರಮಾಂಕ ಹೊಂದಿದ್ದ ಅವರು ಮೊದಲ ಸುತ್ತಿನಲ್ಲಿ 27ನೇ ಕ್ರಮಾಂಕದ ಅಲೆಕ್ಸಾಂಡರ್ ಬುಬ್ಲಿಕ್ (ಕಜಕಸ್ತಾನ) ಅವರನ್ನು ಮಣಿಸಿ ಗಮನಸೆಳೆದಿದ್ದರು. ಆದರೆ ಎರಡನೇ ಸುತ್ತಿನಲ್ಲಿ ಚೀನಾದ ಜುನ್‌ಚೆಂಗ್ ಶಾಂಗ್ ಅವರಿಗೆ ಮಣಿದಿದ್ದರು.

ಪ್ರಧಾನ ಸುತ್ತಿಗೆ ಲೆಬನಾನ್ ಆಟಗಾರ



ಹದಿ ಹಬೀಬ್

ಮೆಲ್ಬರ್ನ್: ಹದಿ ಹಬೀಬ್ ಅವರು ಓಪನ್ ಯುಗ ಆರಂಭವಾದ ನಂತರ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಪುರುಷರ ಸಿಂಗಲ್ಸ್ ಪ್ರಧಾನ ಸುತ್ತಿನಲ್ಲಿ ಸ್ಥಾನ ಪಡೆದ ಲೆಬನಾನ್‌ನ ಮೊದಲ ಆಟಗಾರ ಎನಿಸಿದ್ದಾರೆ.

ಮೆಲ್ಬರ್ನ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಅರ್ಹತಾ ಟೂರ್ನಿಯಲ್ಲಿ ಅವರು ಮೂರು ಪಂದ್ಯಗಳನ್ನು ಗೆದ್ದುಕೊಂಡಿದ್ದಾರೆ. ಗುರುವಾರ ನಡೆದ ಮೂರನೇ ಪಂದ್ಯದಲ್ಲಿ ಅವರು ಫ್ರಾನ್ಸ್‌ನ ಕ್ಲೆಮೆಂಟ್ ಚಿಡೆಕ್ ಅವರನ್ನು 6-4, 3-6, 7-6 (8) ರಿಂದ ಸೋಲಿಸಿದರು. 26 ವರ್ಷ ವಯಸ್ಸಿನ ಹಬೀಬ್ ಕಳೆದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕೂಡ ಆಡಿದ್ದರು. ಆದರೆ ಅವರು ಮೊದಲ ಸುತ್ತಿನಲ್ಲಿ ಕಾರ್ಲೋಸ್ ಅಲ್ಕರಾಜ್‌ಗೆ ಸೋತಿದ್ದರು. ಸ್ಪೇನ್‌ನ ಆಟಗಾರ ಆ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಪ್ರತೀಕ್, ಪ್ರಿಯಾಂಕಾ ಸಾರಥ್ಯ

ಕೆಕೆಎಫ್‌ಐನಿಂದ ಭಾರತ ಪುರುಷ, ಮಹಿಳಾ ತಂಡ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತೀಕ್ ವೈಕರ್ ಮತ್ತು ಪ್ರಿಯಾಂಕಾ ಇಂಗ್ಳೆ ಅವರು ದೆಹಲಿಯಲ್ಲಿ ನಡೆಯಲಿರುವ ಚೊಚ್ಚಲ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ ಕ್ರಮವಾಗಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳ ನಾಯಕತ್ವ ವಹಿಸಲಿದ್ದಾರೆ.

ಇದೇ 13 ರಿಂದ 19ರವರೆಗೆ ಟೂರ್ನಿಯು ನಡೆಯಲಿದೆ. ಪುರುಷರ 20 ಮತ್ತು ಮಹಿಳೆಯರ 19 ತಂಡಗಳು ಭಾಗವಹಿಸಲಿವೆ. ಒಟ್ಟು 23 ದೇಶಗಳ ತಂಡಗಳು ಸ್ಪರ್ಧೆಯಲ್ಲಿವೆ ಎಂದು ಭಾರತ ಕೊಕ್ಕೊ ಫೆಡರೇಷನ್ (ಕೆಕೆಎಫ್‌ಐ) ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತ ಪುರುಷರ ತಂಡದ ನಾಯಕ ಪ್ರತೀಕ್ ಅವರು ಏಕಲವ್ಯ ಪ್ರಶಸ್ತಿ ವಿಜೇತರಾಗಿದ್ದಾರೆ. 2016ರಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಅವರು ತಮ್ಮ 8ನೇ ವಯಸ್ಸಿನಲ್ಲಿಯೇ ಕೊಕ್ಕೊ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡರು. ತಮ್ಮ ಪಕ್ಕದ ಮನೆಯ ಹುಡುಗನೊಬ್ಬ ಆಡುವುದನ್ನು ನೋಡಿ ಆಕರ್ಷಿತರಾಗಿದ್ದರು.

ಪ್ರತೀಕ್ ಕಂಪ್ಯೂಟರ್ ವಿಜ್ಞಾನ ಮತ್ತು ಹಣಕಾಸು ವಿಷಯಗಳಲ್ಲಿ ಪದವಿ ಗಳಿಸಿದ್ದಾರೆ. ಅಲ್ಟಿಮೇಟ್ ಕೊಕ್ಕೊ ಲೀಗ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಗಿದ್ದ ತೆಲುಗು ಯೋಧಾಸ್ ತಂಡದಲ್ಲಿ ಅವರು ಆಡಿದ್ದರು. 56ನೇ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಚಿನ್ನ ಗೆದ್ದ ಮಹಾರಾಷ್ಟ್ರ ತಂಡದಲ್ಲಿಯೂ ಅವರು ಆಡಿದ್ದರು.

ಮಹಿಳೆಯರ ತಂಡದ ನಾಯಕಿ ಪ್ರಿಯಾಂಕಾ ಅವರು ಕಳೆದ 15 ವರ್ಷಗಳಿಂದ 23 ರಾಷ್ಟ್ರೀಯ ಟೂರ್ನಿಗಳಲ್ಲಿ ಆಡಿದ್ದಾರೆ. ಸಬ್ ಜೂನಿಯರ್ ವಿಭಾಗದಲ್ಲಿ ಇಳಾ ಪ್ರಶಸ್ತಿ, ಸೀನಿಯರ್ ರಾಷ್ಟ್ರೀಯ ವಿಭಾಗದಲ್ಲಿ ರಾಣಿ ಲಕ್ಷ್ಮೀಬಾಯಿ ಪ್ರಶಸ್ತಿ ಮತ್ತು 4ನೇ ಏಷ್ಯನ್ ಕೊಕ್ಕೊ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿದ್ದರು. ಆಲ್‌ರೌಂಡರ್ ಆಗಿರುವ ಅವರು ಎಂ.ಕಾಮ್ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮುಂಬೈನ ಆದಾಯ ತೆರಿಗೆ ಇಲಾಖೆಯಲ್ಲಿ ಅವರು ಉದ್ಯೋಗಿಯಾಗಿದ್ದಾರೆ. ತಂಡಗಳಿಗೆ ಸುಮಿತ್ ಭಾಟಿಯಾ ಅವರು ಕೋಚ್ ಆಗಿದ್ದಾರೆ.

ತಂಡಗಳು: ಪುರುಷರು: ಪ್ರತೀಕ್ ವೈಕರ್ (ನಾಯಕ), ಪ್ರಭನಿ ಸಬರ್, ಸಚಿನ್ ಭಾರ್ಗವ, ಸುಯಶ್ ಗಾರ್ಗಟೆ, ರಾಮ್ಜಿ ಕಶ್ಯಪ್, ಶಿವ ಪೊತಿರ್ ರೆಡ್ಡಿ, ಆದಿತ್ಯ ಗಣಪುಲೆ, ಎಂ.ಕೆ. ಗೌತಮ್, ಬಿ. ನಿಖಿಲ್, ಆಕಾಶಕುಮಾರ್, ವಿ. ಸುಬ್ರಮಣಿ, ಸುಮನ್ ಬರ್ಮನ್, ಅನಿಕೇತ್ ಪೋತೆ ಎಸ್. ರಾಕೆಸನ್ ಸಿಂಗ್. ಮೀಸಲಿಟ್ಟ ಆಟಗಾರರು: ಅಕ್ಷಯ್ ಬಾಂಗರೆ, ರಾಜವರ್ಧನ್ ಶಂಕರ್ ಪಾಟೀಲ, ವಿಶ್ವನಾಥ್ ಜಾನಕಿರಾಮ.

ಮಹಿಳೆಯರು: ಪ್ರಿಯಾಂಕಾ ಇಂಗ್ಳೆ (ನಾಯಕಿ), ಅಶ್ವಿನಿ ಶಿಂಧೆ, ರೇಷ್ಮಾ ರಾಥೋಡ್, ಭಿಲಾರ್ ದೇವಜಿಭಾಯ್, ನಿರ್ಮಲಾ ಭಾಟಿ, ನೀತಾದೇವಿ, ಆರ್. ಚೈತ್ರಾ, ಶುಭಶ್ರೀ ಸಿಂಗ್, ಮಗೈ ಮಾಜಿ, ಅನ್ಶು ಕುಮಾರಿ, ವೈಷ್ಣವಿ ಬಜರಂಗ್, ನಸ್ರೀನ್ ಶೇಖ್, ಮೀನು, ಮೋನಿಕಾ, ನಾಜಿಯಾ ಬೀಬಿ, ಮಿಸಲಿಟ್ಟ ಆಟಗಾರರು: ಸಂಪದಾ ಮೋರೆ, ರಿತೀಕಾ ಸಿಲೊರಿಯಾ, ಪ್ರಿಯಾಂಕಾ ಭೋಪಿ.

ಮಂದಾನ ಬಳಗಕ್ಕೆ ಐರ್ಲೆಂಡ್ ಸವಾಲು

ರಾಜ್‌ಕೋಟ್ (ಪಿಟಿಐ): ಸ್ಮೃತಿ ಮಂದಾನ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಶುಕ್ರವಾರ ಐರ್ಲೆಂಡ್ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಕಣಕ್ಕಿಳಿಯಲಿದೆ.

ಈಚೆಗೆ ವೆಸ್ಟ್ ಇಂಡೀಸ್ ಎದುರಿನ ಸರಣಿ ಜಯಿಸಿ ಆತ್ಮವಿಶ್ವಾಸದಲ್ಲಿರುವ ಭಾರತ ತಂಡವು ಐರ್ಲೆಂಡ್ ಬಳಗದ ವಿರುದ್ಧವೂ ಜಯಗಳಿಸುವ ನೆಚ್ಚಿನ ತಂಡವಾಗಿದೆ. ವಿಂಡೀಸ್ ಎದುರಿನ ಏಕದಿನ ಸರಣಿಯಲ್ಲಿ 3-0 ಮತ್ತು ಟಿ20 ಸರಣಿಯಲ್ಲಿ 2-1ರಿಂದ ಭಾರತ ಜಯಿಸಿತ್ತು. ಸ್ಮೃತಿ ಏಕದಿನ ಸರಣಿಯಲ್ಲಿ 148 ಮತ್ತು ಟಿ20 ಸರಣಿಯಲ್ಲಿ 193 ರನ್ ಸೇರಿಸಿದ್ದರು. ಚುಟುಕು ಮಾದರಿಯಲ್ಲಿ ಸತತ ಮೂರು ಅರ್ಧಶತಕಗಳನ್ನು ಗಳಿಸಿದ್ದರು. ಇದೇ ಮೊದಲ ಸಲ ಭಾರತ ಮತ್ತು ಐರ್ಲೆಂಡ್ ತಂಡಗಳು ದ್ವಿಪಕ್ಷೀಯ ಸರಣಿಯಲ್ಲಿ ಆಡುತ್ತಿವೆ.



ಜೆಮಿಮಾ ರಾಡ್ರಿಗಸ್ ಮತ್ತು ಸ್ಮೃತಿ ಮಂದಾನ

ಹರ್ಮನ್‌ಪ್ರೀತ್ ಕೌರ್ ಅವರು ವಿಶ್ರಾಂತಿ ಪಡೆದಿರುವುದರಿಂದ ಸ್ಮೃತಿ ಅವರು ತಂಡವನ್ನು ಮುನ್ನಡೆಸುವರು. ಮಧ್ಯಮವೇಗಿ ರೇಣುಕಾ ಸಿಂಗ್ ಅವರೂ ವಿಶ್ರಾಂತಿಗೆ ತೆರಳಿದ್ದಾರೆ. ಇದರಿಂದಾಗಿ ಬೌಲಿಂಗ್ ವಿಭಾಗದ ಹೊಣೆಯು ತಿತಾಸ್ ಸಾಧು ಮತ್ತು ಸೈಮಾ ಥ್ಯಾಕರ್ ಅವರ ಮೇಲೆ ಬೀಳುವುದು. ಸ್ಪಿನ್ನರ್, ಉಪನಾಯಕಿ ದೀಪ್ತಿ ಶರ್ಮಾ ಅವರೂ ಜೊತೆ ನೀಡಲಿದ್ದಾರೆ.

ಉತ್ತಮ ಲಯದಲ್ಲಿರುವ ಹರ್ಲೀನ್ ಡಿಯೊಲ್, ಪ್ರತಿಕಾ ರಾವಳ್ ಮತ್ತು ಜೆಮಿಮಾ ರಾಡ್ರಿಗಸ್ ತಂಡದಲ್ಲಿದ್ದಾರೆ.

ಗ್ಯಾಬಿ ಲೂಯಿಸ್ ನಾಯಕತ್ವದ ಐರ್ಲೆಂಡ್ ಇದುವರೆಗೆ (12 ಪಂದ್ಯ) ಭಾರತದ ಎದುರು ಏಕದಿನ ಕ್ರಿಕೆಟ್‌ನಲ್ಲಿ ಗೆದ್ದಿಲ್ಲ. 2023ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಉಭಯ ತಂಡಗಳು ಕೊನೆಯ ಬಾರಿಗೆ ಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಭಾರತ ಜಯಿಸಿತ್ತು. ಗ್ಯಾಬಿ ಅವರಿಗೆ ಇದು 50ನೇ ಅಂತರರಾಷ್ಟ್ರೀಯ ಪಂದ್ಯವಾಗಲಿದೆ.

ಮೂರು ಪಂದ್ಯಗಳ ಈ ಸರಣಿಯು ಐಸಿಸಿ ಚಾಂಪಿಯನ್‌ಷಿಪ್ ಭಾಗವಾಗಿದೆ.

ಪಂದ್ಯ ಆರಂಭ: ಬೆಳಿಗ್ಗೆ 11
ನೇರಪ್ರಸಾರ: ಸ್ಪೋರ್ಟ್ಸ್ 18

ವಿಜಯ್ ಹಜಾರೆ ಟ್ರೋಫಿ: ಮೊಹಮ್ಮದ್ ಶಮಿಗೆ ಮೂರು ವಿಕೆಟ್

ಕ್ವಾರ್ಟರ್‌ಫೈನಲ್‌ಗೆ ಹರಿಯಾಣ, ರಾಜಸ್ಥಾನ

ವಡೋದರ (ಪಿಟಿಐ): ಭಾರತ ತಂಡಕ್ಕೆ ಮರಳುವ ಛಲದಲ್ಲಿರುವ ವೇಗಿ ಮೊಹಮ್ಮದ್ ಶಮಿ (61ಕ್ಕೆ3) ಅವರು ಉತ್ತಮವಾಗಿ ಬೌಲಿಂಗ್ ಮಾಡಿದರೂ ಬಂಗಾಳ ತಂಡಕ್ಕೆ ಹರಿಯಾಣ ವಿರುದ್ಧ ಜಯಿಸಲು ಸಾಧ್ಯವಾಗಲಿಲ್ಲ.

ಮೋತಿಬಾಗ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಹರಿಯಾಣ ತಂಡವು ಪಾರ್ಥ ವತ್ಸ (62; 77ಎ, 4X6 ಹಾಗೂ 33ಕ್ಕೆ3) ಆಲ್‌ರೌಂಡ್ ಆಟದ ಬಲದಿಂದ 72 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಬಂಗಾಳ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇನಿಂಗ್ಸ್ ಆರಂಭದಲ್ಲಿ ಬಂಗಾಳ ತಂಡದ ಶಮಿ ಮತ್ತು ಮುಕೇಶ್ ಕುಮಾರ್ ಅವರ ದಾಳಿಯ ಮುಂದೆ ಹರಿಯಾಣ ಆಘಾತ ಅನುಭವಿಸಿತು. ಪಾರ್ಥ ಮತ್ತು ನಿಶಾಂತ್ ಸಿಂಧು (64; 67ಎ, 4X6, 6X1) ಅವರಿಬ್ಬರು 4ನೇ ವಿಕೆಟ್ ಜೊತೆಯಾಟದಲ್ಲಿ 84 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 298 ರನ್ ಗಳಿಸಿತು. ಅದಕ್ಕುತ್ತರವಾಗಿ ಬಂಗಾಳ ತಂಡವು 43.1 ಓವರ್‌ಗಳಲ್ಲಿ 226 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಪೊರೆಲ್ (57; 78ಎ, 4X6) ಅರ್ಧಶತಕ ಗಳಿಸಿದರು.



ಮೂರು ವಿಕೆಟ್ ಪಡೆದ ಬಂಗಾಳ ತಂಡದ ವೇಗಿ ಮೊಹಮ್ಮದ್ ಶಮಿ

ಕ್ವಾರ್ಟರ್‌ಫೈನಲ್ ಪಂದ್ಯಗಳು
ಮಹಾರಾಷ್ಟ್ರ–ಪಂಜಾಬ್
ಕರ್ನಾಟಕ–ಬರೋಡಾ
ದಿನಾಂಕ: ಜನವರಿ 11
ಗುಜರಾತ್–ಹರಿಯಾಣ
ವಿದರ್ಭ–ರಾಜಸ್ಥಾನ
ದಿನಾಂಕ: ಜನವರಿ 12

ಕೊತಂಬಿ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ರಾಜಸ್ಥಾನ ತಂಡವು 19 ರನ್‌ಗಳಿಂದ ತಮಿಳುನಾಡು ವಿರುದ್ಧ ಜಯಗಳಿಸಿತು.

ಟಾಸ್ ಗೆದ್ದ ತಮಿಳುನಾಡು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಭಿಜೀತ್ ಥೋಮರ್ (111; 125ಎ, 4X12, 6X4) ಅವರ ಶತಕದ ನೆರವಿನಿಂದ ರಾಜಸ್ಥಾನ ತಂಡವು 47.3 ಓವರ್‌ಗಳಲ್ಲಿ 267 ರನ್ ಗಳಿಸಿತು. ತಮಿಳುನಾಡು ತಂಡದ ಸ್ಪಿನ್ನರ್ ವರುಣ ಚಕ್ರವರ್ತಿ ಐದು ವಿಕೆಟ್ ಗೊಂಚಲು ಗಳಿಸಿದರು. ಗುರಿ ಬೆನ್ನಟ್ಟಿದ ತಮಿಳುನಾಡು ತಂಡವು 47.1 ಓವರ್‌ಗಳಲ್ಲಿ 248 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಹರಿಯಾಣ: 50 ಓವರ್‌ಗಳಲ್ಲಿ 9ಕ್ಕೆ298 (ಆಶಾ ರಂಗಾ 23, ಪಾರ್ಥ ವತ್ಸ 62, ನಿಶಾಂತ್ ಸಿಂಧು 64, ರಾಹುಲ್ ತೆವಾಟಿಯಾ 29, ಸುಮಿತ್ ಕುಮಾರ್ ಔಟಾಗದೆ 41, ಮೊಹಮ್ಮದ್ ಶಮಿ 61ಕ್ಕೆ3, ಮುಕೇಶ್ ಕುಮಾರ್ 46ಕ್ಕೆ2) ಬಂಗಾಳ: 43.1 ಓವರ್‌ಗಳಲ್ಲಿ 226 (ಅಭಿಷೇಕ್ ಪೊರೆಲ್ 57, ಸುದೀಪಕುಮಾರ್ ಘರಾಮಿ 36, ಅನುಸ್ಟುಪ್ ಮಜುಂದಾರ್ 36, ಕರಣ್ ಲಾಲ್ 28, ಅನ್ಷುಲ್ ಕಾಂಬೋಜ್ 25ಕ್ಕೆ2, ನಿಶಾಂತ್ ಸಿಂಧು 36ಕ್ಕೆ2, ಪಾರ್ಥ ವತ್ಸ 33ಕ್ಕೆ3) **ಫಲಿತಾಂಶ:** ಹರಿಯಾಣ ತಂಡಕ್ಕೆ 72 ರನ್ ಜಯ. ಪಂದ್ಯಶ್ರೇಷ್ಠ: ಪಾರ್ಥ ವತ್ಸ.

ರಾಜಸ್ಥಾನ: 47.3 ಓವರ್‌ಗಳಲ್ಲಿ 267 (ಅಭಿಜೀತ್ ಥೋಮರ್ 111, ಮಹಿಪಾಲ್ ಲೊಮ್ರೊರ್ 60, ಕಾರ್ತಿಕ್ ಶರ್ಮಾ 35, ಸಂದೀಪ್ ವಾರಿಯರ್ 38ಕ್ಕೆ2, ವರುಣ್ ಚಕ್ರವರ್ತಿ 52ಕ್ಕೆ5, ಸಾಯಿಕಿಶೋರ್ 49ಕ್ಕೆ2) ತಮಿಳುನಾಡು: 47.1 ಓವರ್‌ಗಳಲ್ಲಿ 248 (ಎನ್. ಜಗದೀಶನ್ 65, ಬಾಬಾ ಇಂದ್ರಜೀತ್ 37, ವಿಜಯಶಂಕರ್ 49, ಮೊಹಮ್ಮದ್ ಅಲಿ 34, ಅಮನ್ ಸಿಂಗ್ ಶೇಖಾವತ್ 60ಕ್ಕೆ3, ಅನಿಕೇತ್ ಚೌಧರಿ 40ಕ್ಕೆ2, ಕುಕ್ನಾ ಅಜಯ್ ಸಿಂಗ್ 59ಕ್ಕೆ2) **ಫಲಿತಾಂಶ:** ರಾಜಸ್ಥಾನ ತಂಡಕ್ಕೆ 19 ರನ್ ಜಯ. ಪಂದ್ಯಶ್ರೇಷ್ಠ: ಅಭಿಜೀತ್ ಥೋಮರ್.

ಐಟಿಎಫ್ ಓಪನ್ ಅಲಿಸಿಯಾ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವಾರ ಆಕ್ಲೆಂಡ್‌ನಲ್ಲಿ ಎಎಸ್‌ಬಿ ಕ್ಲಾಸಿಕ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಅಮೆರಿಕದ ಅಲಿಸಿಯಾ ಪಾರ್ಕ್ಸ್ ಮತ್ತು ಜರ್ಮನಿಯ ಅನುಭವಿ ಆಟಗಾರ್ತಿ ತಟ್ಯಾನಾ ಮರಿಯಾ ಅವರು ಇದೇ 21ರಂದು ಇಲ್ಲಿ ಆರಂಭವಾಗುವ ಐಟಿಎಫ್ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಇಲ್ಲಿನ ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ನಡೆಯುವ ಟೂರ್ನಿಗೆ ಹಾಲಿ ಚಾಂಪಿಯನ್ ದರ್ಜಾ ಸೆಮೆನಿಸ್ಟಾಜಾ ಸೇರಿದಂತೆ 17 ದೇಶಗಳ 20 ಆಟಗಾರ್ತಿಯರು ಮುಖ್ಯಸುತ್ತಿಗೆ ನೇರ ಪ್ರವೇಶ ಪಡೆದಿದ್ದಾರೆ.

ಒಟ್ಟು ₹85.90 ಲಕ್ಷ ಬಹುಮಾನ ಮೊತ್ತ ಹೊಂದಿದ್ದು, ವಿಜೇತರು ₹13 ಲಕ್ಷ ನಗದು ಬಹುಮಾನದೊಂದಿಗೆ 100 ರ‍್ಯಾಂಕಿಂಗ್ ಪಾಯಿಂಟ್ಸ್ ಪಡೆಯಲಿದ್ದಾರೆ.

ಒಟ್ಟು 32 ಆಟಗಾರ್ತಿಯರನ್ನು ಒಳಗೊಂಡ ಮುಖ್ಯಸುತ್ತಿಗೆ ಕ್ವಾಲಿಫೈಯರ್ಸ್ ಹಂತದಿಂದ ಎಂಟು ಮಂದಿ ಮತ್ತು ವೈಲ್ಡ್‌ಕಾರ್ಡ್ ಮೂಲಕ ನಾಲ್ವರು ಪ್ರವೇಶ ಪಡೆಯುವರು. ಇದೇ 19 ಮತ್ತು 20ರಂದು ಕ್ವಾಲಿಫೈಯರ್ಸ್ ಸ್ಪರ್ಧೆ ನಡೆಯಲಿದೆ. 21ರಿಂದ ಪ್ರಧಾನ ಸುತ್ತಿನ ಸ್ಪರ್ಧೆ ನಡೆಯಲಿದೆ.

ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್

ಪರಿಕ್ರಮಕ್ಕೆ ಮಣಿದ ಚಿಕ್ಕಮಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಪರಿಕ್ರಮ ಎಫ್‌ಸಿ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 5-1 ಗೋಲುಗಳಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಹಣಾಹಣಿಯಲ್ಲಿ ಪರಿಕ್ರಮ ತಂಡದ ಪರ ತಂಗ್ಲೆನ್ ಹಕಿಪ್ (38ನೇ ನಿಮಿಷ), ಹವೊಮಿಂತಾಂಗ್ ಕಿಪ್ಗೆನ್ (45ನೇ ನಿ), ಅಶ್ವಿನ್ ಚಕ್ರವರ್ತಿ (47ನೇ ನಿ), ಮಂಗ್ಲೆನ್ತಾಂಗ್ ಸಿಂಗ್ಸಿತ್ (48ನೇ ನಿ) ಮತ್ತು ರವೀಂದ್ರಕುಮಾರ್ (87ನೇ ನಿ) ಅವರು ತಲಾ ಒಂದು ಗೋಲು ಗಳಿಸಿದರು. ಚಿಕ್ಕಮಗಳೂರು ಪರ ಏಕೈಕ ಗೋಲನ್ನು ಲೆಟ್ಖೋಲುನ್ ಖೋಂಗ್ಸೈ (2ನೇ) ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ 2-0ರಿಂದ ಎಂಎಫ್‌ಎಆರ್ ಸ್ಟೂಡೆಂಟ್ ಯೂನಿಯನ್ ಎಫ್‌ಸಿ ತಂಡವನ್ನು ಸೋಲಿಸಿತು. ರಾಬರ್ಟ್ (29ನೇ ನಿ) ಮತ್ತು ಅಜೇಂದ್ರ ಸಿಂಗ್ (89ನೇ ನಿ) ಅವರು ಎಂಇಜಿ ಪರ ಚೆಂಡನ್ನು ಗುರಿ ಸೇರಿಸಿದರು.



ಪರಿಕ್ರಮ ತಂಡದ ಮಂಗ್ಲೆನ್ತಾಂಗ್ ಸಿಂಗ್ಸಿತ್ (ಎಡ) ಮತ್ತು ಚಿಕ್ಕಮಳಗೂರು ತಂಡದ ರಿಂಜು ರಾಜ್ ವಿ. ಚೆಂಡಿಗಾಗಿ ಸೆಣಸಾಟ ನಡೆಸಿದರು ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಮೀಸಲಾತಿ ನಿರಾಕರಣೆ: ಶಾಸಕಾಂಗ, ಕಾರ್ಯಾಂಗ ನಿರ್ಧರಿಸಲಿ– 'ಸುಪ್ರೀಂ'

ನವದೆಹಲಿ (ಪಿಟಿಐ): ಮೀಸಲಾತಿಯ ಪ್ರಯೋಜನ ಪಡೆದು ಇತರರೊಂದಿಗೆ ಸ್ಪರ್ಧಿಸುವ ಸ್ಥಿತಿಯಲ್ಲಿ ಇರುವವರನ್ನು ಮೀಸಲಾತಿಯಿಂದ ಹೊರಗಿಡುವ ಕುರಿತು ಶಾಸಕಾಂಗ ಮತ್ತು ಕಾರ್ಯಾಂಗವೇ ನಿರ್ಧಾರ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಈ ಕುರಿತು ಏಳು ಸದಸ್ಯರಿದ್ದ ಸಂವಿಧಾನ ಪೀಠವು ಕಳೆದ ವರ್ಷ ಆಗಸ್ಟ್‌ನಲ್ಲಿ ನೀಡಿದ್ದ ತೀರ್ಪಿಗೆ ಸಂಬಂಧಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ನ್ಯಾಯಪೀಠ ಮೇಲ್ಮನವಿ ವಿಚಾರಣೆ ನಡೆಸಿತು.

'ಮೀಸಲಾತಿಯ ಪ್ರಯೋಜನ ಪಡೆದವರು, ಇತರರೊಂದಿಗೆ ಸ್ಪರ್ಧಿಸುವ ಸ್ಥಿತಿಯಲ್ಲಿ ಇದ್ದಾಗ ಅವರನ್ನು ಮೀಸಲಾತಿ ಸೌಲಭ್ಯದಿಂದ ಹೊರಗಿಡಬೇಕು. ಕಳೆದ 75 ವರ್ಷಗಳ ವಿದ್ಯಮಾನಗಳನ್ನು ಪರಿಗಣನೆಗೆ ತೆಗೆದುಕೊಂಡೇ ನಾವು ನಮ್ಮ ಅಭಿಪ್ರಾಯ ತಿಳಿಸಿದ್ದೇವೆ. ಆದರೆ, ಈ ಕುರಿತು ಶಾಸಕಾಂಗ ಮತ್ತು ಕಾರ್ಯಾಂಗ ನಿರ್ಧಾರ ಕೈಗೊಳ್ಳಬೇಕು' ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು.

ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ನೀಡುವುದಕ್ಕೆ ರಾಜ್ಯಗಳು ಸಂವಿಧಾನದತ್ತ ಅಧಿಕಾರ ಹೊಂದಿವೆ ಎಂಬುದಾಗಿ ಸಂವಿಧಾನ ಪೀಠ ಬಹುಮತದ ತೀರ್ಪು ನೀಡಿದೆ. ನ್ಯಾಯಮೂರ್ತಿ ಗವಾಯಿ ಅವರೂ ಈ ಸಂವಿಧಾನ ಪೀಠದಲ್ಲಿದ್ದರು.

'ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿನ 'ಕೆನೆಪದರ' ಗುರುತಿಸಿ, ಅವರಿಗೆ ಮೀಸಲಾತಿ ಸೌಲಭ್ಯ ನಿರಾಕರಿಸುವುದಕ್ಕಾಗಿ ರಾಜ್ಯಗಳು ನೀತಿಯೊಂದನ್ನು ರೂಪಿಸಬೇಕು' ಎಂಬುದಾಗಿ ನ್ಯಾಯಮೂರ್ತಿ ಗವಾಯಿ ಅವರು ಪ್ರತ್ಯೇಕ ತೀರ್ಪು ಬರೆದಿದ್ದರು.

ಸಲಿಂಗ ವಿವಾಹ: ಮರುಪರಿಶೀಲನಾ ಅರ್ಜಿ ವಜಾಗೊಳಿಸಿದ 'ಸುಪ್ರಿಂ'

ವಿಶೇಷ ವಿವಾಹ ಕಾಯ್ದೆಯಡಿ ಸಲಿಂಗ ಜೋಡಿಗಳ ವಿವಾಹಕ್ಕೆ ಕಾನೂನು ಮಾನ್ಯತೆ ನೀಡಲು ನಿರಾಕರಿಸಿ 2023ರ ಅಕ್ಟೋಬರ್ 17ರಂದು ತಾನು ನೀಡಿದ್ದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಗುರುವಾರ ವಜಾಗೊಳಿಸಿತು.

'ಈ ವಿಚಾರವಾಗಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಲ್ಲಿ ಯಾವುದೇ ದೋಷ ಕಂಡುಬಂದಿಲ್ಲ' ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ, ಸೂರ್ಯಕಾಂತ, ಬಿ.ವಿ.ನಾಗರತ್ನಾ, ಪಿ.ಎಸ್.ನರಸಿಂಹ ಹಾಗೂ ದೀಪಂಕರ್ ದತ್ತಾ ಅವರು ಇದ್ದ ನ್ಯಾಯಪೀಠ ಹೇಳಿದೆ.

'ನ್ಯಾಯಮೂರ್ತಿಗಳಾದ ಎಸ್.ರವೀಂದ್ರ ಭಟ್ ಹಾಗೂ ಹಿಮಾ ಕೊಹ್ಲಿ (ಇಬ್ಬರೂ ಈಗ ನಿವೃತ್ತರು) ನೀಡಿರುವ ಹಾಗೂ ನಾವು ಇರುವ ಈ ಪೀಠದ ತೀರ್ಪುಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇವೆ. ಈ ಎರಡೂ ತೀರ್ಪುಗಳು ಕಾನೂನಿಗೆ ಅನುಗುಣವಾಗಿಯೇ ಇದ್ದು, ಈ ವಿಚಾರದಲ್ಲಿ ಮಧ್ಯಪ್ರವೇಶಿಸುವ ಅಗತ್ಯ ಕಂಡುಬಂದಿಲ್ಲ' ಎಂದು ಪೀಠ ಹೇಳಿದೆ.

'ಮಗಳ ಶಿಕ್ಷಣಕ್ಕೆ ತಂದೆ–ತಾಯಿ ಹಣ ಕೊಡಬೇಕು'

ನವದೆಹಲಿ (ಪಿಟಿಐ): ಶಿಕ್ಷಣಕ್ಕೆ ಅಗತ್ಯವಿರುವ ವೆಚ್ಚವನ್ನು ತನ್ನ ತಂದೆ–ತಾಯಿಯಿಂದ ಪಡೆದುಕೊಳ್ಳುವ, ಕಾನೂನಿನ ಮೂಲಕ ಜಾರಿಗೆ ತರಬಹುದಾದ ಹಕ್ಕನ್ನು ಹೆಣ್ಣು ಮಕ್ಕಳು ಹೊಂದಿದ್ದಾರೆ ಎಂದು ಸುಪ್ರೀಂ ಕೋರ್ಟ್ ಈಚೆಗೆ ಹೇಳಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಅಗತ್ಯವಿರುವ ಹಣವನ್ನು ತಮ್ಮ ಮಿತಿಯೊಳಗೆ ನೀಡುವಂತೆ ತಂದೆ–ತಾಯಿಗೆ ಆದೇಶಿಸಬಹುದು ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ವಲ್ ಭೂಯಾನ್ ಅವರು ಇರುವ ವಿಭಾಗೀಯ ಪೀಠವು ಈ ಮಾತನ್ನು ವೈವಾಹಿಕ ವ್ಯಾಜ್ಯವೊಂದರ ವಿಚಾರಣೆ ಸಂದರ್ಭದಲ್ಲಿ ಹೇಳಿದೆ. ಪರಸ್ಪರ ಬೇರೆಯಾಗಿರುವ ದಂಪತಿಯ ಪುತ್ರಿಯು ಐರ್ಲೆಂಡ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ತಾಯಿಗೆ ನೀಡುತ್ತಿರುವ ಒಟ್ಟು ಜೀವನಾಂಶದ ಭಾಗವಾಗಿ ತಂದೆಯು ಶಿಕ್ಷಣದ ಖರ್ಚುಗಳಿಗೆ ತನಗೆ ₹43 ಲಕ್ಷ ನೀಡಿದ್ದನ್ನು ಪಡೆಯಲು ಪುತ್ರಿ ಒಪ್ಪಿರಲಿಲ್ಲ.

'ಮಗಳಾಗಿ ಈಕೆಗೆ ಶಿಕ್ಷಣದ ವೆಚ್ಚಗಳನ್ನು ತಂದೆ–ತಾಯಿಯಿಂದ ಪಡೆದುಕೊಳ್ಳುವ ಕಾನೂನುಬದ್ಧವಾದ ಹಕ್ಕು ಇದೆ. ಮಗಳಿಗೆ ಶಿಕ್ಷಣವನ್ನು ಪಡೆಯುವ ಮೂಲಭೂತ ಹಕ್ಕು ಇದೆ. ಇದಕ್ಕಾಗಿ, ಅಗತ್ಯವಿರುವ ಹಣವನ್ನು ತಮ್ಮ ಹಣಕಾಸಿನ ಮಿತಿಯೊಳಗೆ ನೀಡುವಂತೆ ತಂದೆ–ತಾಯಿಗೆ ತಾಕೀತು ಮಾಡಬಹುದು' ಎಂದು ಪೀಠವು ಜನವರಿ 2ರಂದು ನೀಡಿರುವ ಆದೇಶದಲ್ಲಿ ಹೇಳಿದೆ.

ಈ ದಂಪತಿಯ ಪುತ್ರಿಯು ತನ್ನ ಘನತೆಯನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಹಣವನ್ನು ಪಡೆಯಲು ನಿರಾಕರಿಸಿದ್ದಳು. ಆದರೆ ಹಣ ವಾಪಸ್ ಪಡೆಯಲು ತಂದೆ ಒಪ್ಪಿರಲಿಲ್ಲ. ಹಣವನ್ನು ಪಡೆಯುವ ಕಾನೂನುಬದ್ಧ ಹಕ್ಕು ಮಗಳಿಗೆ ಇದೆ ಎಂದು ಪೀಠವು ಸ್ಪಷ್ಟಪಡಿಸಿದೆ.


'ಹಾಲಿವುಡ್'ನಲ್ಲಿ ಕಾಳ್ಗಿಚ್ಚು

ಪ್ರಜಾವಾಣಿ ವಾರ್ತೆ

ಲಾಸ್ ಏಂಜಲೀಸ್: 'ಸಂತಾ ಆನಾ' ಎನ್ನುವ ರಕ್ಕಸ ಗಾಳಿಯು ಬುಧವಾರ ಬೆಳಿಗ್ಗೆಯ ಹೊತ್ತಿಗೆ ತನ್ನ ವೇಗವನ್ನು ತುಸು ತಗ್ಗಿಸಿಕೊಂಡಿತು. ಇನ್ನು ರಕ್ಷಣಾ ಕಾರ್ಯಗಳಿಗೆ ವೇಗ ದೊರೆಯುತ್ತದೆ ಎಂದುಕೊಳ್ಳುವ ಹೊತ್ತಿಗೆ ಚಾರಿತ್ರಿಕವಾದ ಹಾಲಿವುಡ್ ಹಿಲ್ಸ್ ನಗರಕ್ಕೆ ಬುಧವಾರ ರಾತ್ರಿ ಕಾಳ್ಗಿಚ್ಚು ವಿಸ್ತರಿಸಿದೆ. ಲಿಡಿಯಾ ಎನ್ನುವ ಪ್ರದೇಶದಲ್ಲಿಯೂ ಬುಧವಾರ ಕಾಳ್ಗಿಚ್ಚು ಹೊತ್ತಿಕೊಂಡಿದೆ.

'ಕಾಳ್ಗಿಚ್ಚು ತೀವ್ರವಾಗಿ ವ್ಯಾಪಿಸುತ್ತಿದೆ' ಎಂದು ಹಾಲಿವುಡ್ ಹಿಲ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಗ್ನಿಶಾಮಕ ದಳದ ಅಧಿಕಾರಿಗಳು ಹೇಳಿದ್ದಾರೆ. ಗುರುವಾರ ಹಾಲಿವುಡ್ ಸಿನಿ ರಂಗದ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡಿದ್ದವು. ಹಾಲಿವುಡ್ ಹಿಲ್ಸ್‌ನಲ್ಲಿ ಇರುವ ಹಾಲಿವುಡ್‌ನ ಹಲವು ಸಿನಿ ತಾರೆಯರ ಕೋಟಿ ಕೋಟಿ ವೆಚ್ಚದ ಮನೆಗಳು ಸುಟ್ಟು ಭಸ್ಮವಾದವು. ನೂರಾರು ಸಿನಿ ತಾರೆಯರು ತಮ್ಮ ಮನೆಗಳನ್ನು ತೊರೆದು ಓಡಿದರು. ವಾಹನ ದಟ್ಟಣೆ ಉಂಟಾಗಿತ್ತು.


ಜ.17ಕ್ಕೆ ಆಸ್ಕರ್‌ಗೆ ನಾಮನಿರ್ದೇಶಿತಗೊಂಡವರ ಹೆಸರು ಘೋಷಣೆ ಮಾಡಲು ನಿರ್ಧರಿಸಲಾಗಿತ್ತು. ಇದನ್ನು ಎರಡು ದಿನಗಳಿಗೆ ಮುಂದೂಡಲಾಗಿದೆ.



ಹಾಲಿವುಡ್ ಹಿಲ್ಸ್‌ನಲ್ಲಿ ಹೊತ್ತಿಕೊಂಡಿರುವ ಕಾಳ್ಗಿಚ್ಚನ್ನು ನಂದಿಸಲು ಅಗ್ನಿಶಾಮಕ ದಳದ ಸಿಬ್ಬಂದಿ ಬುಧವಾರ ರಾತ್ರಿ ಯತ್ನಿಸಿದರು –ಎಎಫ್‌ಪಿ ಚಿತ್ರ

ಇಟಲಿ ಭೇಟಿ ರದ್ದು

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಗುರುವಾರ ಇಟಲಿಗೆ ಪ್ರವಾಸ ಬೆಳೆಸಬೇಕಿತ್ತು. ಇದು ಅವರ ಅಧ್ಯಕ್ಷೀಯ ಅವಧಿಯ ಕೊನೆಯ ಅಧಿಕೃತ ಭೇಟಿಯಾಗಿತ್ತು. ಕಾಳ್ಗಿಚ್ಚಿನ ಕಾರಣಕ್ಕೆ ಅವರು ತಮ್ಮ ಭೇಟಿಯನ್ನು ರದ್ದು ಮಾಡಿದ್ದಾರೆ. 'ಕಾಳ್ಗಿಚ್ಚು ಪ್ರಮುಖ ಪ್ರಾಕೃತಿಕ ವಿಪತ್ತು' ಎಂದು ಬೈಡನ್ ಘೋಷಿಸಿದ್ದಾರೆ.



1.7 ಕೋಟಿ ಕಾಳ್ಗಿಚ್ಚಿನಿಂದ ಎದ್ದ ದಟ್ಟ ಹೊಗೆಯಿಂದಾಗಿ ಆರೋಗ್ಯ ಸಮಸ್ಯೆ ಎದುರಿಸಬಹುದಾದ ಜನರು (ಲಾಸ್ ಏಂಜಲೀಸ್‌ನ ಪೂರ್ವ ಭಾಗದಲ್ಲಿ ಗಾಳಿ ಗುಣಮಟ್ಟದ ಸೂಚ್ಯಂಕವು 173ರಷ್ಟಿದೆ. ಸೂಚ್ಯಂಕವು 50ರಷ್ಟಿದ್ದರೆ ಅದು ಆರೋಗ್ಯಕರ ಗುಣಮಟ್ಟ)

5 ಈಟನ್ ಕೆಯಾನ್‌ನಲ್ಲಿ ಹಬ್ಬಿದ ಕಾಳ್ಗಿಚ್ಚಿನಿಂದ ಮೃತಪಟ್ಟ ಜನರ ಸಂಖ್ಯೆ

₹4.89 ಲಕ್ಷ ಕೋಟಿ ಕಾಳ್ಗಿಚ್ಚಿನಿಂದ ಉಂಟಾದ ಆಸ್ತಿ ಮತ್ತು ಇತರ ಆರ್ಥಿಕ ನಷ್ಟದ ಅಂದಾಜು

28,250 ಎಕರೆ ಕ್ಯಾಲಿಫೋರ್ನಿಯಾದ ಒಟ್ಟು ಐದು ಪ್ರದೇಶಗಳಲ್ಲಿ ಕಾಳ್ಗಿಚ್ಚು ಹಬ್ಬಿದ್ದು, ಇಲ್ಲಿ ಹಾನಿಗೊಳಗಾದ ಪ್ರದೇಶದ ಒಟ್ಟು ವಿಸ್ತೀರ್ಣ

7,500 ಕಾರ್ಯನಿರತರಾಗಿರುವ ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ತುರ್ತು ಸ್ಥಿತಿ ನಿರ್ವಹಿಸುವ ಸಿಬ್ಬಂದಿ

ಆಧಾರ: ಎಪಿ, ಎಎಫ್‌ಪಿ, ರಾಯಿಟರ್ಸ್, ಬಿಬಿಸಿ, 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ, ಲಾಸ್ ಏಂಜಲೀಸ್ ಅಗ್ನಿಶಾಮಕ ಇಲಾಖೆ ವೆಬ್‌ಸೈಟ್

- ಪೆಸಿಫಿಕ್ ಪ್ಯಾಲಿಸೈಡ್ಸ್‌ನ ಇತಿಹಾಸಲ್ಲಿಯೇ ಇಷ್ಟೊಂದು ದೊಡ್ಡ ಪ್ರಮಾಣದ ಕಾಳ್ಗಿಚ್ಚು ಹಬ್ಬಿರಲಿಲ್ಲ
- ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ಮಳೆಯಾಗುತ್ತಿಲ್ಲ. ಬರಡು ಸ್ಥಿತಿ ನಿರ್ಮಾಣಗೊಂಡಿದೆ. ಈ ಕಾರಣಕ್ಕಾಗಿ ಬೆಂಕಿ ನಂದಿಸಲು ನೀರಿನ ಕೊರತೆ ಉಂಟಾಗಿದೆ. 'ಇಷ್ಟೊಂದು ದೊಡ್ಡ ಪ್ರಮಾಣದ ಅನಾಹುತವನ್ನು ನಿರ್ವಹಿಸುವಷ್ಟು ಅಗ್ನಿಶಾಮಕ ಸಿಬ್ಬಂದಿ ಇಲ್ಲ' ಎಂದು ಪ್ಯಾಲಿಸೈಡ್‌ನ ಮೇಯರ್ ಹೇಳಿದ್ದಾರೆ
- ಲಾಸ್ ಏಂಜಲೀಸ್‌ನಲ್ಲಿ ತಂಗಿರುವ ನೂರಾರು ಭಾರತೀಯ ಅಮೆರಿಕನ್ನರೂ ತಮ್ಮ ಮನೆಗಳನ್ನು ಬಿಟ್ಟು ತೆರಳಬೇಕಾಯಿತು
- 2028ರಲ್ಲಿ ಲಾಸ್ ಏಂಜಲೀಸ್‌ನಲ್ಲಿ ಒಲಿಂಪಿಕ್ಸ್ ನಡೆಯಲಿದೆ. ಇದಕ್ಕಾಗಿ ಕ್ರೀಡಾ ಗ್ರಾಮವನ್ನು ಸಿದ್ಧಪಡಿಸಲಾಗುತ್ತಿತ್ತು. ಈ ನಗರಕ್ಕೂ ಕಾಳ್ಗಿಚ್ಚು ಹಬ್ಬಿದ್ದರಿಂದ ತೀವ್ರ ಹಾನಿಯಾಗಿದೆ. ಕೋಟಿ ಕೋಟಿ ಡಾಲರ್ ವೆಚ್ಚದಲ್ಲಿ ಕ್ರೀಡಾ ಗ್ರಾಮವನ್ನು ಮರುನಿರ್ಮಾಣ ಮಾಡಬೇಕಿದೆ

'ಇಂಡಿಯಾ' ಮೈತ್ರಿ: ವಿಸರ್ಜನೆಗೆ ಒಮರ್ ಅಬ್ದುಲ್ಲಾ ಸಲಹೆ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು 'ಇಂಡಿಯಾ' ಮೈತ್ರಿಕೂಟವನ್ನು ವಿಸರ್ಜಿಸಲು ಸಲಹೆ ನೀಡಿದ ಬೆನ್ನಲ್ಲೇ ಅವರ ತಂದೆ ಮತ್ತು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರು ಪ್ರಜಾಪ್ರಭುತ್ವದಲ್ಲಿ ಮೈತ್ರಿಕೂಟದ ಮಹತ್ವವನ್ನು ಸಮರ್ಥಿಕೊಂಡಿದ್ದಾರೆ.

'ಇಂಡಿಯಾ' ಮೈತ್ರಿಯಲ್ಲಿ ನಾಯಕತ್ವ ಮತ್ತು ಕಾರ್ಯಸೂಚಿ ಬಗ್ಗೆ ಸ್ಪಷ್ಟತೆಯ ಕೊರತೆಯಿದೆ. ಈ ಮೈತ್ರಿಯು ಲೋಕಸಭಾ ಚುನಾವಣೆಗೆ ಮಾತ್ರ ಸೀಮಿತವಾಗಿದ್ದರೆ, ಅದನ್ನು ರದ್ದುಗೊಳಿಸುವುದು ಸೂಕ್ತ' ಎಂದು ಒಮರ್ ಅಬ್ದುಲ್ಲಾ ಗುರುವಾರ ಬೆಳಿಗ್ಗೆ ಸುದ್ದಿಗಾರರಿಗೆ ಹೇಳಿದರು.

'ಈ ಕುರಿತು ದೆಹಲಿ ವಿಧಾನಸಭಾ ಚುನಾವಣೆಯ ಬಳಿಕ ಮೈತ್ರಿಕೂಟದ ಸದಸ್ಯರು ಸಭೆ ಕರೆದು ಚರ್ಚಿಸಿ ಸ್ಪಷ್ಟಪಡಿಸಬೇಕು. ಈ ಮೈತ್ರಿಯು ಲೋಕಸಭಾ ಚುನಾವಣೆಗೆ ಸೀಮಿತ ಎಂದಾದರೆ, ಆ ಮೈತ್ರಿಯನ್ನು ವಿಸರ್ಜಿಸಬೇಕು. ಆಗ ನಾವು ಪ್ರತ್ಯೇಕವಾಗಿ ಕೆಲಸಗಳನ್ನು ಮಾಡಿಕೊಳ್ಳುತ್ತೇವೆ. ಒಂದು ವೇಳೆ ಮೈತ್ರಿ ವಿಧಾನಸಭಾ ಚುನಾವಣೆಗಳನ್ನೂ ಗಮನದಲ್ಲಿ ಇಟ್ಟುಕೊಂಡಿದ್ದರೆ, ನಾವು ಒಟ್ಟಿಗೆ ಕೆಲಸ ಮಾಡಬೇಕಾಗುತ್ತದೆ' ಎಂದು ಅವರು ತಿಳಿಸಿದರು.

ಫಾರೂಕ್ ಪ್ರತಿಪಾದನೆ: ಈ ಕುರಿತು ಜಮ್ಮುವಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಎನ್‌ಸಿ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ, 'ಮೈತ್ರಿಯು ಕೇವಲ ಚುನಾವಣಾ ಸ್ಪರ್ಧೆಗಳಿಗೆ ಸೀಮಿತವಲ್ಲ. ಅದು ದೇಶವನ್ನು ಬಲಪಡಿಸುವ ಮತ್ತು ದ್ವೇಷವನ್ನು ತೊಡೆದುಹಾಕುವ ಉದ್ದೇಶವನ್ನು ಹೊಂದಿದೆ' ಎಂದು ಪ್ರತಿಪಾದಿಸಿದರು.

ವರದಿ ಕೇಳಿದ ಉತ್ತರ ಪ್ರದೇಶ ಸರ್ಕಾರ

ಲಖನೌ: ಸಂಭಲ್‌ನಲ್ಲಿ 1978ರಲ್ಲಿ ನಡೆದಿದ್ದ ಕೋಮು ಗಲಭೆಗಳ ಕುರಿತು ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗೆ ಉತ್ತರ ಪ್ರದೇಶ ಸರ್ಕಾರ ಸೂಚಿಸಿದೆ.

'ಒಂದು ವಾರದ ಒಳಗಾಗಿ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗೆ ಸೂಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್: ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಪ್ರಣಯ್ ನಿರ್ಗಮನ

ಎಂಟರ ಘಟ್ಟಕ್ಕೆ ಸಾತ್ವಿಕ್–ಚಿರಾಗ್

ಕ್ವಾಲಾಲಂಪುರ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಗುರುವಾರ ಮಲೇಷ್ಯಾ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು. ಆದರೆ ಸಿಂಗಲ್ಸ್‌ನಲ್ಲಿ ಎಚ್‌.ಎಸ್‌.ಪ್ರಣಯ್ ಎರಡನೇ ಸುತ್ತಿನಲ್ಲಿ ವೀರೋಚಿತ ಹೋರಾಟ ತೋರಿದರೂ ಸೋಲನುಭವಿಸಿದರು.

ಸಾತ್ವಿಕ್– ಚಿರಾಗ್ ಜೋಡಿ 43 ನಿಮಿಷಗಳವರೆಗೆ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21–15, 21–15 ರಿಂದ ಮಲೇಷ್ಯಾದ ಎನ್‌.ಅಝ್ರಿನ್– ತಾನ್ ಡಬ್ಲ್ಯುಕೆ ಜೋಡಿಯನ್ನು ಸೋಲಿಸಿತು. ಏಳನೇ ಶ್ರೇಯಾಂಕದ ಭಾರತದ ಜೋಡಿ ಎಂಟರ ಘಟ್ಟದ ಪಂದ್ಯದಲ್ಲಿ ಆತಿಥೇಯ ಮಲೇಷ್ಯಾದ ಯು ಸಿನ್ ಒಂಗ್– ಯೆ ಇ ಟಿಯೊ ಜೋಡಿಯನ್ನು ಎದುರಿಸಲಿದೆ.

‘ಮತ್ತೆ ಬಿಡಬ್ಲ್ಯುಎಫ್ ಪ್ರವಾಸಕ್ಕೆ ಹಿಂತಿರುಗಿದ್ದರಿಂದ ಸಂತಸವಾಗಿದೆ. ಟೂರ್ನಿಯಲ್ಲಿ ಸಾಧ್ಯವಾದಷ್ಟು ಮುಂದಿನ ಹಂತಕ್ಕೆ ಹೋಗಲು ಪ್ರಯತ್ನಿಸುತ್ತೇವೆ’ ಎಂದು ಪಂದ್ಯದ ನಂತರ ಚಿರಾಗ್ ಪ್ರತಿಕ್ರಿಯಿಸಿದರು.

‘ಹೊಸ ಕೋಚ್ (ಮಲೇಷ್ಯಾದ ತಾನ್ ಕಿಮ್ ಹರ್) ಜೊತೆ ತರಬೇತಿ ಪಡೆಯುತ್ತಿದ್ದೇವೆ. ಈ ಹಿಂದೆಯೂ ಇದೇ ಕೋಚ್ ಜೊತೆ ಕೆಲಸ ಮಾಡಿದ್ದೇವೆ. ನಾವಿಬ್ಬರು ಕಿರಿಯ ಆಟಗಾರರಾಗಿದ್ದ ಕಾಲದಲ್ಲಿ ಸಾತ್ವಿಕ್ ಅವರನ್ನು ನನ್ನ ಡಬಲ್ಸ್ ಜೊತೆಗಾರನನ್ನಾಗಿ ಮಾಡಿದ್ದು ಅವರು’ ಎಂದು ಹೇಳಿದರು.

ಡಬಲ್ಸ್‌ನಲ್ಲಿ ನಿರಾಸೆ: ಮಹಿಳೆಯರ ಡಬಲ್ಸ್ 16ರ ಸುತ್ತಿನ ಪಂದ್ಯದಲ್ಲಿ ಭಾರತದ ಟ್ರೀಸಾ ಜೋಲಿ– ಗಾಯತ್ರಿ ಗೋಪಿಚಂದ್ ಜೋಡಿ ಆಘಾತ ಅನುಭವಿಸಿತು. ಚೀನಾದ ಜಿಯಾ ಯಿ– ಝೂಂಗ್ ಶೂ ಷಿಯಾನ್ ಅವರು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ 15–21, 21–19, 21–19 ರಿಂದ ಆರನೇ ಶ್ರೇಯಾಂಕದ ಭಾರತದ ಜೋಡಿಯ ಮೇಲೆ ಜಯಗಳಿಸಿದರು.

ಮಿಶ್ರ ಡಬಲ್ಸ್‌ನಲ್ಲೂ ಭಾರತದ ಸವಾಲು ಅಂತ್ಯಗೊಂಡಿತು. ಧ್ರುವ್ ಕಪಿಲಾ– ತನಿಶಾ ಕ್ರಾಸ್ಟೊ ಅವರು 13–21, 20–22 ರಲ್ಲಿ ಏಳನೇ ಶ್ರೇಯಾಂಕದ ಚೆಂಗ್ ಷಿಂಗ್– ಝೂಂಗ್ ಚಿ (ಚೀನಾ) ಜೋಡಿಗೆ 44 ನಿಮಿಷಗಳಲ್ಲಿ ಮಣಿದರು. ಸತೀಶ್ ಕರುಣಾಕರನ್– ಆದ್ಯಾ ವರಿಯತ್ ಜೋಡಿ 10–21, 17–21ರಲ್ಲಿ ನಾಲ್ಕನೇ ಶ್ರೇಯಾಂಕದ ಸೂನ್ ಹುವಾರ್ ಗೊ– ಶೆವೊನ್ ಜೆಮಿ ಲಾಯ್ (ಮಲೇಷ್ಯಾ) ಅವರೆದುರು ಸೋಲನುಭವಿಸಿತು.



ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಪಿಟಿಐ ಸಂಗ್ರಹ ಚಿತ್ರ

ಮಾಳವಿಕಾ ಬನ್ಸೋಡ್‌ಗೆ ಸೋಲು

32 ವರ್ಷ ವಯಸ್ಸಿನ ಪ್ರಣಯ್ ಪುರುಷರ ಸಿಂಗಲ್ಸ್‌ನಲ್ಲಿ 8–21, 21–15, 21–13ರಲ್ಲಿ ಚೀನಾದ ಲಿ ಶಿ ಫೆಂಗ್ ಎದುರು ಸೋಲನುಭವಿಸಿದರು. ಏಳನೇ ಶ್ರೇಯಾಂಕದ ಫೆಂಗ್ ಒಂದು ಗಂಟೆ 32 ನಿಮಿಷದಲ್ಲಿ ಪಂದ್ಯ ಗೆದ್ದರು. ಪ್ಯಾರಿಸ್ ಒಲಿಂಪಿಕ್ಸ್ ನಂತರ ಇದೇ ಮೊದಲ ಬಾರಿ ಪ್ರಣಯ್ ಟೂರ್ನಿಯೊಂದರಲ್ಲಿ ಆಡುತ್ತಿದ್ದಾರೆ.

ಮಾಳವಿಕಾ ಬನ್ಸೋಡ್ ಮಹಿಳೆಯರ ಸಿಂಗಲ್ಸ್ 16ರ ಸುತ್ತಿನ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ಹಾನ್ ಯು (ಚೀನಾ) ಎದುರು ಸೋಲನುಭವಿದರು. ಶ್ರೇಯಾಂಕರಹಿತ ಭಾರತದ ಆಟಗಾರ್ತಿ 18–21, 11–21 ರಲ್ಲಿ ಸೋತರು.

ಇಂಗ್ಲೆಂಡ್ ಎದುರಿನ ಸರಣಿ: ರಾಹುಲ್ ವಿಶ್ರಾಂತಿ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ಅವರಿಗೆ ಇಂಗ್ಲೆಂಡ್ ಎದುರಿನ ಸೀಮಿತ ಓವರ್‌ಗಳ ಕ್ರಿಕೆಟ್ ಸರಣಿಯಿಂದ ವಿಶ್ರಾಂತಿ ನೀಡುವ ಸಾಧ್ಯತೆ ಇದೆ.

ಜನವರಿ 22ರಂದು ಕೋಲ್ಕತ್ತದಲ್ಲಿ ಸರಣಿ ಆರಂಭವಾಗಲಿದೆ. ಐದು ಟಿ20 ಮತ್ತು ಮೂರು ಏಕದಿನ ಪಂದ್ಯಗಳು ನಡೆಯಲಿವೆ. ಫೆ.19ರಂದು ಚಾಂಪಿಯನ್ಸ್ ಟ್ರೋಫಿ ಟೂರ್ನಿ ಆರಂಭವಾಗಲಿದೆ. ಆದ್ದರಿಂದ ಇಂಗ್ಲೆಂಡ್ – ಭಾರತ ಸರಣಿ ಮುಖ್ಯವಾಗಿದೆ.



ಕೆ.ಎಲ್‌ ರಾಹುಲ್

‘ರಾಹುಲ್ ಅವರು ವಿಶ್ರಾಂತಿ ತೆಗೆದುಕೊಳ್ಳಲು ಇಚ್ಛಿಸಿದ್ದಾರೆ. ಆದರೆ ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ತಂಡದ ಆಯ್ಕೆಗೆ ಅವರು ಲಭ್ಯವಾಗಲಿದ್ದಾರೆ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮೂಲಗಳು ತಿಳಿಸಿವೆ.

ಈಚೆಗೆ ಮುಕ್ತಾಯವಾದ ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಸರಣಿಯಲ್ಲಿ ರಾಹುಲ್ 10 ಇನಿಂಗ್ಸ್‌ಗಳಲ್ಲಿ ಆಡಿ 276 ರನ್ ಗಳಿಸಿದ್ದರು.

ಕರ್ನಾಟಕದ ರಾಹುಲ್ ಅವರು ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಕ್ವಾರ್ಟರ್‌ಫೈನಲ್‌ನಿಂದಲೂ ವಿಶ್ರಾಂತಿ ಪಡೆದಿದ್ದಾರೆ.

ಅಥ್ಲೆಟಿಕ್ಸ್ ಉಡುಪಿಯಲ್ಲಿ ಈಜು ಮಂಗಳೂರಿನಲ್ಲಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ–ಉಡುಪಿ ಜಿಲ್ಲಾಡಳಿತ ಇದೇ 17ರಿಂದ 23ರವರೆಗೆ ಆಯೋಜಿಸಿರುವ ‘ಕರ್ನಾಟಕ ಕ್ರೀಡಾಕೂಟ’ದ ಅಥ್ಲೆಟಿಕ್ಸ್ ಸೇರಿದಂತೆ ಎಂಟು ಸ್ಪರ್ಧೆಗಳು ಉಡುಪಿಯಲ್ಲಿ ನಡೆಯಲಿವೆ. ಈಜು ಒಳಗೊಂಡಂತೆ 12 ಸ್ಪರ್ಧೆಗಳು ಮಂಗಳೂರಿನಲ್ಲಿ, ಹಾಕಿ ಮತ್ತು ಇತರ ಎರಡು ಸ್ಪರ್ಧೆಗಳು ಮಣಿಪಾಲದಲ್ಲಿ, ಜಿಮ್ನಾಸ್ಟಿಕ್ಸ್ ಮತ್ತು ಶೂಟಿಂಗ್ ಬೆಂಗಳೂರಿನಲ್ಲಿ ನಡೆಯಲಿದೆ.



ಕ್ರೀಡಾಕೂಟಕ್ಕೆ ಸಂಬಂಧಿಸಿ ನಗರದಲ್ಲಿ ಗುರುವಾರ ನಡೆದ ಉನ್ನತಾಧಿಕಾರ ಸಮಿತಿ ಸಭೆಯ ನಂತರ ಮಾತನಾಡಿದ ಸಮಿತಿಯ ಕಾರ್ಯಾಧ್ಯಕ್ಷ ಕೆ.ಗೋವಿಂದರಾಜ್ ‘ಉಡುಪಿಯ ಅಜ್ಜರಕಾಡು ಕ್ರೀಡಾಂಗಣದ ಟ್ರ್ಯಾಕ್ ಮತ್ತು ಫೀಲ್ಡ್ ಚೆನ್ನಾಗಿದೆ ಎಂಬ ಮಾಹಿತಿಯ ಆಧಾರದಲ್ಲಿ ಅಥ್ಲೆಟಿಕ್ಸ್ ಅಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ’ ಎಂದು ತಿಳಿಸಿದರು.

ಈಜು, ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್, ಫೆನ್ಸಿಂಗ್, ಫುಟ್‌ಬಾಲ್, ಹ್ಯಾಂಡ್‌ಬಾಲ್, ಕೊಕ್ಕೊ, ನೆಟ್‌ಬಾಲ್, ಟೆಕ್ವಾಂಡೊ ವಾಲಿಬಾಲ್, ವೇಟ್‌ಲಿಫ್ಟಿಂಗ್ ಮತ್ತು ವುಷು ಮಂಗಳೂರಿನಲ್ಲಿ ನಡೆಯಲಿದ್ದು ಉಡುಪಿಯಲ್ಲಿ ಅಥ್ಲೆಟಿಕ್ಸ್, ಆರ್ಚರಿ, ಬಾಕ್ಸಿಂಗ್, ಸೈಕ್ಲಿಂಗ್, ಜೂಡೊ, ಕಬಡ್ಡಿ, ಕುಸ್ತಿ, ಕಯಾಕಿಂಗ್ ಮತ್ತು ಕನೋಯಿಂಗ್, ಮಣಿಪಾಲದಲ್ಲಿ ಹಾಕಿ, ಟೆನಿಸ್ ಮತ್ತು ಟೇಬಲ್ ಟೆನಿಸ್ ನಡೆಯಲಿದೆ. ಜಿಮ್ನಾಸ್ಟಿಕ್ಸ್ ಮತ್ತು ಶೂಟಿಂಗ್ ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಅವರು ವಿವರಿಸಿದರು.

ಸಮಿತಿಯ ಅಧ್ಯಕ್ಷ ಯು. ಟಿ.ಖಾದರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಆಯುಕ್ತ ಚೇತನ್, ಪ್ರಧಾನ ಕಾರ್ಯದರ್ಶಿ ರಣದೀಪ್, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಉಡುಪಿ ಜಿಲ್ಲಾಧಿಕಾರಿ ವಿದ್ಯಾ ಕುಮಾರಿ, ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರವಾಲ್ ಮತ್ತಿತರರು ಪಾಲ್ಗೊಂಡಿದ್ದರು.

ಡೋಪಿಂಗ್: ಅರ್ಚನಾ ತಾತ್ಕಾಲಿಕ ಅಮಾನತು

ನವದೆಹಲಿ (ಪಿಟಿಐ): ಉದ್ದೀಪನ ಮದ್ದು ಸೇವನೆ ಪರೀಕ್ಷೆಯಲ್ಲಿ ಸಿಲುಕಿಕೊಂಡ ಭಾರತದ ದೂರ ಅಂತರದ ಓಟಗಾರ್ತಿ ಅರ್ಚನಾ ಜಾಧವ್ ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ ಎಂದು ಅಥ್ಲೆಟಿಕ್ಸ್ ಇಂಟೆಗ್ರಿಟಿ ಯೂನಿಟ್ (ಎಐಯು) ಪ್ರಕಟಿಸಿದೆ.

20 ವರ್ಷ ವಯಸ್ಸಿನ ಜಾಧವ್ ಕೊನೆಯ ಸಲ– ಅಕ್ಟೋಬರ್‌ನಲ್ಲಿ– ದೆಹಲಿ ಮ್ಯಾರಥಾನ್‌ನಲ್ಲಿ ಭಾಗಿಯಾಗಿದ್ದರು. 1:20.21 ಸೆ.ಗಳಲ್ಲಿ ದೂರ ಪೂರೈಸಿ ನಾಲ್ಕನೇ ಸ್ಥಾನ ಗಳಿಸಿದ್ದರು.

ಪರೀಕ್ಷೆಗೆ ತೆಗೆದುಕೊಂಡ ಅವರ ಮಾದರಿಯಲ್ಲಿ ಒಕ್ಸಾಂಡ್ರೊಲೋನ್ ಎಂಬ ಮದ್ದಿನ ಅಂಶ ಪತ್ತೆಯಾಗಿದೆ. ಇದು ಆಂಡ್ರೊಜೆನ್ (ಪುರುಷ ಹಾರ್ಮೋನ್ ಅಂಶ) ಮತ್ತು ಸಿಂಥೆಟಿಕ್ ಅನಬಾಲಿಕ್ ಸ್ಟಿರಾಯಿಡ್ ಆಗಿದೆ ಎಂದು ಎಐಯು ತಿಳಿಸಿದೆ.